ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 37
ಸೆಪ್ಟೆಂಬರ್ 14, 2003 ಬೆಲೆ ರೂ. 3.00



ಆತ್ಮಹತ್ಯೆಯಲ್ಲ ಸಂಘರ್ಷ





ರಾಜ್ಯದಾದ್ಯಂತ ಜನ ಜಾಗೃತಿ ಜಾಥಾಗಳು



WTO ಬಡರಾಷ್ಟ್ರಗಳು ಅಡಿಯಾಳಾಗಬೇಕೆ?

ಅಯೋಧ್ಯಾ ವಿವಾದ: ಅಗೆದು ತೆಗೆದದ್ದು ಸತ್ಯವನ್ನೋ-ಮೋಸವನ್ನೋ?




ಸಿನಿಮಾ ನೈಜತೆಯಿಲ್ಲದ ನಂಜುಂಡಿ



ಮುಲಾಯಂ ಸರ್ಕಾರ ಮತ್ತು ಸವಾಲುಗಳು

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

43

ಹಿಂದಿನ ಸಂಚಿಕೆಯಲ್ಲಿ ರೈತಾಪಿ ಜನತೆಯತ್ತ ಧಾವಿಸಿದ ಜಯಪಾಲ್ ಸಿಂಗ್, ದಟ್ಟ ಕಾಡಿನಲ್ಲಿ ತೆಲಂಗಾಣ ಯೋಧರೊಂದಿಗೆ ನಿರಂತರ ಪಯಣ, ಅವರ ಹಿಂದೆ ಬಿದ್ದಿದ್ದ ಪೋಲೀಸರು, ಅವರ ಕಣ್ಣು ತಪ್ಪಿಸಲು ಬಿಡಾರಗಳ ನಿರಂತರ ಬದಲಾವಣೆಯ ಅವರ ಉಪಾಯಗಳು, ಗೆರಿಲ್ಲಾ ಯೋಧರ ಆತ್ಮಸ್ಥೈರ್ಯ ಮತ್ತು ಚಾತುರ್ಯ, ತ್ಯಾಗ ಮನೋಭಾವ ಇವು ಜಯಪಾಲರ ಗಮನ ಸೆಳೆದವು. ಮುಂದೆ ಓದಿ...



ಕನ್ನಡಕ್ಕೆ: ವಿಶ್ವ ಕುಂದಾಪುರ

ಮೌನ ಜೀವಿಗಳು ಈಗ ಮಿಲಿಟರಿ ತಜ್ಞರು

ಅಬ್ಬಾ, ನಾನು ಜೀವನದುದ್ದಕ್ಕೂ ಬಲ್ಲ ಶಾಂತ ಸ್ವಭಾವದ ರೈತ ಮಕ್ಕಳಿಗೂ ಈಗ ಕಾಣುತ್ತಿರುವುದಕ್ಕೂ ಅದೆಷ್ಟು ಅಜಾಗಜಾಂತರ!

ನಗರಗಳಿಂದ ಬರುವ ಹೊಸಬರನ್ನು ಕಂಡು, ಚುಕುಬುಕು ಸದ್ದು ಮಾಡುತ್ತಾ ಹೊಗೆಯುಗುಳುತ್ತಾ ಬರುವ ರೈಲುಬಂಡಿ ಕಂಡು ಆಶ್ಚರ್ಯ ಚಕಿತರಾಗುವ, ಕೇಕೆ ಹಾಕಿ ಕುಣಿದಾಡುವ ರೈತ ಮಕ್ಕಳಲ್ಲೆ ನಾನೂ ಒಬ್ಬನಾಗಿದ್ದೆ. ಎತ್ತಿನ ಬಂಡಿಗಳ ನೆರವಿಲ್ಲದೆ ಕಬ್ಬಿಣದ ಪಟ್ಟಿಗಳ ಮೇಲೆ ಸಾಗಿಬರುವ ರೈಲುಗಾಡಿ ನೋಡುವುದು ಅದೆಷ್ಟು ಸಂಭ್ರಮದ ಸಂಗತಿ ಬಾಲ್ಯದಲ್ಲಿ, ಅಲ್ಲವೆ? ರೈತ ಮಕ್ಕಳೆಲ್ಲ ದನಕರುಗಳನ್ನು ಮೇಯಲು ಕರೆದುಕೊಂಡು ಹೋಗಿ ಮತ್ತೆ ಹಟ್ಟಿಗೆ ಕರೆತರುವ ಕಾಯಕದಲ್ಲೇ ತಮ್ಮ ಬಾಲ್ಯವನ್ನು ಕಳೆಯುತ್ತಾರೆ. ಇತರರು ಅವರ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾರೆ. ರಕ್ತ ಬೆವರು ಹರಿಸಿ ಬೆಳೆದ ಫಸಲು ಅವರದ್ದಾಗಿರುವುದಿಲ್ಲ, ಅವರಿಗೆ ಎಷ್ಟು ಬೆಳೆ ಇರಬೇಕೆಂಬುದನ್ನು ಬೇರೆಯವರು ನಿರ್ಧರಿಸುತ್ತಾರೆ. ಅವರು ಊಟ ಮಾಡಬೇಕೇ, ಹಸಿವಿನಿಂದ ನರಳಬೇಕೇ ಎನ್ನುವುದನ್ನು ನಿರ್ಧರಿಸುವವರು ಬೇರೆಯವರು. ಅವರು ಬದುಕಬೇಕೇ ಸಾಯಬೇಕೇ ಎನ್ನುವುದನ್ನು ಕೂಡ ಬೇರೆಯವರು ನಿರ್ಧರಿಸುತ್ತಾರೆ. ರೈತ ಮಕ್ಕಳ ಶೋಷಣೆಯ ಪರಿಯಿದು.

ಆದರೆ, ಇಲ್ಲೊಬ್ಬ ರೈತ ಬಾಲಕನಿದ್ದಾನೆ. 'ಎರಡು ವರ್ಷಗಳ ಹಿಂದೆ ಪಕ್ಷ ನನ್ನನ್ನು ದೂತನನ್ನಾಗಿ ನೇಮಿಸುವವರೆಗೆ ನಾನು ಯಾವತ್ತೂ ಪಟ್ಟಣವನ್ನಾಗಲೀ ರೈಲನ್ನಾಗಲೀ ನೋಡಿಯೇ ಇರಲಿಲ್ಲ' ಎಂದು ಆತ ನನಗೆ ಆಮೇಲೆ ಹೇಳಿದ.

ಈ ಬಾಲಕ ತಾನೇ ಸ್ವತಃ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾನೆ. ತನ್ನ ಉಪಕ್ರಮಗಳನ್ನು ಬಳಸಿ ವಿವೇಚನೆಯ ಹಾಗೂ ಪ್ರಬಲ ನಿರ್ಧಾರಗಳನ್ನು ಕೈಗೊಳ್ಳುತ್ತಾನೆ. ಇದೇ ನಾನು ಹೇಳಿದ ಅಜಗಜ ವ್ಯತ್ಯಾಸ.

ಗಾಯಗೊಂಡ ಕೈ-ಕಾಲುಗಳಿಂದ ರಕ್ತ ಸುರಿಯುವುದರ ನಡುವೆಯೂ ಮುಳ್ಳುಕಂಟಿಗಳ ಪೊದೆಗಳ ಮಧ್ಯದಿಂದ ನಡೆದುಹೋಗುವಾಗ, ನನ್ನ ಬತ್ತಿದ ಉತ್ಸಾಹ ಮಾಯವಾಗಿ ಗೆಲವಿನ ಕಳೆ ಮೂಡಿದಂತೆ ಭಾಸವಾಯಿತು. ಇಲ್ಲಿ ನಮ್ಮ ಹೋರಾಟದ ವೇಳೆ ನಾವು ಯಾವುದೇ ತಪ್ಪುಗಳನ್ನು ಮಾಡಿರಬಹುದು, ದೊಡ್ಡ ಪ್ರಮಾದಗಳನ್ನೇ ಮಾಡಿರಬಹುದು, ಆದರೆ ಒಂದು ವಿಷಯವಂತೂ ಸ್ಪಷ್ಟ. ದುಡಿಯುವ ವರ್ಗದ ಒಂದು ಪಕ್ಷವಾಗಿ ನಾವು ಇಲ್ಲಿನ ರೈತರನ್ನು ತಮ್ಮ ಸ್ವಂತ ನಿರ್ಧಾರ ಕೈಗೊಳ್ಳುವ ಹಾದಿಗೆ ಹಚ್ಚಿದ್ದೇವೆ, ನಾವು ಅವರ ಉಪಕ್ರಮಗಳನ್ನು ಚಿಂತನೆಯ ಕಾಲುವೆಗಳಾಗಿ ಹರಿಯಲು ಬಿಟ್ಟೆವು. ಈ ಚಿಂತನೆ ಆರಂಭದಲ್ಲಿ ಪೂರ್ಣ ಪರಿಪಕ್ವ ಆಗಿರಲಿಕ್ಕಿಲ್ಲ; ಅವರು ಎಡವಿ ಸ್ವಲ್ಪ ಮಟ್ಟಿಗೆ ಹಳ್ಳಕ್ಕೆ ಬೀಳಬಹುದು-ಒಂದಂತೂ ನಿಜ, ಈ ರೈತರು ಈಗ ಕ್ರಿಯಾಶೀಲರಾಗಿದ್ದಾರೆ ಮತ್ತು ಯೋಚಿಸುತ್ತಿದ್ದಾರೆ.

ದೀರ್ಘ ಕಾಲದಿಂದ ಸಂಕೋಲೆಯಿಂದ ಬಿಗಿಯಲಾಗಿದ್ದ ಚಿಂತನೆ ಮತ್ತು ಕ್ರಿಯೆಯ ಪ್ರಕ್ರಿಯೆ ಈಗ ಸ್ವಾತಂತ್ರ್ಯಗೊಂಡಿದೆ. ನಾವು ಇಟ್ಟ ಪ್ರತಿಯೊಂದು ಹೆಜ್ಜೆಗೂ ಜೀವಾಪಾಯವಿರುವ ಪ್ರದೇಶದಲ್ಲಿ ನಮ್ಮನ್ನು ಮುನ್ನಡೆಸುತ್ತಿರುವ ಈ ಹುಡುಗನ ರೀತಿಯ ಸಾವಿರ ಬಾಲಕರು ತೆಲಂಗಾಣದಲ್ಲಿ ಎದ್ದುಬಂದರೆ, ನಮ್ಮ ಜಯದ ಬಗ್ಗೆ ಸಂಶಯವೇ ಬೇಕಾಗಿಲ್ಲ.

ಮುಂಬರುವ ತಿಂಗಳಲ್ಲಿ ಇಂಥ ಅನೇಕ ವೀರ ಬಾಲಕರನ್ನು ನಾನು ನೋಡಿದೆ. ನಾವು ಬಿತ್ತಿದ ಬೀಜ ಇಷ್ಟೊಂದು ಉತ್ಸಾಹಿ, ಆತ್ಮವಿಶ್ವಾಸ ತುಂಬಿದ ಯುವಜನರಾಗಿ ಅರಳಿದ್ದು ಕಂಡು ನನಗೆ ಸಂತೋಷ. ಇಂಥ ಒಂದು ಪಕ್ಷದ ಸದಸ್ಯನಾಗಿರುವುದಕ್ಕೆ, ಇಂಥ ಒಂದು ನೆಲದ ಜತೆ ಬಾಂಧವ್ಯ ಹೊಂದಿರುವುದಕ್ಕೆ ನನಗೆ ಹೆಮ್ಮೆಯಾಯಿತು.

ನಾವೀಗ ನಡುವೆ ಕೇವಲ ಅರ್ಧಗಂಟೆ ವಿರಾಮ ಪಡೆದು ಸತತ ಎಂಟು ಗಂಟೆ ಕಾಲ ನಡೆದಿದ್ದೆವು. ನನ್ನ ಕಾಲುಗಳು ನೋಯತೊಡಗಿದ್ದವು.

"ನಿಮಗೆ ಇದೆಲ್ಲ ರೂಢಿಯಾಗುತ್ತದೆ. ನಾವು ಮೊದಲ ಬಾರಿ ಬೆಟ್ಟ ಹತ್ತಿ ಇಳಿಯಲು ಆರಂಭಿಸಿದಾಗ ನಮಗೂ ಇದೇ ರೀತಿ ಅನುಭವವಾಗಿತ್ತು. ನಾನು ಈಗ ರಾತ್ರಿ ಬಿಟ್ಟು ರಾತ್ರಿ 30 ಮೈಲಿ ನಡೆಯುತ್ತೇನೆ, ಸಂಪರ್ಕಗಳು ಮತ್ತು ಪತ್ರಗಳಿಗಾಗಿ. ಆದರೂ ನನಗೆ ಆಯಾಸವಾಗುವುದಿಲ್ಲ. ನಿಮಗೂ ಇದು ಅಭ್ಯಾಸವಾಗುತ್ತದೆ" ಯುವ ಕ್ರಾಂತಿಕಾರಿ ಹೀಗೆಂದು ಅಭಿಪ್ರಾಯಪಟ್ಟ. ಸಮೀಪದಲ್ಲೆ ಇದ್ದ ಕೊಳವೊಂದರಿಂದ ನೀರು ತಂದುಕೊಟ್ಟು ನೆರವಾದ.

> **ಗಾಂಧೀಜಿಯ ನೂಲುವ ಚರಕದ ಸದ್ದನ್ನಷ್ಟೇ ಕೇಳಿಸಿಕೊಂಡಿದ್ದ ಜನರು, ಹಿಂದೆ ಯಾವತ್ತೂ ರೈಫಲ್ ನೋಡಿಯೇ ಇಲ್ಲದ ಜನರು, ಸದಾ ತಲೆ ತಗ್ಗಿಸಿಯೇ ಜೀವನ ನಡೆಸಿದ ಜನರು... ಹೌದು ಇದೇ ಜನರು ಈಗ ಮಿಲಿಟರಿ ತಜ್ಞರಾಗಿ ಪರಿವರ್ತನೆಗೊಂಡಿದ್ದರು! ಮಿಲಿಟರಿ ಹೋರಾಟ ತಂತ್ರಗಳ ತಜ್ಞರಾಗಿದ್ದರು.**

"ನೀವು ಇಲ್ಲೇ ಕಾಯುತ್ತಿರಿ. ಆಕ್ರಮಣ ನಡೆಸುವ ಸ್ಥಳವಾದ ಕೊಳಕ್ಕೆ ನೀವು ಹೋಗುವುದು ಸುರಕ್ಷಿತವಲ್ಲ" ಎಂದು ಹೋಗಿ ನೀರು ತಂದಿದ್ದ.

ಜನರು ಆಗ..... ಈಗ

ಓಹೋ, ಈತನೊಬ್ಬ ಮಿಲಿಟರಿ ತಜ್ಞ! ಎಂದು ನನ್ನಷ್ಟಕ್ಕೆ ನಾನು ಯೋಚಿಸಿದೆ. ಅದರಲ್ಲೂ ಮಿಲಿಟರಿ ಅಕಾಡೆಮಿಗೆ ಯಾವತ್ತೂ ಹೋಗದೆಯೇ ಮಿಲಿಟರಿ ತಜ್ಞನಾಗಿದ್ದ. ಹೌದು, ಜೀವನ, ಜೀವನದ ಕಟುವಾಸ್ತವಗಳು, ವೈರಿಯ ಸತತ ಹಾಗೂ ದಯಾಹೀನ ದಬ್ಬಾಳಿಕೆ ಇಡೀ ಜನತೆಯನ್ನು ಮಿಲಿಟರಿ ತಜ್ಞರನ್ನಾಗಿ ಪರಿವರ್ತಿಸುತ್ತದೆ. ಕೆಲವೇ ವರ್ಷಗಳ ಹಿಂದೆ ಗಾಂಧೀಜಿಯ ಚರಕದ ನೂಲುವ ಸದ್ದನ್ನಷ್ಟೇ ಕೇಳುತ್ತಿದ್ದ ಜನರು, ಹಿಂದೆ ಯಾವತ್ತೂ ರೈಫಲ್ ನೋಡಿಯೇ ಇಲ್ಲದ ಜನರು, ತಗ್ಗಿಬಗ್ಗಿ ಜೀವನ ನಡೆಸಿದವರು, 'ದೇಶಮುಖರು' ಮತ್ತು ಭೂಮಾಲಿಕರಿಗೆ ಗೌರವ ಸಲ್ಲಿಸಲು ಬಾಗಿ ನೆಲಕ್ಕೆ ಹಣೆ ಬಡಿಯುತ್ತಿದ್ದ ಜನರು... ಹೌದು ಇದೇ ಜನರು ಈಗ ಮಿಲಿಟರಿ ಹೋರಾಟ ತಂತ್ರಗಳ ತಜ್ಞರಾಗಿದ್ದರು.

ಶೋಷಣೆಗೊಳಗಾದ ಇಡೀ ತೆಲುಗು ಜನಾಂಗವೇ ಈಗ ಮುನ್ನಡೆಯುತ್ತಿತ್ತು. ಅಸಂಘಟಿತ ಜನ ಸಮುದಾಯದ ಕ್ರಾಂತಿಕಾರಿ ನಡೆಯ ಪ್ರಕ್ರಿಯೆಯಲ್ಲಿ, ಮತ್ತು ಅಸ್ಪಷ್ಟ ಹೋರಾಟ ಕಲೆಯಲ್ಲಿ ನಮ್ಮ ಸಂಭಾವ್ಯ ಕ್ರಾಂತಿಕಾರಿ ಮಿಲಿಟರಿ ತಜ್ಞರಾಗಿ ಅವರು ಮೊದಲಿಗೆ ಸಂಘಟಿತರಾಗಿ ಬೆಳೆಯುತ್ತಿದ್ದರು.

ಸತ್ಯದತ್ತ ಅವರು ಬೆಳೆಯುತ್ತಿದ್ದರು. ಅದನ್ನು ಹುಡುಕಿಯೇ ತೀರಲಿದ್ದರು. ಮೌನವಾಗಿ, ನಿಷ್ಕ್ರಿಯರಾಗಿರುತ್ತಿದ್ದ ಜನರ ನಡುವಿನಿಂದ ಕಸುವು ತುಂಬಿದ ಕ್ರಾಂತಿಕಾರಿ ಸೈನಿಕರನ್ನು ಸೃಷ್ಟಿಸಿದ್ದು ದುಡಿಮೆಗಾರರ ಪಕ್ಷದ ನಿಜವಾದ ಲಾಭವಾಗಿತ್ತು. ಮತ್ತೊಮ್ಮೆ ನನ್ನ ಪಕ್ಷ ಮತ್ತು ಜನತೆಯ ಬಗ್ಗೆ ಹೆಮ್ಮೆಯೆನಿಸಿತು. ಈ ಅಹ್ಲಾದಕರ ಕ್ರಾಂತಿಕಾರಿ ಭಾವನೆಯಿಂದಾಗಿ ನೋವೆಲ್ಲ ಮಂಗಮಾಯವಾಯಿತು.

ಗೆರಿಲ್ಲಾಗಳ ಕರೆ- ಸನ್ನೆ

ಇದೀಗ ನಮ್ಮ ಹತ್ತು ತಾಸುಗಳ ನಡಿಗೆ ಪೂರ್ಣಗೊಂಡಿತ್ತು. ಕ್ರಮೇಣ ಮುಂಜಾವು ಸಮೀಪಿಸುತ್ತಿತ್ತು. ನಮ್ಮ 'ದೂತ' ನಿಲ್ಲುವಂತೆ ಸೂಚಿಸಿದ.

"ನೀವು ಈ ಬೆಟ್ಟ ಹತ್ತಿ ದೊಡ್ಡ ಬಂಡೆಯ ಹಿಂದೆ ಕುಳಿತಿರಿ. ನಾನು ಹೋಗಿ ತಂಡವನ್ನು ಕರೆಯುತ್ತೇನೆ" ಎಂದು ಹೇಳಿದ.

ಸೂರ್ಯ ಮೇಲೇರುತ್ತಿದ್ದಂತೆ ಮಂದಗೊಳ್ಳುತ್ತಿದ್ದ ಚಂದ್ರನ ಕಿರಣಗಳ ಬೆಳಕಿನಲ್ಲಿ ಸಾಗಿ ಹೋಗುತ್ತಿದ್ದ ಹುಡುಗನ ನೆರಳನ್ನು ಬಂಡೆಯ ಮರೆಯಿಂದ ನಾವು ಕಂಡೆವು. ಭಯಾನಕ ನೀರವ ಮೌನದಲ್ಲಿ ಹುಡುಗ ಸಾಗಿಹೋಗುತ್ತಿದ್ದ. ನಮ್ಮ ದೂತನ ಪುಟ್ಟ ನೆರಳು ಮರೆಯಾದ ದಿಕ್ಕಿನಿಂದ ಆಡು ಕೂಗಿದ ಸದ್ದು ಕೇಳಿಬಂತು. 'ಬಹುಶಃ ಆಡಿನ ಹಿಂಡು ಇರಬೇಕು, ಅಲ್ಲವೇ' ಎಂದು ನಾನು ಸಾಗರ್‌ರನ್ನು ಪ್ರಶ್ನಿಸಿದೆ. ಅವರು ಸುಮ್ಮನೆ ನಕ್ಕರು. "ಇಲ್ಲ ಇಲ್ಲ. ಅದು ಕರೆಯುವ ಸಿಗ್ನಲ್. ನಮ್ಮ ಸಂಗಾತಿ ತಂಡವನ್ನು ಕರೆಯುತ್ತಿದ್ದಾರೆ" ಎಂದು ವಿವರಿಸಿದರು. ಆಡಿನ ಕೂಗಿನ ಸದ್ದಿನ ಬೆನ್ನಲ್ಲೇ ಅಪರಿಚಿತ ಪ್ರಾಣಿಯೊಂದರ ಕೂಗಿನ ಸದ್ದು ಕೇಳಿಸಿತು. ಅದು ಮಂಗ ತನ್ನ ತಂಡಕ್ಕೆ ಕಳಿಸಿದ ಕರೆ ಸಿಗ್ನಲ್.

ಗೆರಿಲ್ಲಾ 'ಕರೆ ಸಿಗ್ನಲ್'; ಅದೆಷ್ಟು ಮಹತ್ತರ!

ಮಿಲಿಟರಿ ಇತಿಹಾಸದಲ್ಲಿ ದಂತಕತೆಯಾದ ಗೆರಿಲ್ಲಾ ಒಬ್ಬರ 'ಕರೆ ಸಿಗ್ನಲ್' ಅನ್ನು ನಾನು ಮೊದಲ ಬಾರಿಗೆ ಕೇಳಿದಾಗ ನಾನೆಂದುಕೊಂಡೆ ಅನ್ನುವುದನ್ನು ಹೇಳದಿದ್ದರೆ ಮಹಾನ್ ಅನುಭೂತಿಯೊಂದನ್ನು ಕೈಬಿಟ್ಟಂತೆ ಆಗುತ್ತದೆ. ಬಹಳಷ್ಟು ಜನರಿಗೆ ಅದು ತಾವು ಪುಸ್ತಕದಲ್ಲಿ ಓದಿದ, ಆದರೆ ಸ್ವತಃ ಅನುಭವಿಸದ ರೋಮಾಂಟಿಕ್ ಕರೆ ಅಷ್ಟೆ. ಆದರೆ ನನಗಾದರೋ ಇದು ಕನಸು ನನಸಾದ ಸಂಗತಿ. ನಾನು ಕಂಡ ಕನಸನ್ನು ಸಾಕಾರಗೊಳಿಸಿದ ಕ್ಷಣವದು.

ನಾವು ನಡೆಸುತ್ತಿದ್ದ ನಿರ್ದಿಷ್ಟ ಹೋರಾಟದಲ್ಲಿ ಅನುಮಾನಕ್ಕೆ ಆಸ್ಪದವೇ ಇಲ್ಲದ ರೀತಿಯಲ್ಲಿ ಬಹಳಷ್ಟು ಪ್ರಯೋಜನಕಾರಿಯಾಗಿತ್ತು. ಈತನ ಕರೆ ಸಿಗ್ನಲ್‌ನ ನಿಯಮದ ದಕ್ಷತೆ. ಇದಕ್ಕಾಗಿ ನಮ್ಮ ಬಳಿ ರೇಡಿಯೋ ಸೆಟ್ ಇದ್ದಾಗ ಅದನ್ನು (ಕರೆಸಿಗ್ನಲ್) ಬಳಸುವ ಬಲವಂತ ಇಲ್ಲ ಅಥವಾ ತಂಡಗಳ ಪರಸ್ಪರ ಸಂಪರ್ಕಕ್ಕೆ ಏಕೈಕ ಸಂಭಾವ್ಯ ಸಾಧನವಾದ ಅದನ್ನು ಎಸೆಯುವಂತೆಯೂ ಇಲ್ಲ. ಈತನ ಈ ಸಂದೇಶ ಸಿಗ್ನಲ್ ವರ್ತಮಾನ ಹಾಗೂ ಭವಿಷ್ಯದ ಒಂದು ಇಡೀ ದಿಗಂತವನ್ನು ಅನಾವರಣಗೊಳಿಸಿತು.

(ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಸೆಪ್ಟೆಂಬರ್ 9,2003**
  ಬೆಂಗಳೂರಿನಲ್ಲಿ ಸಿಪಿಐ(ಎಂ) ರ್‍ಯಾಲಿ.
  ಬೆಳಿಗ್ಗೆ 11.30 ಕ್ಕೆ ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ
  ಮಧ್ಯಾಹ್ನ 1 ಗಂಟೆಗೆ ಮಲ್ಲೇಶ್ವರಂ ಮೈದಾನದಲ್ಲಿ ಬಹಿರಂಗ ಸಭೆ
  ಮುಖ್ಯ ಅತಿಥಿ: ಪ್ರಕಾಶ್ ಕಾರಟ್, ಪಿ.ಬಿ. ಸದಸ್ಯರು,ಅಧ್ಯಕ್ಷತೆ: ಜಿ.ಎನ್.ನಾಗರಾಜ್, ರಾಜ್ಯ ಕಾರ್ಯದರ್ಶಿ
- **ಸೆಪ್ಟೆಂಬರ್ 10, 2003**
  ಕ್ಯಾನ್‌ಕುನ್‌ನಲ್ಲಿ ನಡೆಯಲಿರುವ WTO ಸಭೆಯಲ್ಲಿ ಅಂಗೀಕರಿಸಲಿರುವ ಜನ ವಿರೋಧಿ ಅಂಶಗಳ ವಿರುದ್ಧ ರಾಜ್ಯ ಮಟ್ಟದ ಪ್ರತಿಭಟನಾ ಪ್ರದರ್ಶನ.
  ಸ್ಥಳ : ಬಸವೇಶ್ವರ ಸರ್ಕಲ್, ಬೆಂಗಳೂರು
  ಬೆಳಿಗ್ಗೆ: 11.30 ಕ್ಕೆ ಚಿಕ್ಕಲಾಲ್‌ಬಾಗ್‌ನಿಂದ ಮೆರವಣಿಗೆ ಆರಂಭ
- **ಸೆಪ್ಟೆಂಬರ್ 13, 2003**
  ಮೇರಿ ದೇವಾಸಿಯಾ ಸ್ಮರಣೆ
  ರಾಜ್ಯ ಸರ್ಕಾರಿ ನೌಕರರ ಚಳುವಳಿಯ ಸಮರಶೀಲ ನಾಯಕಿ ಮೇರಿ ದೇವಾಸಿಯಾ ನಿಧನರಾಗಿ ಹತ್ತು ವರ್ಷಗಳಾದ ಸಂದರ್ಭದಲ್ಲಿ ಸ್ಮರಣೆ.
- **ಸೆಪ್ಟೆಂಬರ್ 13, 2003**
  ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜನವಿರೋಧಿ ನೀತಿ ವಿರುದ್ಧ ಕುಂದಾಪುರ ತಾಲ್ಲೂಕಿನಾದ್ಯಂತ ಜಾಥಾ
- **ಸೆಪ್ಟೆಂಬರ್ 14, 2003**
  ಕೆಲಸ ಕಳೆದುಕೊಂಡ ಗ್ರಾಮೀಣ ಕೃಪಾಂಕ ನೌಕರರ ರಾಜ್ಯ ಸಮಾವೇಶ
  ದೇವಾಂಗ ಕಲ್ಯಾಣ ಮಂಟಪ ಸಂಪಂಗಿರಾಮ ನಗರ, ಬೆಂಗಳೂರು
  ಬೆಳಿಗ್ಗೆ 11 ಕ್ಕೆ
  ಉದ್ಘಾಟಕರು : ಎಂ.ಆರ್.ಅಪ್ಪನ್ ಗೌರವಾಧ್ಯಕ್ಷರು, ಅಖಿಲ ಭಾರತ ಸರಕಾರಿ ನೌಕರರ ಒಕ್ಕೂಟ
- **ಸೆಪ್ಟೆಂಬರ್ 16, 17, 2003**
  ಬಳ್ಳಾರಿ ಜಿಲ್ಲಾ ಸಿಐಟಿಯು ಸಮ್ಮೇಳನ ಹೊಸಪೇಟೆ
- **ಸೆಪ್ಟೆಂಬರ್ 21,2003**
  ಮಂಡ್ಯ ಜಿಲ್ಲಾ ಸಿಐಟಿಯು ಸಮ್ಮೇಳನ ಮಂಡ್ಯ
- **ಸೆಪ್ಟೆಂಬರ್ 27-28, 2003**
  ಬೆಂಗಳೂರು ಜಿಲ್ಲಾ ಸಿಐಟಿಯು ಸಮ್ಮೇಳನ, ಬೆಂಗಳೂರು

ಹೈಕೋರ್ಟ್ ಪೀಠ : ಶೀಘ್ರ ಪುನರ್‌ವಿಮರ್ಶೆ ಅಗತ್ಯ

ಬೆಂಗಳೂರಿನ ಹೊರಗೆ, ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್‌ನ ಪೀಠ ಸ್ಥಾಪನೆಯಾಗಬೇಕೆಂಬ ಬೇಡಿಕೆಗಾಗಿ ಚಳುವಳಿ ವ್ಯಾಪಕವಾಗುತ್ತಿದೆ. ದಿನದಿನವೂ ವಿವಿಧ ಸ್ವರೂಪ ಪಡೆಯುತ್ತಾ, ಗುಲ್ಬರ್ಗಾ, ಧಾರವಾಡ-ಹುಬ್ಬಳ್ಳಿ ಮುಂತಾದೆಡೆ 'ಬಂದ್'ಗಳನ್ನು ನಡೆಸಲಾಗಿದೆ.

ಈ ನಡುವೆ ಮುಖ್ಯಮಂತ್ರಿಗಳ ಹಾಗೂ ವಿರೋಧ ಪಕ್ಷಗಳ ಮುಖಂಡರುಗಳು ಮುಖ್ಯ ನ್ಯಾಯಮೂರ್ತಿ ಶ್ರೀ ಜೈನ್‌ರವರೊಂದಿಗೆ ಸಮಾಲೋಚಿಸಿ, ಅವರ ನಿರ್ಧಾರವನ್ನು ಬದಲಾಯಿಸಲು ಕೋರಿದ ಬಳಿಕ, ಪುನರ್‌ಪರಿಶೀಲಿಸಲು ಒಪ್ಪಿದ್ದಾರೆ. ಚಳುವಳಿ ಕೈಬಿಡಲು ಸೂಚಿಸಿದ್ದಾರೆ. ಆದರೆ ಈ ಮಾತು ಚಳುವಳಿಯನ್ನು ನಿಲ್ಲಿಸಲು ಆಗಿಲ್ಲ. ಆಗಲಾರದು ಕೂಡ.



ರಾಜ್ಯದ ಜನ ಹತ್ತಾರು ಸಮಸ್ಯೆಗಳಿಂದ ತತ್ತರಿಸುತ್ತಿರುವಾಗ ಈ ಪ್ರಶ್ನೆಯು ಎದ್ದಿರುವುದರ ನಿಜ ಕಾರಣವೇನು ಎಂಬ ಪ್ರಶ್ನೆ ಏಳುವುದು ಸಹಜ. ಜನರ ನಿತ್ಯ ವ್ಯವಹಾರಕ್ಕೆ ಸಹಕಾರಿಯಾಗುವಂತಹ, ಜನತೆ ಹಾಗೂ ಜನಪ್ರತಿನಿಧಿಗಳು - ಸರ್ಕಾರದ ಇಚ್ಛೆ ಇರುವಾಗ ತಾಂತ್ರಿಕ ಕಾರಣಗಳನ್ನು ಮುಂದೊಡ್ಡಿ ಹೈಕೋರ್ಟ್ ಪೀಠ ನಿರಾಕರಿಸುವುದು ಸರಿಯಲ್ಲ. ಆದ್ದರಿಂದ ಕೂಡಲೇ ಮುಖ್ಯ ನ್ಯಾಯಮೂರ್ತಿಗಳು ಪುನರ್‌ಪರಿಶೀಲಿಸಿ ಪೀಠ ಆರಂಭಿಸಲು ಮುಂದಾಗಬೇಕಿದೆ.

ಈ ವಾರ ಕರ್ನಾಟಕ – ಒಂದು ನೋಟ – ಎಸ್.ವೈ.ಗುರುಶಾಂತ್

ವಿದ್ಯುತ್ ದರ ಹೆಚ್ಚಳದ ಕೆಪಿಟಿಸಿಎಲ್ ವಾದ ಆಲಿಸುವಾಗ ಸಾರ್ವಜನಿಕ ಹೇಳಿಕೆಗೂ ಅವಕಾಶವಿರಬೇಕು

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು (ಕೆಇಆರ್‌ಸಿ) ಪ್ರಕಟಿಸಿದ ವಿದ್ಯುತ್ ದರಗಳು ತನಗೆ ಒಪ್ಪಿಗೆ ಇಲ್ಲವೆಂದೂ, ಅವುಗಳನ್ನು ಇನ್ನೂ ಹೆಚ್ಚಿಸಬೇಕೆಂದು ಕೆಪಿಟಿಸಿಎಲ್ ಹೈಕೋರ್ಟ್‌ನ ಮೊರೆ ಹೋಗಿತ್ತು. ಈ ವಿಷಯದಲ್ಲಿ ಕೆಇಆರ್‌ಸಿಯೇ ತೀರ್ಮಾನ ಕೈಗೊಳ್ಳಬೇಕಿರುವುದರಿಂದ ಅದರೊಂದಿಗೆ ಚರ್ಚಿಸಲು ಕೆಪಿಟಿಸಿಎಲ್ ಗೆ ಸೂಚಿಸಿದೆ. ಅದರಂತೆ ನಾಲ್ಕು 'ಎಸ್ಕಾಂ' ಗಳೂ ಕೆಇಆರ್‌ಸಿಯ ಮುಂದೆ ಅರ್ಜಿ ಹಾಕಿಕೊಂಡಿವೆ. ಈ ಅರ್ಜಿಗಳನ್ನು ಚರ್ಚೆಗೆ ಸ್ವೀಕರಿಸಬೇಕೆ ಬೇಡವೇ ಎಂದು ಕೆಇಆರ್‌ಸಿಯು 'ಎಸ್ಕಾಂ'ಗಳ ವಾದವನ್ನು ಆಲಿಸಲಿದೆ. ಅರ್ಜಿಗಳು ಸ್ವೀಕೃತಿಯಾದ ಕೂಡಲೇ ದರಗಳ ಹೆಚ್ಚಳದ ಕುರಿತು ಚರ್ಚೆ ಆರಂಭವಾಗಲಿದೆ.

ನಾಲ್ಕು ಎಸ್ಕಾಂಗಳ ಅರ್ಜಿಗಳನ್ನು ಅಂಗೀಕರಿಸುವುದಕ್ಕಾಗಿ ನಡೆಯುವ ವಾದ ಆಲಿಕೆಯಲ್ಲಿಯ ಸಂದರ್ಭದಲ್ಲೇ ಸಾರ್ವಜನಿಕ ಅಹವಾಲು, ಆಕ್ಷೇಪಣೆ ಕೇಳುವುದು ಅಗತ್ಯ. ಆದ್ದರಿಂದ ಸಿಪಿಐ(ಎಂ) ಮತ್ತು ರೈತ, ಕೂಲಿಕಾರ, ಪಂಪ್‌ಸೆಟ್ ಬಳಕೆದಾರರ ಸಂಘ ಮುಂತಾದ ಸಾಮೂಹಿಕ ಸಂಘಟನೆಗಳು ಮಧ್ಯಪ್ರವೇಶಿಸಿ, ತಮ್ಮ ಅಭಿಪ್ರಾಯವನ್ನು ಕೇಳಲು ಈ ವಾದ ಆಲಿಕೆಯಲ್ಲಿ ಅವಕಾಶ ಕಲ್ಪಿಸಲೇಬೇಕೆಂದು ಕೋರಲು ಬಯಸಿವೆ. ಕೆಇಆರ್‌ಸಿ ಯಾವುದೇ ಕಾರಣಕ್ಕೂ 'ಎಸ್ಕಾಂ'ಗಳ ಜೊತೆ ಮಾತ್ರ ಚರ್ಚಿಸಿ ನಿರ್ಧಾರ ಕೈಗೊಳ್ಳಬಾರದು. ಅದಕ್ಕಾಗಿ ಜನತೆಯ ಎಚ್ಚರ, ಕ್ರಮಗಳು ಅಗತ್ಯ.

ಬಡ್ಡಿ ನಿಷೇಧ ಸುಗ್ರೀವಾಜ್ಞೆ : ಕೃಷಿಯನ್ನು ಬದುಕಿಸೀತೆ ?

ರೈತರಲ್ಲಿ ಆತ್ಮವಿಶ್ವಾಸ ಹುಟ್ಟಿಸಿ, ಆತ್ಮಹತ್ಯೆಯನ್ನು ತಪ್ಪಿಸಬೇಕೆಂದೇ ಪ್ರಕಟಿಸಲಾದ ಸರ್ಕಾರದ ಸೂತ್ರಗಳೆದುರಲ್ಲಿಯೂ ರೈತರ ಆತ್ಮಹತ್ಯೆಗಳು ಸತತವಾಗಿ ಮುಂದುವರಿದೇ ಇದೆ. ದಿನಕ್ಕೆ ನಾಲ್ಕು, ಆರು-ಎಂಟು ಹೀಗೆ.... ಮುಖ್ಯಮಂತ್ರಿಗಳ ತವರು ಜಿಲ್ಲೆ, ತಾಲೂಕಿನಲ್ಲೇ. ಕನಕಪುರ, ...ರಗುಪ್ಪ, ಚಿತ್ರದುರ್ಗ, ಹಾಸನ, ಕೊಡಗು, ಕೋಲಾರ.... ...ಂಗೆ ಹಬ್ಬುತ್ತಲೇ ಇದೆ. ಕಳೆದ ಒಂದು ತಿಂಗಳಲ್ಲಿಯೇ 90 ಕ್ಕೂ ಅಧಿಕ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂಬ ವರದಿಯಿದೆ.

ಇದು ಬಹಳ ಆತಂಕದ, ದಿಗಿಲು ಹುಟ್ಟಿಸುವ ಸ್ಥಿತಿ. ...ಯೋಜನೆ-ಸೂತ್ರಗಳು-ಸಾಂತ್ವನದ ಮಾತುಗಳೇನೇ ಇರಲಿ ಪರಿಸ್ಥಿತಿ ಮಾತ್ರ ಘೋರ. ರೈತನ ಸ್ಥಿತಿ ಚಿಂತಾಜನಕ. ಇಂತಹ ಸ್ಥಿತಿಯು ಚುನಾವಣೆಯ ವರುಷದಲ್ಲಿ ಒಂದು ಪ್ರಮುಖ ರಾಜಕೀಯ ಪ್ರಶ್ನೆಯಾಗಿ ಬಿಟ್ಟರೆ ಎಂಬ ದಿಗಿಲು ಎಸ್.ಎಂ.ಕೃಷ್ಣರ ಸರ್ಕಾರ ಹಾಗೂ ಪಕ್ಷವನ್ನು ಕಾಡಿದೆ. ಅದಕ್ಕಾಗಿ ಕೆಲವು ವರಸೆಗಳಿಗೆ ಇಳಿದಿದೆ.

ಈ ವಾರದಲ್ಲಿ ಕರ್ನಾಟಕ ದುಬಾರಿ ಬಡ್ಡಿ ನಿಷೇಧ ಸುಗ್ರೀವಾಜ್ಞೆ 2003 ನ್ನು ಸರ್ಕಾರ ಹೊರಡಿಸಿದೆ. ರೈತರು ಖಾಸಗಿ ಲೇವಾದೇವಿಗಾರರ ಸಾಲ ವಸೂಲಾತಿ ಕಿರುಕುಳ-ಬಾಧೆಯನ್ನು ...ಳಲಾಗುತ್ತಿಲ್ಲ. ಆತ್ಮಹತ್ಯೆಗೆ ಸಾಹುಕಾರರ ಈ ಸಾಲ-ಒತ್ತಡ, ...ಂಸೆ, ಅವಮಾನಗಳು ಕಾರಣ. ದುಬಾರಿ ಬಡ್ಡಿಯ ಸುಲಿಗೆ ...ರೆ. ಈ ಅಂಶ ಸರ್ಕಾರ ಕೊನೆಗೆ ಪರಿಗಣಿಸಿದೆ. ಸುಗ್ರೀವಾಜ್ಞೆಯ ಪ್ರಕಾರ ಅಂತಹ ಲೇವಾದೇವಿಗಾರರಿಗೆ ಮೂರು ...ಂಗಳ ಜೈಲುವಾಸ ಮತ್ತು 30 ಸಾವಿರ ದಂಡ. ಇದರಂತೆ ಶೇ 3 ...ಷ್ಟು ಬಡ್ಡಿ ಕಡಿಮೆಯಾಗುವುದು ಎಂಬ ಒಂದು ಲೆಕ್ಕಾಚಾರ. ...ಜ. ಇವೆಲ್ಲವೂ ಜಾರಿಕೊಳ್ಳಲು. ದೃಢ ನಿರ್ಧಾರ ಸರ್ಕಾರದಲ್ಲಿ ...ರಬೇಕು. ಈ ಲೇವಾದೇವಿಗಾರರು ಗ್ರಾಮಾಂತರದಲ್ಲಿ ...ಣಬಲ-ಅಧಿಕಾರದ ಬಲ ಇರುವವರು. ಬಹುತೇಕ ಆಳುವ ...ಕ್ಷದ ಅಥವಾ ಅಧಿಕಾರಿಶಾಹಿಗಳ ಒಲವು-ಬೆಂಬಲ ಇರುವವರೂ ಇದ್ದಾರೆ. ಇಂತಹವರ ಮೇಲೆ ಈ ಕಾನೂನು ಲಾಗೂ ಆದೀತೆ? ಮೇಲಾಗಿ ಕೃಷಿಕರ ಅತ್ಯಗತ್ಯವಾದ ಸಾಲದ ಅಗತ್ಯವನ್ನು ಮನಗಂಡು ಸಹಕಾರಿ ಬ್ಯಾಂಕ್ ಒಳಗೊಂಡು ಇತರೆ ಬ್ಯಾಂಕ್‌ಗಳಲ್ಲಿ ಸಾಲ ನೀಡುವುದು ಆಗಲೇಬೇಕು. ಇಲ್ಲವಾದರೆ ಪರಿಸ್ಥಿತಿ ಸುಧಾರಿಸುವುದು ಕಷ್ಟ. ಆದ್ದರಿಂದ ಸರ್ಕಾರ ಹೊಸ ಸಾಲ ನೀಡುವುದರತ್ತ ಅಗತ್ಯ ಕ್ರಮ ವಹಿಸಬೇಕು. ಮತ್ತು ಕೃಷಿಕರ ಒಟ್ಟು ಮೂಲ ಪ್ರಶ್ನೆಗಳ ಇತ್ಯರ್ಥಕ್ಕೆ ಕೇಂದ್ರ-ರಾಜ್ಯ ಸರ್ಕಾರಗಳೂ ಮುಂದಾಗಬೇಕು. ನೀತಿಗಳನ್ನು ಬದಲಾಯಿಸಬೇಕು.

ಚುನಾವಣೆಯ ಪೂರ್ವಸಿದ್ಧತೆಗೆ ಸೋನಿಯಾಗಾಂಧಿ

ಕಾಂಗ್ರೆಸ್ ಅಧ್ಯಕ್ಷೆ ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕಿ ...ೋನಿಯಾಗಾಂಧಿಯವರು ಕರ್ನಾಟಕಕ್ಕೆ ಭೇಟಿ ನೀಡಿ ಹೋಗಿದ್ದಾರೆ. ...ಮರಾಜನಗರ, ತುಮಕೂರು ಜಿಲ್ಲೆಗಳ ಹಲವು ಕಾರ್ಯಕ್ರಮಗಳಲ್ಲಿ ...ಗವಹಿಸಿ ಹೋಗಿದ್ದಾರೆ.

...ಕೃಷ್ಣರ ಸರ್ಕಾರ ಕಳೆದ ಕೆಲ ವಾರದ ಹಿಂದೆ ರಾಜೀವ್ ಗಾಂಧಿ ...ುವ ಸಂಘದ ಉದ್ಘಾಟನೆಯ ಬೃಹತ್ ಕಾರ್ಯಕ್ರಮ ರೂಪಿಸಿ ...ರ್ಕಾರದ ಹಣವನ್ನು ನೀಡುವ ಮೂಲಕ ಗ್ರಾಮಾಂತರಲ್ಲಿ ...ುವಜನರನ್ನು ಕಾಂಗ್ರೆಸ್‌ಗೆ ಸಳೆಯುವ ಯತ್ನ ಮತ್ತೆ ಆರಂಭಿಸಿತು. ... ಅಕ್ಷರ ದಾಸೋಹ, ಆರೋಗ್ಯ ಗ್ರಾಮ ಅಲ್ಲದೇ ವಿಶೇಷವಾಗಿ ... ಕಾರ್ಯಕ್ರಮಗಳಲ್ಲಿ ಸೋನಿಯಾಗಾಂಧಿ ಭಾಗವಹಿಸಿದ್ದಾರೆ. ... ಅಧಿಕಾರ ಹಿಡಿಯಲು ಚುನಾವಣೆಗೆ ಪೂರ್ವ ಕಸರತ್ತು ... ಎಲ್ಲರಿಗೂ ತಿಳಿದಿರುವ ಸಂಗತಿ.

ಐಕ್ಯರಂಗ ಪ್ರಸಾರ ಹೆಚ್ಚಳದ ಗುರಿಯತ್ತ ದಾಪುಗಾಲು

ದುಡಿವ ಜನರ ಪ್ರಾಣಮಿತ್ರ 'ಐಕ್ಯರಂಗ'ದ 'ಪ್ರಸಾರ ಹೆಚ್ಚಿಸಿ' ಎಂಬ ಕರೆಗೆ ರಾಜ್ಯದಾದ್ಯಂತ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಕನಿಷ್ಟ ಒಂದು ಸಾವಿರ ಪ್ರತಿಗಳಾದರೂ ಹೆಚ್ಚಾಗಬೇಕು ಎಂಬ ಗುರಿಯಿರಿಸಿ ಪ್ರಸಾರಕ್ಕಾಗಿ ವಿಶೇಷವಾದ ಪ್ರಚಾರಾಂದೋಲನ ಕೈಗೊಳ್ಳಲಾಗಿತ್ತು. ರಾಜ್ಯದ ಅನೇಕ ಜಿಲ್ಲೆಗಳಲ್ಲಿ ವಿಚಾರಸಂಕಿರಣಗಳೂ, ಸಮಾವೇಶಗಳು, ಐಕ್ಯರಂಗ ಬಳಗಗಳ ರಚನೆಯಂತಹ ಚಟುವಟಿಕೆಗಳೂ ಸ್ಫೂರ್ತಿದಾಯಕವಾಗಿ ನಡೆದಿದ್ದವು. ನಾಡಿನ ಹೆಸರಾಂತ ಸಾಹಿತಿಗಳು, ಹಿರಿಯರು ಭಾಗವಹಿಸಿ ಈ ಪ್ರಯತ್ನಕ್ಕೆ ಇಂಬು-ಉತ್ಸಾಹ ತುಂಬಿದರು.



ಮಂಗಳೂರಿನ ವಿಚಾರಸಂಕಿರಣದಲ್ಲಿ ಮಾತನಾಡುತ್ತಿರುವ [illegible] ಪತ್ರಿಕೋದ್ಯಮ ಪ್ರಾಧ್ಯಾಪಕರಾದ ಪ್ರೊ. ಬಿ.ಎ.ಶ್ರೀಧರ್. ವೇದಿಕೆಯಲ್ಲಿ ಮಂಗಳೂರು ವಿ.ವಿ.ಯ ಪ್ರೊ. ಪೂರ್ಣಾನಂದ, ಪ್ರೊ.ಕೆ.ಪಣಿರಾಜ್, ಎಸ್‌ವೈಜಿ, ಬಳಗದ ಸಂಚಾಲಕರಾದ ವಸಂತ ಆಚಾರಿ

ಈ ಗುರಿಯತ್ತ ಸಾಗುವ ಪ್ರಯತ್ನದ ಫಲವಾಗಿ ಸದ್ಯ 750 ರ ಗಡಿ ದಾಟಿದೆ. ಇನ್ನೂ ಹಲವಾರು ಕಡೆ ಇಂತಹ ಯತ್ನಗಳು ಮುಂದುವರಿದಿವೆ. ಬಿಡುವಿರದ ಕಾರ್ಯಗಳ ನಡುವೆಯೂ ಇನ್ನೂ ಕೊಂಚ ಗಮನಹರಿಸಿದರೆ ಗುರಿ ಮೀರುವುದು ಅಸಾಧ್ಯವೇನಲ್ಲ. ಅದಕ್ಕಾಗಿ ಎಲ್ಲರೂ ಕೈಜೋಡಿಸಬೇಕಿದೆ.

ಈ ದಿಶೆಯಲ್ಲಿ ಇತ್ತೀಚೆಗೆ ನಡೆದ ಪ್ರಯತ್ನಗಳು ಇಲ್ಲಿ ಪ್ರಸ್ತಾಪಿಸುವುದು ಅಗತ್ಯವೆನಿಸುತ್ತದೆ.

ಇದೇ ಸೆಪ್ಟೆಂಬರ್ 2 ರಂದು ಕುಂದಾಪುರದಲ್ಲಿ ಐಕ್ಯರಂಗ ಓದುಗರು, ಹಿತೈಷಿಗಳು ಕೂಡಿದ ಸಮಾವೇಶವೊಂದು ಜರುಗಿತು. ಪತ್ರಿಕೆಯ ಸಂಪಾದಕರು ಇಂದಿನ ಮಾಧ್ಯಮದ ವಾತಾವರಣದಲ್ಲಿ ಪತ್ರಿಕೆಯ ಮಹತ್ವದ ಕುರಿತು ಮಾತನಾಡಿದರು. ತಾಲೂಕಿನ ವಿವಿಧ ಭಾಗಗಳಿಂದ 50 ಕ್ಕೂ ಅಧಿಕ ಗೆಳೆಯರು ಭಾಗವಹಿಸಿದ್ದರು. ಸಭೆಯಲ್ಲಿ ಪ್ರಸಾರವನ್ನು ಇನ್ನೂ 200 ರಷ್ಟು ಹೆಚ್ಚಿಸಲು ನಿರ್ಧರಿಸಲಾಯಿತು. ಅಧ್ಯಕ್ಷತೆಯನ್ನು ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್ ವಹಿಸಿದ್ದರು. ಹಿರಿಯ ಸಂಗಾತಿ ಡೇವಿಡ್ ಕರ್ಕಡ, ಪುರಸಭಾ ಸದಸ್ಯ ಹಾಗೂ ಕುಂದಾಪುರ ತಾಲ್ಲೂಕು ಕಾರ್ಯದರ್ಶಿ ಮಹಬಲ ವಡೇರಹೋಬಳಿ ಮಾತನಾಡಿದರು. ತಾಲ್ಲೂಕಿನಲ್ಲಿ ಐಕ್ಯರಂಗ ಬಳಗ ರಚಿಸಲಾಯಿತು. ಸಂಚಾಲಕರಾಗಿ ಮುಕುಂದ, ಸಹ ಸಂಚಾಲಕರಾಗಿ ರಾಜು ಪಡುಕೋಣೆ, ಮುತ್ತಯ್ಯ.ಕೆ ಆಯ್ಕೆಯಾದರು.

ಉಡುಪಿ: ಉಡುಪಿಯಲ್ಲಿಯೂ ಓದುಗರ - ಹಿತೈಷಿಗಳ ಸಮಾವೇಶ ನಡೆಯಿತು. ಮಾಧ್ಯಮ-ಪತ್ರಿಕೆಯ ಕುರಿತಾಗಿ ವಿಚಾರ ವಿನಿಮಯ ಜರುಗಿತು. ಪ್ರಸಾರ ಹೆಚ್ಚಿಸಲು ನಿರ್ಧರಿಸಲಾಯಿತಲ್ಲದೇ ಐಕ್ಯರಂಗದ ಜಿಲ್ಲಾ ಬಳಗವನ್ನು ರಚಿಸಲಾಯಿತು. ಸಂಚಾಲಕರಾಗಿ ಎ.ಎಸ್.ಆಚಾರ್ಯ ಆಯ್ಕೆಯಾಗಿದ್ದಾರೆ.

ವಿಚಾರಸಂಕಿರಣ-ತರಬೇತಿ ಶಿಬಿರ

ಮಂಗಳೂರಿನಲ್ಲಿ ಐಕ್ಯರಂಗ ಬಳಗದಿಂದ 'ಜಾಗತೀಕರಣ ಮತ್ತು ಮಾಧ್ಯಮ' ಕುರಿತ ವಿಚಾರಸಂಕಿರಣ ಜರುಗಿತು. ಅಲ್ಲದೇ 13 ರಂದು ಮಂಗಳೂರಿನಲ್ಲಿ ಬರಹಗಾರರಿಗೆ ಪ್ರಾದೇಶಿಕ ತರಬೇತಿ ಶಿಬಿರ ಸಂಘಟಿಸಲಾಗಿತ್ತು. ಉಡುಪಿ, ದ.ಕನ್ನಡ, ಹಾಸನ ಜಿಲ್ಲೆಗಳಿಂದ ಬರಹಗಾರರು ಪಾಲ್ಗೊಂಡಿದ್ದರು.

ಆನೇಕಲ್: ಬೆಂಗಳೂರಿನ ಆನೇಕಲ್‌ನಲ್ಲಿ ಸಮಾವೇಶ ಜರುಗಿತು. ಸಂಪಾದಕ ಗುರುಶಾಂತ್, ರತ್ನಾಕರ ಶೆಣೈಯವರು 'ಮಾಧ್ಯಮಗಳ ಪಾತ್ರ' ಕುರಿತಾಗಿ ವಿಶ್ಲೇಷಿಸಿದರು. ಬಳಗ ರಚನೆಯಾಗಿದ್ದು, ಅಶೋಕಕುಮಾರ್ ಸಂಚಾಲಕರಾಗಿದ್ದಾರೆ.



ಕಾಂ. ಸೂರಿ ನೆನಪು: 80ನೇ ಜನ್ಮ ದಿನಾಚರಣೆ


ಕಾಮ್ರೇಡ್ ಸೂರ್ಯನಾರಾಯಣ ರಾವ್ ಸ್ಮಾರಕ ದತ್ತಿ (ರಿ) ವತಿಯಿಂದ ಬೆಂಗಳೂರು ನಗರದ ಎನ್.ಜಿ.ಓ. ಸಭಾಂಗಣದಲ್ಲಿ ಆಗಸ್ಟ್ 24 ರಂದು ದಿ.ಸೂರ್ಯ ನಾರಾಯಣರಾವ್‌ರವರ 80ನೇ ಜನ್ಮ ದಿನಾಚರಣೆಯನ್ನು ಆಯೋಜಿಸಲಾಗಿತ್ತು. ಸೂರಿಯವರ ನೂರಾರು ಅಭಿಮಾನಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.


ಜಿ.ಎನ್.ನಾಗರಾಜ್‌ರವರು ಪ್ರಾಸ್ತಾವಿಕ ಭಾಷಣ ಮಾಡಿ, ಸೂರಿಯವರು ಇಲ್ಲದ ಈ ಒಂದು ವರ್ಷ ಅನೇಕ ಬದಲಾವಣೆ ಗಳನ್ನು ನಾವು ಕಂಡಿದ್ದೇವೆ, ಆದರೆ ದೇಶದಲ್ಲಿ ಜನರ ಮೇಲೆ ಹೆಚ್ಚುತ್ತಿರುವ ಧಾಳಿಯನ್ನು ಹಿಮ್ಮೆಟ್ಟಿಸಲು ಸೂರಿಯವರು ಈಗ ನಮ್ಮಲ್ಲಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂಬುದು ನಮ್ಮ ನಿತ್ಯ ಅನುಭವ. ಸೂರಿಯವರ ನೆನಪು ಹೇಗೆ ಮುಂದಿನ ಪೀಳಿಗೆಗೆ

ಇತ್ತೀಚಿನ ದಿನಗಳಲ್ಲಿ ಕಾರ್ಮಿಕ ಚಳುವಳಿಯ ಮೇಲೆ ಶಾಸಕಾಂಗ- ನ್ಯಾಯಾಂಗ ಮತ್ತು ಕಾರ್ಯಾಂಗಗಳ ಧಾಳಿ ಹೆಚ್ಚಾಗುತ್ತಿದೆ. ಶಾಸಕಾಂಗವು ಉದಾರೀಕರಣೋತ್ತರ ವರ್ಷಗಳಲ್ಲಿ ಲೇಬರ್ ಕಾನೂನುಗಳನ್ನು ಬದಲಿಸಿ, ಕಾರ್ಮಿಕರನ್ನು ಗುಲಾಮರನ್ನಾಗಿಸುವ ಕುತಂತ್ರದಲ್ಲಿ ತೊಡಗಿದ್ದರೆ, ನ್ಯಾಯಾಂಗವು ಕಾರ್ಮಿಕರು ಮುಷ್ಕರ ಮಾಡುವ ಹಕ್ಕೇ ಇಲ್ಲವೆಂದು ತೀರ್ಪು ನೀಡಿದೆ. ಕಾರ್ಯಾಂಗವು ಎಂದಿನಂತೆ ಮಾಲೀಕರಿಂದ ಲಂಚ ತಿಂದು, ಕಾರ್ಮಿಕರನ್ನು ಶೋಷಿಸುವುದನ್ನು ಮುಂದುವರಿಸಿದೆ. ಮುಷ್ಕರದ ಹಕ್ಕು ಕಾರ್ಮಿಕರ ಮೂಲಭೂತ ಹಕ್ಕಾಗಿದ್ದು, ಅದನ್ನು ಯಾರೂ ಕಸಿಯಲು ಬಿಡದಂತೆ ಚಳುವಳಿಯನ್ನು ಕಟ್ಟಬೇಕಾಗಿದೆ. ಅದುವೇ ಸೂರಿಯವರಿಗೆ ನಾವು ಸಲ್ಲಿಸಬಹುದಾದ ಗೌರವ ಎಂದು ಜಿ.ಎನ್.



ಶಾಶ್ವತವಾಗಿ ಉಳಿಯುವಂತೆ ಮಡುವುದು ಎಂಬುದೇ ನಮ್ಮ ಮುಂದೆ ಇರುವಂತಹ ಪ್ರಶ್ನೆ. ಯಾವ ಚಳುವಳಿಯನ್ನು ಕಟ್ಟಲು ತಮ್ಮ ಇಡೀ ಜೀವನವೆಲ್ಲ ಸೂರಿಯವರು ಅಹರ್ನಿಶಿ ದುಡಿದರೊ ಆ ಚಳುವಳಿಯನ್ನು ಮುಂದುವರಿಯುವಂತೆ ಮಾಡಲು ಅಗತ್ಯವಾದ ಸಂಘಟನೆ- ಸಾಧನಗಳನ್ನು ಸೃಷ್ಟಿಸುವುದು ಮತ್ತು ಸಾಕಾರಗೊಳಿಸುವುದು. ಸೂರಿಯವರು ಬದುಕಿನುದ್ದಕ್ಕೂ ಸಂಘರ್ಷದಲ್ಲಿಯೇ ಮುಳುಗಿ ಎದ್ದವರು. ಸಂಘರ್ಷದ ಅವರ ಮನೋವೃತ್ತಿಯೇ ಅವರ ಬಳಗವನ್ನು ಆಕರ್ಷಿಸಲು ಕಾರಣವಾದರೆ, ಬಂಡವಾಳಗಾರರ ವೈರವನ್ನು ಸಂಪಾದಿಸಲು ಸಹ ಅದೇ ಸಂಘರ್ಷವು ಕಾರಣವಾಯಿತು.





ನಾಗರಾಜ್ ಹೇಳಿದರು.

ಬಳಿಕ ಮಾತನಾಡಿದ ವಿ.ಜೆ.ಕೆ. ನಾಯರ್‌ರವರು ಇದು ಸೂರಿಯವರು ದಿವಂಗತರಾದ ಬಳಿಕ ಎರಡನೆಯ ಜನ್ಮ ದಿನಾಚರಣೆ. ಮೊದಲ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ನಾವು ಒಂದು ವರ್ಷದಲ್ಲಿ ಸೂರಿ ಭವನಕ್ಕೆ ನೀಲಿ ನಕ್ಷೆ ಸಿದ್ಧಪಡಿಸುತ್ತೇವೆಂದು ಯೋಜಿಸಿದ್ದೆವು. ಈಗ ಹಣ ಇನ್ನೂ ಸಂಗ್ರಹವಾಗಬೇಕೆಂದರು.

ಸೂರಿಯವರ ನೆನಪನ್ನು ಶಾಶ್ವತ ಗೊಳಿಸುವುದೆಂದರೆ, ಅವರು ಕಟ್ಟಿ ಬೆಳೆಸಿದ ಚಳುವಳಿಯನ್ನು ಮುಂದುವರಿಸುವುದು ಮತ್ತು ಅದಕ್ಕೆ ನೇತೃತ್ವ ನೀಡುವ ನಾಯಕರನ್ನು ತರಬೇತುಗೊಳಿಸುವುದು ಹಾಗೂ ಇಂತಹ ನಾಯಕರನ್ನು ಸೃಷ್ಟಿಸುವ ಸಾಧನಗಳನ್ನು ರೂಪಿಸಿ ಅಂದರೆ, ಸೂರಿ ಮೆಮೋರಿಯಲ್ ಟ್ರಸ್ಟ್ ಮೂಲಕ ಆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು. ಈ ಕೆಲಸವು ಅವಶ್ಯಕವಾ... ಆಗಬೇಕಾಗಿದೆ ಎಂದರು.

ಹಲವಾರು ನಾಯಕರನ್ನು ಸೃಷ್ಟಿಸುವುದ... ಹಾಗೂ ಅವರನ್ನು ಸರಿಯಾದ ರೀತಿಯ... ತರಬೇತಿಗೊಳಿಸಲು ಸೂರಿ ಸ್ಮಾರಕ ಸಂಸ್ಥೆಯು... ಕೆಲಸ ಮಾಡಲಿದೆ. ಎಲ್ಲಾ ಕಡೆಯಲ್ಲೂ ಸಿಐಟಿಯು... ಸೋಲುತ್ತಿದೆ ಎಂಬ ಅಪಪ್ರಚಾರದ ನಡು... ಎಸ್ಕಾರ್ಟ್ಸ್‌ನಲ್ಲಿ ಸಿಐಟಿಯು ಗೆದ್ದಿರುವುದ... ಸಂತೋಷದ ವಿಷಯವಾಗಿದೆ ಎಂದರು. ಭಾ... ಮತ್ತು ಕಾರ್ಮಿಕ ಚಳುವಳಿಯ ಕುರಿತು... ವಿಶ್ಲೇಷಿಸಿದರು.

ಸಿಐಟಿಯು ರಾಜ್ಯ ಕಾರ್ಯದರ್ಶಿ ಮಂಡ... ಸದಸ್ಯರು ಹಾಗೂ ಸೂರಿ ಸ್ಮಾರಕ ದತ್ತಿ... ಮ್ಯಾನೇಜಿಂಗ್ ಟ್ರಸ್ಟಿಯಾದ ಇ.ಕೆ.ಎನ್. ರಾಜ... ಮಾತನಾಡಿದರು. ಅವರು ತಮಿಳುನಾಡು ಸರ್ಕಾ... ನೌಕರರ ವಿಚಾರದಲ್ಲಿ ಸುಪ್ರಿಂ ಕೋರ್ಟ... ನೀಡಿರುವ ತೀರ್ಪನ್ನು ಪ್ರಸ್ತಾಪಿಸಿ, ಮುಷ... ಮಾಡಬಾರದೆಂದು ನೌಕರರಿಗೆ ಕೋರ್ಟ... ಆದೇಶಿಸಿದೆ. ಆದರೆ, ಲಾಕೌಟ್ ಮಾ... ಬಾರದೆಂದು ಮಾಲೀಕರಿಗೆ ಆದೇಶಿಸುವ ಧೈರ್ಯ... ಸುಪ್ರಿಂಕೋರ್ಟ್‌ಗೆ ಇಲ್ಲ. ಇಂತಹ ಪರಿಸ್ಥಿತಿಯ... ನಾವು ಸೂರಿಯವರ ಕೊರತೆಯ... ಮನಗಾಣುವುದು ಹಾಗೂ ಸೂರಿಯ... ಖಾಲಿಯಾದ ಜಾಗವನ್ನು ತುಂಬಲು ಪ್ರತಿಯೊ... ಸಿಐಟಿಯು ಕಾರ್ಯಕರ್ತ... ಸೂರಿಯಂತಾಗಲು ಪ್ರಯತ್ನಿಸಬ... ಮತ್ತು ಆ ರೀತಿಯಾಗ... ಸೂರಿಯವರು ತಮ್ಮ ಬದು... ನಮಗೆ ಅರ್ಪಿಸಿ ಹೋಗಿದ್ದಾರೆ. ... ಅವರ ಹೆಸರಿನಲ್ಲಿ ನಮಗಾಗಿ ಹ... ಚಳುವಳಿಯನ್ನು ಬೆಳೆಸಲು ... ಸ್ಮಾರಕ ಸಂಸ್ಥೆಯು ಯೋಜಿಸಿರುವ... ಕಾರ್ಯಗತ ವಾಗಿಸಲು ... ರೀತಿಯಲ್ಲೂ ಕಾರ್ಯಮಗ್ನರಾಗ ಬೇಕು.

ಸೂರಿಯವರ ಪುತ್ರಿಯಾದ ಮೀರಾ... ಮಾತನಾಡಿ ಬೆಂಗಳೂರಿನ ಒಂದು ... ಸೂರಿಯವರ ಹೆಸರನ್ನು ಇಡುವ ಬಗ್ಗೆ ಮಾಡ... ಪ್ರಯತ್ನಗಳ ಬಗ್ಗೆ ವಿವರಿಸಿದರು. ಈಗಾ... ಜಯನಗರದ ಈಸ್ಟ್ ಎಂಡ್ ಮೈನ್ ರೋ... ಸೂರಿಯವರ ಹೆಸರನ್ನು ಇಡಲು ಪಾಲಿ... ಸಭೆಯಲ್ಲಿ ನಿರ್ಧರಿಸಲಾಗಿದ್ದು ಈ ... ಅಧಿಸೂಚನೆಯನ್ನು ಹೊರಡಿಸಲಾಗಿದೆ ... ತಿಳಿಸಿದರು.

ಮೊದಲಿಗೆ ಮೀನಾಕ್ಷಿ ಸುಂದರಂರ... ಸ್ವಾಗತಿಸಿದರು. ಸಭೆಯ ಅಧ್ಯಕ್ಷತೆ ... ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯ... ಜಿ.ಎನ್.ನಾಗರಾಜ್ ವಹಿಸಿದ್ದರು. ಸದ್ಯ... ಭಾಷೆ ಮತ್ತು ಕ್ರಾಂತಿ ಎಂಬ ವಿಚಾರಸಂಕಿರ್ಣ... ನಡೆಸಲಾಗುವುದು. ಕರ್ನಾಟಕದ ರಾಜ್ಯೋ... ಸಂದರ್ಭದಲ್ಲಿ ನಡೆಯಲಿರುವ ... ಕಾರ್ಯಕ್ರಮದಲ್ಲಿ ಹಿಂದೂ ಪತ್ರಿಕೆಯ ಸಂ... ಎನ್.ರಾಂ, ಡೆಕ್ಕನ್ ಹೆರಾಲ್ಡ್ ಪತ್ರಿ... ಹರಿಕುಮಾರ್ ಹಾಗೂ ಸಿಪಿಐ(ಎಂ) ಪ... ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್‌ರ... ಆಹ್ವಾನಿಸುವ ಯೋಜನೆಯಿದೆ ಎಂದು ... ತಿಳಿಸಿದರು. ಸೂರಿ ಭವನದ ಬಗ್ಗೆ ನಿ... ಹುಡುಕುವ ಪ್ರಕ್ರಿಯೆ ಈಗಾಗಲೇ ಆರಂಭ... ಈ ಬಗ್ಗೆ ಮುಂದೆ ತಿಳಿಸಲಾಗುವುದೆಂದು ...

ವಿವಿಧ ಸಂಘಟನೆಗಳ ನಾಯಕರು ಮಾ... ಸೂರಿ ಭವನವನ್ನು ಸಾಕಾರಗೊಳಿಸುವಲ್ಲಿ... ವತಿಯಿಂದ ಸಂಪೂರ್ಣ ಸಹಕಾರ... ನೀಡುವುದಾಗಿ ಹೇಳಿದರು. ಇದೇ ಸಂದರ್ಭ... **ಸೂರಿಯವರ ದ್ವಿತೀಯ ಪುತ್ರಿ ರೇಖಾ... ತಮ್ಮ ಹೆಸರಿನಲ್ಲಿರುವ ಒಂದು ... ನಿವೇಶನವನ್ನು ಈ ಟ್ರಸ್ಟ್‌ಗೆ ನೀಡು... ಘೋಷಿಸಿದರು.**

ವರದಿ ಕೆ.ಸು...
ಸ್ವಾಮಿ

ಕೊಳ್ಳೆಗಾಲ ಅರಣ್ಯ ಸಿಬ್ಬಂದಿ ಕಿರುಕುಳದ ವಿರುದ್ಧ ಪ್ರತಿಭಟನೆ

ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನೀಡುತ್ತಿರುವ ದೌರ್ಜನ್ಯದ ವಿರುದ್ಧ ಸಿಡಿದೆದ್ದ ಕಾಡಂಚಿನ ಗ್ರಾಮಗಳ ಜನತೆ ತಾಲ್ಲೂಕು ಡಿ.ವೈ.ಎಫ್.ಐ. ನೇತೃತ್ವದಲ್ಲಿ ಪ್ರತಿಭಟನೆಗಿಳಿದರು. ಮೆರವಣಿಗೆಯ ಮೂಲಕ ತೆರಳಿದ ಪ್ರತಿಭಟನಾಕಾರರು ಉಪ ಅರಣ್ಯಾಧಿಕಾರಿ ಕಛೇರಿ ಎದುರು ಧರಣಿ ನಡೆಸಿ, ತಮ್ಮ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ನಿಲ್ಲಿಸುವಂತೆ ಒತ್ತಾಯಿಸಿದರು.

ಅಗಸ್ಟ್ 25 ರಂದು ನಡೆದ ಈ ಕಾರ್ಯಕ್ರಮದಲ್ಲಿ ಕೊಳ್ಳೇಗಾಲ ತಾಲೂಕಿನ ರಾಮಾಪುರ ಹೋಬಳಿಯ ಕಾಡಂಚಿನ ಹಳ್ಳಿಗಳಾದ ದಿನ್ನಳ್ಳಿ, ಸೂಳೆ ಕೂಬೆ, ಸಿಕ್ಕುಂದಿ, ಕೆ.ಎಸ್.ದೊಡ್ಡಿ, ಹೂಗ್ಯಂ, ಸತ್ಯಮಂಗಲ, ಮಹದೇಶ್ವರ ಬೆಟ್ಟ, ಲೊಕ್ಕನಹಳ್ಳಿ, ಪಿ.ಜಿ.ಪಾಳ್ಯ ಮುಂತಾದ ಹಳ್ಳಿಗಳಲ್ಲಿ ವಾಸವಾಗಿರುವ ನೂರಕ್ಕೂ ಅಧಿಕ ಸಂಖ್ಯೆಯಲ್ಲಿದ್ದ ಬುಡಕಟ್ಟು ಜನ ಮತ್ತು ರೈತರು ತಮ್ಮ ಮೇಲೆ ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ನಿರಂತರ ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿ ಘೋಷಣೆ ಕೂಗಿದರು.

ರೈತರು ಬೆಳೆದ ಫಸಲಿನಲ್ಲಿ ಪ್ರತಿ ವರ್ಷ ಅಧಿಕಾರಿಗಳು ಪಾಲು ಕೇಳುತ್ತಾರೆ. ವರ್ಷಕ್ಕೆ ಐದು ಕೊಳಗ (ಸುಮಾರು 25 ಕೆ.ಜಿ) ರಾಗಿ ಕೊಡಬೇಕು. ಕಾಡಿನಲ್ಲಿ ಮೇಕೆ ಮೇಯಿಸಲು ಪ್ರತಿ ಮೇಕೆಗೆ 40 ರೂ. ಕೊಡಬೇಕು. ಹೀಗೆ ಹಲವು ವಿಧದಲ್ಲಿ ಜನರಿಂದ ಸುಲಿಗೆ ಮಾಡತೊಡಗಿದ್ದಾರೆ. ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದಾರೆ ಎಂದು ತಮ್ಮ ಸಿಟ್ಟನ್ನು ಹೊರಹಾಕಿದರು.

ಇಂತಹ ದೌರ್ಜನ್ಯವನ್ನು ಖಂಡಿಸಿ ಅಗಸ್ಟ್ 7 ರಂದು ಡಿ.ವೈ.ಎಫ್.ಐ. ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ನಂತರ ಸಂಘದ ಮುಖಂಡರು ಮತ್ತು ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಲಾಗಿದೆ. ಕಳ್ಳತನದ ಆರೋಪ ಹೊರಿಸಿ ಡಿ.ವೈ.ಎಫ್.ಐ ನ ತಾಲೂಕು ಸಂಚಾಲಕರಾದ ಎ.ಎಂ.ಶಿವಾಜಿ ನಾಯಕ್ ಮತ್ತು ಇತರರನ್ನು ಜೈಲಿಗೆ ಹಾಕಿದ್ದರು.



ಇದೆಲ್ಲಕ್ಕೂ ಕಾರಣವಾಗಿರುವ ಫಾರೆಸ್ಟ್ ಮಲ್ಲರಾಜ್, ಗಾರ್ಡ್ ಸಾಲನ್, ವಾಚರ್ ಬಸವಯ್ಯ ಮತ್ತು ರಾಮಯ್ಯ ಇವರನ್ನು ಅಮಾನತು ಮಾಡಬೇಕು, ಯುವತಿಯೋರ್ವಳಿಗೆ ಲೈಂಗಿಕ ಕಿರುಕುಳ ನೀಡಲು ಯತ್ನಿಸಿದ ಗಾರ್ಡ್ ಸಾಲನ್ ಮತ್ತು ವಾಚರ್ ಬಸವಯ್ಯ ಇವರಿಬ್ಬರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು, ಡಿ.ವೈ.ಎಫ್.ಐ ಮುಖಂಡರ ಮೇಲಿನ ಸುಳ್ಳು ಮೊಕದ್ದಮೆ ಹಿಂತೆಗೆದುಕೊಳ್ಳಬೇಕೆಂದು ಪ್ರತಿಭಟನೆಕಾರರು ಒತ್ತಾಯಿಸಿದರು. ದಿನ್ನಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷ ಎಸ್.ಆರ್. ಮಹದೇವ ಮತ್ತು ಅವರ ಸ್ನೇಹಿತ ಕೌಡಿ ಮತ್ತು ರಾಮ ಜೊತೆ ಸೇರಿ ಅರಣ್ಯ ಇಲಾಖೆ ಸಿಬ್ಬಂಧಿಗಳು ನಡೆಸುತ್ತಿರುವ ಮರಗಳ ಕಳ್ಳಸಾಗಣೆ ಬಗ್ಗೆ ತನಿಖೆ ನಡೆಸುವಂತೆ ಒತ್ತಾಯಿಸಿದರು. ಕಾಡಂಚಿನ ರೈತರಿಗೆ ಕಾಡಿನ ಗೊಬ್ಬರ ಬಳಸಲು ಇದ್ದ ಅವಕಾಶವನ್ನು ಕಸಿದುಕೊಂಡು ಟೆಂಡರ್ ಮೂಲಕ ದೊಡ್ಡ ಭೂ ಮಾಲೀಕರಿಗೆ ಅನುವು ಮಾಡಿಕೊಟ್ಟಿರುವುದನ್ನು ಖಂಡಿಸಿದರು.

ಕೊಳ್ಳೇಗಾಲ ನಗರದ ಕಾವೇರಿ ರಸ್ತೆಯಲ್ಲಿರುವ ಡಿ.ವೈ.ಎಫ್.ಐ. ಕಛೇರಿಯಿಂದ ಉಪ ಅರಣ್ಯಾಧಿಕಾರಿ ಕಛೇರಿಯವರೆಗೆ ಮೆರವಣಿಗೆ ನಡೆಸಲಾಯ್ತು. ಡಿ.ವೈ.ಎಫ್.ಐ ನ ರಾಜ್ಯ ಅಧ್ಯಕ್ಷರಾದ ಕೆ.ಎನ್.ಉಮೇಶ್, ಸಹ ಕಾರ್ಯದರ್ಶಿ ಎನ್.ಎಲ್.ಭರತರಾಜ್ ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ತಾಲ್ಲೂಕು ಸಂಚಾಲಕರಾದ ಎ.ಎಂ.ಶಿವಾಜಿ ನಾಯಕ್ ಮತ್ತಿತರರು ವಹಿಸಿದ್ದರು.

ಕಠಿಣ ಪರಿಸ್ಥಿತಿಯೆದುರು ಮುಲಾಯಂ ಸರ್ಕಾರ



ಈ ಸಂಚಿಕೆ ಓದುಗರ ಕೈಸೇರುವಷ್ಟರಲ್ಲಿ ಸಮಾಜವಾದಿ ಪಕ್ಷದ ಮುಖಂಡ ಮುಲಾಯಂ ಸಿಂಗ್ ಯಾದವ್‌ರವರು ಹೊಸ ಮುಖ್ಯಮಂತ್ರಿಯಾಗಿ ಉತ್ತರ ಪ್ರದೇಶದ ವಿಧಾನಸಭೆಯನ್ನು ಎದುರಿಸಿರುತ್ತಾರೆ; ವಿಶ್ವಾಸ ಮತವನ್ನೂ ಗೆಲ್ಲುವ ಎಲ್ಲಾ ಸಾಧ್ಯತೆಗಳಿವೆ. ಲಕ್ನೌದಲ್ಲಿ ಮಾಯಾವತಿಯವರ ನೇತೃತ್ವದ ಬಿಎಸ್‌ಪಿ-ಬಿಜೆಪಿ ಸರ್ಕಾರ ತಲೆತಗ್ಗಿಸಿಕೊಂಡು ಅಧಿಕಾರದಿಂದ ಹೊರಹೋದ ನಂತರ ಮುಲಾಯಂಗೆ ಈ ಹೊಣೆ.

ಫೆಬ್ರವರಿ 2002 ರಲ್ಲಿ ವಿಧಾನಸಭಾ ಚುನಾವಣೆ ನಡೆದ ಸುಮಾರು ಎರಡು ತಿಂಗಳ ನಂತರ ಮಾಯಾವತಿಯವರು ಹೇಗೆ ಮುಖ್ಯಮಂತ್ರಿಯ ಸ್ಥಾನ ಪಡೆದರು ಎಂಬುದೀಗ ಇತಿಹಾಸದ ಭಾಗ. ಸಮಾಜವಾದಿ ಪಕ್ಷ ಹೊಸ ವಿಧಾನಸಭೆಯಲ್ಲಿ ಅತಿದೊಡ್ಡ ಪಕ್ಷವಾಗಿ ಆರಿಸಿಬಂದರೂ ಅದನ್ನು ಸರಕಾರ ರಚಿಸಲು ಆಹ್ವಾನಿಸಿರಲಿಲ್ಲ. ಬದಲಿಗೆ, ರಾಜ್ಯಪಾಲರ ಹುದ್ದೆಯ ದುರುಪಯೋಗ ಮಾಡಿ ವಿಧಾನಸಭೆಯನ್ನು ಅಮಾನತ್ತಿನಲ್ಲಿ ಇಡಲಾಯಿತು. ಈ ಅವಧಿಯಲ್ಲಿ ಈ ಹಿಂದೆ 1997 ರಲ್ಲಿ ಮಾಡಿದಂತೆ ಬಿಜೆಪಿಯು ಬಿಎಸ್‌ಪಿಯೊಂದಿಗೆ ಒಂದು ಸಮಯಸಾಧಕ ಮೈತ್ರಿಯನ್ನು ಕುದುರಿಸಿಕೊಂಡಿತು. ಕಾರಣ ಸ್ಪಷ್ಟವಾಗಿತ್ತು. ಫೆಬ್ರವರಿ 2002 ರ ಚುನಾವಣೆಗಳಲ್ಲಿ ಬಿಜೆಪಿ ಮೂರನೇ ಸ್ಥಾನಕ್ಕೆ ಇಳಿದಿತ್ತು. ಅದು ತಾನಾಗಿಯೇ ಅಧಿಕಾರಕ್ಕೆ ಬರುವ ಸಾಧ್ಯತೆಯೇ ಇರಲಿಲ್ಲ. ಹೇಗಾದರೂ ಮಾಡಿ ಸಮಾಜವಾದಿ ಪಕ್ಷ ಅಧಿಕಾರ ಪಡೆಯದಂತೆ ಮಾಡಬೇಕು ಎಂದು ಬಿಜೆಪಿ ಮತ್ತು ಬಿಎಸ್‌ಪಿ ಕೈಮಿಲಾಯಿಸಿದವು. ಹೀಗೆ ಸಂದೇಹಾಸ್ಪದ ರೀತಿಯಲ್ಲಿ ಅಧಿಕಾರದೊಳಗೆ ನುಸುಳಿದ ಬಿಜೆಪಿ ಆರಂಭದಿಂದಲೇ ಮಾಯಾವತಿಯವರ ರಾಗಕ್ಕೆ ತಾಳ ಹಾಕಬೇಕಾಯಿತು ಎಂಬುದು ಬೇರೆ ಮಾತು. ಆಕೆ ಎಂದಿನಂತೆ ಅಹಂಕಾರದ, ನಿರಂಕುಶ ರೀತಿಯಲ್ಲಿ ರಾಜ್ಯದಲ್ಲಿ ಆಳ್ವಿಕೆ ನಡೆಸಿದರು.

ಬಿಜೆಪಿಯ ದೌರ್ಬಲ್ಯ ಬಯಲು

ಮುನ್ನೋಟವಿದ್ದ ಯಾರೇ ಆದರೂ ಈ ಕೂಟಕ್ಕೆ ಎಂತಹ ದುರ್ಗತಿ ಕಾದಿದೆ ಎಂಬುದನ್ನು ಮೊದಲ ದಿನದಂದಲೇ ಊಹಿಸಬಹುದಿತ್ತು. ಬಿಜೆಪಿಗೆ ಲೋಕಸಭೆಯಲ್ಲಿ ಬಿಎಸ್‌ಪಿ ಸಂಸತ್ ಸದಸ್ಯರ ಬೆಂಬಲ ಬೇಕಿತ್ತು. ಅದಕ್ಕಿಂತಲೂ ಮುಖ್ಯವಾಗಿ ಮುಂದಿನ ಲೋಕಸಭಾ ಚುನಾವಣೆಗಳನ್ನು ಉತ್ತರ ಪ್ರದೇಶದಲ್ಲಿ ಬಿಎಸ್‌ಪಿ ಜತೆ ಮೈತ್ರಿಯೊಂದಿಗೆ ಎದುರಿಸಬೇಕು ಎಂದು ಅದು ಬಯಸಿತ್ತು. ಏಕೆಂದರೆ ಆಗಲೇ ಉತ್ತರ ಪ್ರದೇಶದಲ್ಲಿ 1999 ರಲ್ಲಿ ಅದರ ಸ್ಥಾನಗಳ ಸಂಖ್ಯೆ ಇಳಿದಿತ್ತು. ಅದನ್ನು ಬೇರೆ ರೀತಿಯಲ್ಲಿ ಹೆಚ್ಚಿಸಿಕೊಳ್ಳುವ ಸಾಧ್ಯತೆಯಿರಲಿಲ್ಲ. ಮಾಯಾವತಿಯವರಿಗೆ ಬಿಜೆಪಿಯ ಈ ಭಯದ ಬಗ್ಗೆ ಚೆನ್ನಾಗಿ ತಿಳಿದಿತ್ತು. ಅದರ ಪೂರ್ಣ ಪ್ರಯೋಜನ ಪಡೆಯಲು ಆಕೆ ಪ್ರಯತ್ನಿಸಿದರು. ನಿಜ, ಕೆಲವು ಮುಖ್ಯ ಅಂಶಗಳಲ್ಲಿ ಆಕೆಯೂ ಬಿಟ್ಟುಕೊಡಬೇಕಾಯಿತು. ಬಾಬ್ರಿ ಮಸೀದಿ ಧ್ವಂಸ ಮೊಕದ್ದಮೆಯಲ್ಲಿ ಅಡ್ವಾಣಿ, ಜೋಷಿ ಮತ್ತಿತರ ಮೇಲಿನ ಚಾರ್ಜ್‌ಶೀಟ್‌ನ್ನು ದುರ್ಬಲಗೊಳಿಸಿದ್ದು ಇದಕ್ಕೆ ಒಂದು ಉದಾಹರಣೆ.

ಹಾಗಿದ್ದರೆ ಪರಿಸ್ಥಿತಿಯ ಮೇಲೆ ಪೂರ್ಣ ಹತೋಟಿ ಪಡೆದಂತಿದ್ದ ಮಾಯಾವತಿ ರಾಜ್ಯಪಾಲರ ಬಳಿ ಹೋಗಿ ವಿಧಾನಸಭೆಯನ್ನು ವಿಸರ್ಜನೆ ಮಾಡುವಂತೆ ಏಕೆ ಹೇಳಿದರು? ಈ ಬಗ್ಗೆ ಬಹಳ ಊಹಾಪೋಹಗಳಿವೆ. ಇವುಗಳಲ್ಲಿ ಹೆಚ್ಚು ನಿಜವಿರಬಹುದಾದ ಒಂದು ಊಹೆಯೆಂದರೆ ಮುಂದಿನ ವಿಧಾನಸಭಾ ಅಧಿವೇಶನದ ಮೊದಲು ಹತ್ತು ಪಕ್ಷೇತರ ಶಾಸಕರು ಸರಕಾರಕ್ಕೆ ಬೆಂಬಲ ಹಿಂತೆಗೆದುಕೊಳ್ಳುವ ಸಾಧ್ಯತೆಯಿತ್ತು ಎಂಬುದು. ಆಗ ಮಾಯಾವತಿ ಸರ್ಕಾರ ಯಾವಾಗಬೇಕಾದರೂ ಕುಸಿಯಬಹುದಾದ ಸ್ಥಿತಿಗೆ ಬರುತ್ತಿತ್ತು. ಇಂತಹ ಸನ್ನಿವೇಶದಲ್ಲಿ ಮುಖ್ಯಮಂತ್ರಿಗಳು ಸಂಪುಟ ಸಭೆ ಕರೆದರು. ಆ ಸಭೆ ವಿಧಾನಸಭೆಯ ವಿಸರ್ಜನೆಯ ಶಿಫಾರಸು ಮಾಡಲು ನಿರ್ಧರಿಸಿತು. ಬಿಜೆಪಿ ಈಗ ಏನೇ ಹೇಳಲಿ, ಆದರ ಮಂತ್ರಿಗಳೂ ಈ ಸಭೆಯಲ್ಲಿ ಭಾಗವಹಿಸಿದ್ದರು, ಅವರೂ ಈ ನಿರ್ಣಯದಲ್ಲಿ ಭಾಗಿಯಾಗಿದ್ದರು.

ಆದರೆ ಈ ವೇಳೆಗೆ ಬಿಜೆಪಿಗೆ ಚಳಿ ಹತ್ತಿತ್ತು. ಇತರ ಶಾಸಕರಂತೆ ಬಿಜೆಪಿ ಶಾಸಕರೂ ಇಷ್ಟು ಬೇಗ ಚುನಾವಣೆ ಎದುರಿಸಲು ಸಿದ್ಧರಿರಲಿಲ್ಲ. ಬಿಜೆಪಿ ಮೂರನೇ ಒಂದರಷ್ಟು ಶಾಸಕರು ಹೊರ ನಡೆಯಲು ಸಿದ್ಧರಾಗುತ್ತಿದ್ದರು ಎಂಬ ಸುದ್ದಿ ಬಂದಿತ್ತು. ತಕ್ಷಣ ಬಿಜೆಪಿ ಮುಖಂಡ ಲಾಲಜೀ ಟಂಡನ್ ರಾಜಭವನದಲ್ಲಿ ರಾಜ್ಯಪಾಲರಾಗಿ ಇದ್ದ ತಮ್ಮದೇ ವ್ಯಕ್ತಿಯ ಬಳಿ ಧಾವಿಸಿದರು. ಮಾಯಾವತಿ ಸರಕಾರದಿಂದ ಬಿಜೆಪಿ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಿದೆ ಎಂದರು. ನಂತರ ಇದನ್ನೇ ತಿರುಚಿ ಹೇಳಲಾಯಿತು. ಟಂಡನ್‌ರವರು ಬೆಂಬಲ ಹಿಂತೆಗೆದುಕೊಂಡ ಬಗ್ಗೆ ತನಗೆ ಮೊದಲೇ ಹೇಳಿದ್ದರಿಂದ ಮಾಯಾವತಿ ಸರ್ಕಾರ ಅಲ್ಪಮತಕ್ಕೆ ಆಗಲೇ ಇಳಿದಿದ್ದು, ಅದರ ಶಿಫಾರಸನ್ನು ತಾನು ಸ್ವೀಕರಿಸಬೇಕಾಗಿಲ್ಲ ಎಂದು ರಾಜ್ಯಪಾಲರು ಹೇಳಿದರು. ಬಿಜೆಪಿ ಮಂತ್ರಿಗಳೂ ಮಾಯಾವತಿ ಸಂಪುಟದ ಶಿಫಾರಸಿನ ಭಾಗಿಗಳಾಗಿದ್ದರು ಎಂಬುದನ್ನು ಮರೆಮಾಚಲಾಯಿತು.

ಇದು ಉತ್ತರ ಪ್ರದೇಶದಲ್ಲಿ ಬಿಜೆಪಿಯ ದೌರ್ಬಲ್ಯವನ್ನು ತೋರಿಸುತ್ತದೆ. ಆ ಪಕ್ಷ ಎರಡು ದಾರಿಗಳ ಬಗ್ಗೆ ಯೋಚಿಸಿದಂತಿತ್ತು. ಒಂದು, ರಾಷ್ಟ್ರಪತಿ ಆಳ್ವಿಕೆಯನ್ನು ಹೇರಿ ವಿಧಾನಸಭೆಯನ್ನು ಅಮಾನತ್ತಿನಲ್ಲಿಡುವುದು, ಎರಡನೆಯದು ವಿಧಾನಸಭೆಯನ್ನು ವಿಸರ್ಜಿಸುವುದು. ಬಿಜೆಪಿ ತಾನೇ ಸರಕಾರ ಮಾಡುವುದಂತೂ ಅಸಾಧ್ಯವೇ ಆಗಿತ್ತು. ಏಕೆಂದರೆ ಅದಕ್ಕೆ ಇಡೀ ಬಿಎಸ್‌ಪಿ ಅಥವಾ ಕನಿಷ್ಟ 75 ರಿಂದ 80 ಶೇಕಡಾ ಸಮಾಜವಾದಿ ಪಕ್ಷದ ಶಾಸಕರ ಬೆಂಬಲ ಬೇಕಿತ್ತು. ಅದು ಊಹೆಗೆ ನಿಲುಕದ ಸಂಗತಿ. ರಾಷ್ಟ್ರಪತಿ ಆಳ್ವಿಕೆ ಹೇರಿದರೂ ಎರಡು-ಮೂರು ತಿಂಗಳಲ್ಲಿ ಪರಿಸ್ಥಿತಿಯೇನೂ ಬದಲಾಗುತ್ತಿರಲಿಲ್ಲವಾದ್ದರಿಂದ ಇದರಿಂದಲೂ ಬಿಜೆಪಿಗೆ ಪ್ರಯೋಜನವಿಲ್ಲ. ವಿಧಾನಸಭೆಯನ್ನು ವಿಸರ್ಜಿಸಿದರೂ ಬಿಜೆಪಿ ಇಕ್ಕಟ್ಟಿನಿಂದ ಪಾರಾಗುತ್ತಿರಲಿಲ್ಲ. ಏಕೆಂದರೆ ಅದರ ಹಲವಾರು ಹಾಲಿ ಶಾಸಕರು ಪಕ್ಷ ಬಿಟ್ಟು ಹೋಗುತ್ತಿದ್ದರು ಮತ್ತು ಮುಂದಿನ ಚುನಾವಣೆಗಳಲ್ಲಿ ಅದರ ಬಲ ಇನ್ನಷ್ಟು ಇಳಿಯುತ್ತಿತ್ತು. ಮುಂದಿನ ಲೋಕಸಭಾ ಚುನಾವಣೆಗಳ ಸಿದ್ಧತೆಯಲ್ಲಿ ಇಂತಹ ಪರಿಸ್ಥಿತಿ ಆತ್ಮಹತ್ಯಾಕಾರಿಯಾಗುತ್ತಿತ್ತು.

ಅತ್ತದರಿ ಇತ್ತಪುಲಿ

ಬಿಜೆಪಿ ಹೀಗೆ 'ಅತ್ತದರಿ ಇತ್ತ ಪುಲಿ' ಎಂಬ ಸ್ಥಿತಿಯಲ್ಲಿತ್ತು. ಉತ್ತರ ಪ್ರದೇಶದಲ್ಲಿ ತನ್ನ ಪ್ರಥಮ ಶತ್ರು ಎಂದು ಅದು ಪರಿಗಣಿಸಿದ್ದ 'ಮುಲ್ಲಾ ಮುಲಾಯಂ' ನೇತೃತ್ವದ ಒಂದು ಪರ್ಯಾಯ ಸರಕಾರದ ರಚನೆಗೆ ಕೊನೆಗೂ ಅದು ಒಪ್ಪಲೇಬೇಕಾಯಿತು. ಎಂಬುದೀಗ ತಮಾಷೆಯ ಸಂಗತಿ. ಬಿಜೆಪಿ ಗಡುಗಗಳ ಮುಖಂಡ ಉಪ ಪ್ರಧಾನಮಂತ್ರಿ ಎಲ್.ಕೆ.ಅಡ್ವಾಣಿ ಇದಕ್ಕೆ ವಿರುದ್ಧವಾಗಿದ್ದರಂತೆ. ಆದರೆ ಕೊನೆಗೆ ಅವರೂ ಮಣಿಯಬೇಕಾಯಿತಂತೆ.

ಆದರೆ ಇದನ್ನೂ ಬಿಜೆಪಿ ತನ್ನ ಉದಾರತೆ ಎಂದು ಪ್ರದರ್ಶಿಸಲು ಹೊರಟಿದೆ. ಮುಲಾಯಂ ಸಿಂಗ್ ಯಾದವ್ ಏಕೈಕ ದಾವೇದಾರರಾಗಿದ್ದರೂ ರಾಜ್ಯಪಾಲರು ಅವರನ್ನು ಸರ್ಕಾರ ರಚಿಸಲು ಆಹ್ವಾನಿಸಲಿಲ್ಲ. ವಿವಿಧ ಪಕ್ಷಗಳ ಮುಖಂಡರು ಅವರನ್ನು ಭೇಟಿಯಾದ ನಂತರ ಮುಲಾಯಂರವರಿಗೆ 204 ಸದಸ್ಯರ ಬೆಂಬಲವಿದೆ ಎಂದು ಒಪ್ಪಿಕೊಂಡರೂ ಅವರು ತಮ್ಮ ಬೆಂಬಲಿಗರ ಪಟ್ಟಿಯನ್ನು ಕೊಡುವಂತೆ ಕೇಳಿದರು. ಮುಲಾಯಂ ನೀತಿಯ ಪ್ರಶ್ನೆಯಾಗಿ ಪಟ್ಟಿ ಸಲ್ಲಿಸಲು ನಿರಾಕರಿಸಿದರು. ಬಿಜೆಪಿ ಮುಖಂಡತ್ವದ ಹಸಿರು ನಿಶಾನೆಯ ನಂತರವೇ ರಾಜ್ಯಪಾಲರು ಮುಲಾಯಂರನ್ನು ಸರಕಾರ ರಚಿಸಲು ಆಹ್ವಾನಿಸಿದರು ಎಂದು ನಂಬಲು ಬಹಳ ಕಾರಣಗಳಿವೆ. ಆದ್ದರಿಂದ ಇಲ್ಲಿ ಬಿಜೆಪಿಯ ಉದಾರತೆಯೇನು ಇಲ್ಲ, ಅದಕ್ಕೆ ಬೇರೆ ದಾರಿಯೇ ಇರಲಿಲ್ಲ.

ಮುಲಾಯಂ ಬಿಜೆಪಿ ಶಾಸಕರನ್ನು ಸೆಳೆಯಲು ಪ್ರಯತ್ನಿಸಿದ ಕೂಡಲೇ ರಾಷ್ಟ್ರಪತಿ ಆಳ್ವಿಕೆ ಹೇರಲಾಗುವುದು ಎಂದು ಬಿಜೆಪಿ ಮುಖಂಡರು ಬೆದರಿಕೆ ಹಾಕಿರುವುದಾಗಿ ವರದಿಯಾಗಿದೆ. ಅದರ ಉದಾರತೆಯ ನಿಜ ಬಣ್ಣ ಇದು. ಮುಲಾಯಂ ಬಿಎಸ್‌ಪಿ ಶಾಸಕಾಂಗ ಪಕ್ಷವನ್ನು ಮುರಿದರೆ ಪರವಾಗಿಲ್ಲ, ಬಿಜೆಪಿ ಶಾಸಕರ ಮೇಲೆ ಮಾತ್ರ ಕಣ್ಣು ಹಾಕಬಾರದು ಎಂದು ಬಿಜೆಪಿ ಮುಖಂಡರು ಬೆದರಿರುವುದಾಗಿ ವರದಿಯಾಗಿದೆ.

ಈ ನಡುವೆ ಮಾಯಾವತಿಯವರು "ಸಮಾಜವಾದಿ ಪಕ್ಷದ ಮುಖಂಡರು ಬಿಜೆಪಿ ಮುಖಂಡರೊಂದಿಗೆ ಗುಪ್ತ ಒಪ್ಪಂದ ಮಾಡಿಕೊಂಡಿದ್ದಾರೆ" ಎಂದು ಆಪಾದಿಸಿದ್ದಾರೆ. ಕೆಲವು ಪತ್ರಕರ್ತರು ಈ ಕಥೆಯನ್ನು ಮುಂದುವರಿಸಿದ್ದಾರೆ. ಮಾಧ್ಯಮಗಳಲ್ಲೂ ಇಂತಹ ಕಥೆಗಳನ್ನು ಸೃಷ್ಟಿಸಲಾಗಿದೆ. ಅಂಬಾನಿಯೂ ಸೇರಿದಂತೆ ಕೆಲವು ದೊಡ್ಡ ಕಂಪನಿಗಳು ಲಕ್ನೌದಲ್ಲಿ ಮುಲಾಯಂ ನೇತೃತ್ವದ ಸರ್ಕಾರ ಬಯಸಿದ್ದಾರೆ ಎಂಬ ಆಪಾದನೆಗಳೂ ಇವೆ. ಇದೆಷ್ಟು ಸತ್ಯ ಎಂದು ತೀರ್ಮಾನಿಸಲು ಈಗ ಸಾಧ್ಯವಿಲ್ಲ. ಆದರೆ ಒಂದು ಮಾತಂತೂ ಸತ್ಯ - ಎತ್ತ ಹೋಗಬೇಕೆಂದು ತಿಳಿಯದ ಬಿಜೆಪಿ ಪರಿಸ್ಥಿತಿಯನ್ನು ಹೇಗಾದರೂ ಸಂಭಾಳಿಸಲು ಪ್ರಯತ್ನಿಸುತ್ತಿದೆ.

> **ಬಿಜೆಪಿ-ಬಿಎಸ್‌ಪಿ ಗಳ ಹೊಲಸು ನಾಟಕಗಳು ಬಯಲಾಗಿ ಈಗ ಮುಲಾಯಂ ಸಿಂಗ್ ನೇತೃತ್ವದ ಸರ್ಕಾರ ಉತ್ತರ ಪ್ರದೇಶಲ್ಲಿ ಅಸ್ತಿತ್ವದಲ್ಲಿದೆ. ವಿಧಾನಸಭೆಯಲ್ಲಿ ಬಹುಮತ ಸಾಬೀತಾದ ಬಳಿಕವೂ ಹಲವಾರು ಕಠಿಣ ಸವಾಲುಗಳಿವೆ. ಅಲ್ಲಿನ ಪರಿಸ್ಥಿತಿ ಮತ್ತು ಸವಾಲುಗಳನ್ನು ಹಿರಿಯ ಮಾರ್ಕ್ಸ್‌ವಾದಿ ನಾಯಕ**
>
> **ಸುರ್ಜಿತ್**
>
> **ವಿಶ್ಲೇಷಿಸಿದ್ದಾರೆ.**

ಆದರೂ ಮಾಧ್ಯಮದಲ್ಲಿನ ಆಪಾದನೆಗಳು ಮತ್ತು ಊಹಾಪೋಹಗಳ ಹಿನ್ನೆಲೆಯಲ್ಲಿ ಸಮಾಜವಾದಿ ಪಕ್ಷದ ನಾಯಕರು ತನ್ನ ವಿಶ್ವಾಸಾರ್ಹತೆಯನ್ನು ಸ್ಥಾಪಿಸಬೇಕು ಮತ್ತು ಧರ್ಮನಿರಪೇಕ್ಷತೆಗೆ ಬದ್ಧವಾಗಿರಬೇಕು.

ಮತ್ತೆ ಕೋಮುವಾದಿ ಆಟ?

ಬಿಜೆಪಿ ರಾಜ್ಯದಲ್ಲಿ ಕಳಕೊಳ್ಳುತ್ತಿರುವ ತನ್ನ ನೆಲೆಯನ್ನು ಮತ್ತು ಪ್ರತಿಷ್ಠೆಯನ್ನು ಮತ್ತೆ ಹೇಗೆ ಪಡೆಯಬಲ್ಲದು ಎಂಬುದನ್ನು ಸಮಯವೇ ಹೇಳಬೇಕು. ಈಗಂತೂ ಅದರ ಪಾಡು ಯಾರಿಗೂ ಬೇಡ. ಬಿಜೆಪಿ ಪರ ಮಾಧ್ಯಮ ವ್ಯಕ್ತಿಗಳೂ ಇದನ್ನು ಒಪ್ಪಿಕೊಂಡಿದ್ದಾರೆ. ಆದ್ದರಿಂದಲೇ ಅದು ಪರಿಸ್ಥಿತಿಯಿಂದ ಪಾರಾಗಲು ಪ್ರಯತ್ನ ನಡೆಸಿದೆ. ಜನಸಂಖ್ಯೆಯ ದೃಷ್ಟಿಯಿಂದ ದೇಶದ ಅತೀ ದೊಡ್ಡ ರಾಜ್ಯ, 81 ಲೋಕಸಭಾ ಸ್ಥಾನಗಳನ್ನು ಹೊಂದಿದೆ. ಬಿಜೆಪಿಗೆ ಉತ್ತರ ಪ್ರದೇಶ ಕೈತಪ್ಪಿದರೆ ಕೇಂದ್ರದ ಸರಕಾರವನ್ನು ಅದು ಕಳಕೊಳ್ಳಬೇಕಾಗಬಹುದು.

ಆದರೆ ಇದು ಬಿಜೆಪಿ ಎಂತಹ ಆಟವನ್ನು ಆಡಬಹುದು ಎಂಬ ಬಗ್ಗೆ ಭೀತಿಯನ್ನು ಉಂಟು ಮಾಡಿದೆ. ಅದೀಗ ದೇಶದಲ್ಲಿ, ಮುಖ್ಯವಾಗಿ ಉತ್ತರ ಪ್ರದೇಶದಲ್ಲಿ ಮತ್ತೆ ಕೋಮುವಾದೀ ತಂತ್ರವನ್ನು ಬಳಸಲು ಮುಂದಾಗಿದೆ ಎಂಬುದು ಕಾಣಬರುತ್ತಿದೆ. ತಕ್ಷಣವೇ ಅದು ಅಯೋಧ್ಯೆಯ ಬಾಬರೀ ಜಾಗದಲ್ಲಿ ಇತ್ತೀಚಿನ ಉತ್ಖನನ ಕುರಿತ ಭಾರತ ಪುರಾತತ್ವ ಸರ್ವೇಕ್ಷಣ (ಎಎಸ್‌ಐ) ವಿಭಾಗದ ವರದಿಯನ್ನು ಸಂಪೂರ್ಣವಾಗಿ ಬಳಸಲು ಪ್ರಯತ್ನಿಸುತ್ತಿದೆ. ಎ.ಎಸ್.ಐ. ನ ಈ ವರದಿಯಲ್ಲಿ ಬಹಳ ತಪ್ಪುಗಳಿವೆ, ಅದು ವಿಕೃತಗೊಳಿಸಿದ ವರದಿ ಎಂಬುದು ಸ್ಪಷ್ಟ. ಬಾಬ್ರಿ ಸ್ಥಳದ ಅಡಿ ದೇವಸ್ಥಾನವಿತ್ತು ಎಂಬ ಅದರ ತೀರ್ಮಾನ ತೀವ್ರ ಪರೀಕ್ಷಣೆಯ ಎದುರು ನಿಲ್ಲಲಾರದು. ಅಲ್ಲದೆ ಅಯೋಧ್ಯಾ ವಿವಾದವಿರುವುದು ಬಾಬ್ರಿ ಮಸೀದಿಯಿದ್ದ ಸ್ಥಳದ ಒಡೆತನ ಯಾರದ್ದು ಎಂಬ ಬಗ್ಗೆ. ಎಎಸ್‌ಐ ತೀರ್ಮಾನಕ್ಕೂ ಇದಕ್ಕೂ ಸಂಬಂಧವಿಲ್ಲ. ಆದರೆ ಸಂಘ ಪರಿವಾರ ಮುಳುಗುತ್ತಿರುವವನು ಹುಲ್ಲುಕಡ್ಡಿಗೆ ಆತುಕೊಂಡಂತೆ ಇದಕ್ಕೆ ಆತುಕೊಂಡಿದೆ. ಆದ್ದರಿಂದ ಎಎಸ್‌ಐ ತೀರ್ಮಾನಗಳಲ್ಲಿ ಸತ್ಯವಿಲ್ಲದಿದ್ದರೂ ಸಂಘ ಪರಿವಾರವಂತು ಅದನ್ನು ತನ್ನ ಆಟಕ್ಕೆ ಬಳಸುವ ಸಾಧ್ಯತೆಯಿದೆ.

ಈ ವರದಿಯ ದುರುಪಯೋಗ ಮಾಡಿಕೊಳ್ಳಲು ಹತಾಶ ಸಂಘ ಪರಿವಾರ ಪ್ರಯತ್ನ ನಡೆಸಿದೆ ಎಂಬುದು ವಿಹೆಚ್‌ಪಿ, ಬಿಜೆಪಿ ಮತ್ತು ಆರ್‌ಎಸ್‌ಎಸ್ ಮುಖಂಡರು ಎಬ್ಬಿಸಿರುವ ಗಲಾಟೆಗಳಿಂದ ಸ್ಪಷ್ಟವಾಗುತ್ತದೆ. ಉದಾಹರಣೆಗೆ, ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ನ್ಯಾಯಾಲಯದಲ್ಲಿ ಈ ವರದಿಗೆ ಸವಾಲು ಹಾಕುತ್ತೇನೆ ಎಂದಾಗ ಬಿಜೆಪಿ ಮುಖಂಡರು ಉಗ್ರವಾಗಿ ಪ್ರತಿಕ್ರಿಯಿಸಿದ್ದಾರೆ. "ಎಎಸ್‌ಐ ವರದಿಗೆ ಸವಾಲು ಹಾಕುವ ಇತರ ಪಕ್ಷಗಳನ್ನು ನಾವು ಖಂಡಿಸುತ್ತೇವೆ" ಎನ್ನುವ ಮಟ್ಟಕ್ಕೂ ಒಬ್ಬ ಬಿಜೆಪಿ ವಕ್ತಾರ ಹೋಗಿದ್ದಾನೆ. ಅಲಹಾಬಾದ್ ಹೈಕೋರ್ಟಿನ ಲಕ್ನೌಪೀಠವೇ ಈ ವರದಿಗೆ ಸವಾಲು ಹಾಕಲು 'ಇತರ ಪಕ್ಷಗಳಿಗೆ' ಸಮಯ ನೀಡಿದೆ ಎಂಬ ಸಂಗತಿಯನ್ನು ಈ ಮನುಷ್ಯ ಮರೆತಂತಿದೆ.

ಲಕ್ನೌನಲ್ಲಿನ ಹೊಸ ಆಡಳಿತ ಎಚ್ಚರದಿಂದಿರಬೇಕಾದ ವಿಷಯವಿದು. ಉತ್ತರ ಪ್ರದೇಶದಲ್ಲಿ 1990 ರಲ್ಲಿ ಮುಲಾಯಂ ಸಿಂಗ್‌ರ ಮೊದಲ ಸರಕಾರವಿದ್ದಾಗ ಸಂಘ ಪರಿವಾರ ತನ್ನ ಪುಂಡಾಟದ ಕರಸೇವಕರನ್ನು ಅಯೋಧ್ಯೆಗೆ ತಂದಿತ್ತು: ಅದರಲ್ಲಿ ಕೆಲವರ ಕೈಯಲ್ಲಿ ಡೈನಾಮೈಟ್ ಕೋಲುಗಳಿದ್ದವರನ್ನು ಬಂಧಿಸಲಾಗಿತ್ತು ಕೂಡಾ. ಆಗ ರಾಜ್ಯ ಸರ್ಕಾರದ ದೃಢ ನಿಲುವು ಪರಿಸ್ಥಿತಿಯನ್ನು ಸಂಭಾಳಿಸಿತ್ತು. ಸಂಘ ಪರಿವಾರ ಮತ್ತೆ ಈಗ ಅದೇ ಆಟವನ್ನು ಪ್ರಯತ್ನಿಸಬಹುದು. ಆದ್ದರಿಂದ ಹೊಸ ಸರ್ಕಾರ ರಾಷ್ಟ್ರೀಯ ಐಕ್ಯತೆ ಮತ್ತು ದೇಶದ ಧರ್ಮನಿರಪೇಕ್ಷ ಹಂದರವನ್ನು ರಕ್ಷಿಸಲು ಕಟ್ಟೆಚ್ಚರ ವಹಿಸಬೇಕು. ಸೆಪ್ಟೆಂಬರ್ 8 ರಂದು ವಿಶ್ವಾಸಮತ ಗೆದ್ದಮೇಲೆ ಏನು ಮಾಡುತ್ತದೆ ಎಂದು ಇಡೀ ದೇಶ ನೋಡುತ್ತಿರುತ್ತದೆ. ಒಂದು ವಿಷಯವಂತೂ ಖಂಡಿತ - ರಾಜ್ಯ ಸರ್ಕಾರ ಅಥವಾ ಅದನ್ನು ಬೆಂಬಲಿಸುವ ಪಕ್ಷಗಳಲ್ಲಿ ಯಾವುದೇ ಸಡಿಲತೆ ಈಗ ಅಂತರಿಕವಾಗಿ ದುರ್ಬಲವಾಗುತ್ತಿರುವ ಕೋಮುವಾದಿ ಶಕ್ತಿಗಳಿಗೆ ಹೊಸ ತುರುಪು ನೀಡಬಹುದು. ●



ಆತ್ಮಹತ್ಯೆಯ

ನಾಡಿನ ದುಡಿವ ಜನ ಮುಖ್ಯವಾಗಿ ರೈತರು ಬರದ ಸಮಸ್ಯೆಗಳನ್ನು ಎದುರಿಸಲಾಗದೇ ಆತ್ಮಹತ್ಯೆಗೀಡಾಗುತ್ತಿರುವಾಗ, ಆತ್ಮಹತ್ಯೆಯಲ್ಲ ಸಂಘರ್ಷದ ಹಾದಿ ಎಂಬ ಆತ್ಮವಿಶ್ವಾಸ ತುಂಬುವ, ಆಳುವವರ ನೀತಿಗಳೆದುರು ಪರ್ಯಾಯಕ್ಕಾಗಿ ಸಮರದ ರಣ ಕಹಳೆ ಊದಿದೆ ಸಿಪಿಐ(ಎಂ) ರಾಜ್ಯದಾದ್ಯಂತ ಸಮಸ್ಯೆಗಳ ಮೂಲ ಕಾರಣಗಳನ್ನು ಜಾಥಾಗಳ ಮೂಲಕ ಜನರೆದುರು ಬಿಡಿಸಿಡುತ್ತಾ ರಾಜಕೀಯ ಪ್ರಚಾರಾಂದೋಲನ ನಡೆಸಿದೆ. ರಾಜ್ಯಮಟ್ಟದ ರ‍್ಯಾಲಿಯನ್ನು ಸಂಘಟಿಸಿದೆ. ಇಂದು ನಡೆಸಬೇಕಿರುವ ಸಮರದ ಸ್ವರೂಪ - ಗೊತ್ತುಗುರಿಗಳನ್ನು ಗುರುತಿಸಿದ್ದಾರೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯವರು. ಅಲ್ಲದೇ ರಾಜ್ಯದಾದ್ಯಂತ ನಡೆದ ಪ್ರಾದೇಶಿಕ ಜಾಥಾಗಳ ವರದಿಗಳು.

"ಆತ್ಮಹತ್ಯೆಯಲ್ಲ, ಸಂಘರ್ಷ" ಇದು ಕರ್ನಾಟಕದ ಇಂದಿನ ಪರಿಸ್ಥಿತಿಯಲ್ಲಿ ದಿನವೂ ವರದಿಯಾಗುತ್ತಿರುವ ಆತ್ಮಹತ್ಯೆಗಳು ಅದರಿಂದ ಮೂಡುತ್ತಿರುವ ಹತಾಶೆಯ ಸ್ಥಿತಿಯಲ್ಲಿ, ಸಿಪಿಐ(ಎಂ) ಪಕ್ಷದ ರಣ ಕಹಳೆ.

ರೈತರನ್ನು ಆತ್ಮಹತ್ಯೆಗೆ ದೂಡಿರುವ, ಕಾರ್ಮಿಕರನ್ನು ಹಿಂದು ಹಿಂದಕ್ಕೆ ಸರಿಯುವಂತೆ ಮಾಡುತ್ತಿರುವ, ಈ ದು:ಖದ, ಜೀವನದ ಭಾರವನ್ನು ಮಹಿಳೆಯರ ಮೇಲೆ ಹೇರುತ್ತಿರುವ, ಯುವಕರಿಗೆ ಉದ್ಯೋಗವನ್ನು ಹಗಲು ಗನಸನ್ನಾಗಿ ಮಾಡಿರುವ, ಬಡ ವಿದ್ಯಾರ್ಥಿಗಳಿಗೆ ಉದ್ಯೋಗಾರ್ಹ ಶಿಕ್ಷಣವನ್ನು ನಿರಾಕರಿಸುತ್ತಿರುವ ನೀತಿಗಳ ವಿರುದ್ಧ **ಸಂಘರ್ಷ**

1991 ರಿಂದ ದೇಶವನ್ನು ಹಿಂಡುತ್ತಿರುವ ಜಾಗತೀಕರಣ, ಖಾಸಗೀಕರಣ ಉದಾರೀಕರಣದ ವಿರುದ್ಧ ಸಂಘರ್ಷ, ವಿದೇಶಿ ಕೃಷಿ ಉತ್ಪಾದನೆ ಹಾಗೂ ಕೈಗಾರಿಕಾ ಉತ್ಪಾದನೆಗಳ ಆಮದು ವಿರುದ್ಧ **ಸಂಘರ್ಷ.**

ವಿಶ್ವವ್ಯಾಪಾರ ಸಂಸ್ಥೆಯ ಮೂಲಕ, ವಿಶ್ವ ಬ್ಯಾಂಕ್ ಮೂಲಕ ಅಮೇರಿಕಾ ಮೊದಲಾದ ಸಾಮ್ರಾಜ್ಯಶಾಹಿ ದೇಶಗಳು ಅಭಿವೃದ್ಧಿಗಳ ಮೇಲೆ ಹೇರುತ್ತಿರುವ ಅನ್ಯಾಯಕರ ನಿಯಮಗಳ ವಿರುದ್ಧ ಸಂಘರ್ಷ. ಜಗತ್ತಿನೆಲ್ಲೆಡೆ ಸಾಮ್ರಾಜ್ಯ ಶಾಹಿ ಶಕ್ತಿಗಲ ವಿರುದ್ಧ ಸಂಘರ್ಷ ಹೂಡಿರುವ ಜನ ಸಮುದಾಯದ ಜೊತೆಗೂಡುವ **ಸಂಘರ್ಷ.**

ಅಮೇರಿಕಕ್ಕೆ, ವಿಶ್ವಬ್ಯಾಂಕ್ ಗಳಿಗೆ ಶರಣಾಗಿ ನಮ್ಮನ್ನು ಬಲಿಕೊಡುತ್ತಿರುವ ಬಿಜೆಪಿ ಕೂಟದ ವಾಜಪೇಯಿ ಸರಕಾರ ಹಾಗೂ ಕಾಂಗ್ರೆಸ್‌ನ ಎಸ್.ಎಂ.ಕೃಷ್ಣ ಸರ್ಕಾರದ ವಿರುದ್ಧ ಸಂಘರ್ಷ. ಭಾರತದ ಸ್ವಾತಂತ್ರ್ಯವನ್ನು ಸ್ವತಂತ್ರ ವಿದೇಶಾಂಗ ನೀತಿಯನ್ನು ಅಮೇರಿಕಕ್ಕೆ ಬಲಿಕೊಡ ಬೇಡಿ ಎಂದು ಸಾರುವ **ಸಂಘರ್ಷ.**

ಜನ ಸಮುದಾಯ ಸಂಘರ್ಷದ ಹಾದಿ ಹಿಡಿಯುವುದನ್ನು ತಪ್ಪಿಸಲು ಕೋಮುದಂಗೆಗಳನ್ನು ಉಂಟು ಮಾಡುತ್ತಿರುವ ಹಿಂದೂ-ಮುಸ್ಲಿಂ

ಅರಿವನ್ನು ವಿಸ್ತರಿಸಿದ ಜಾಥಾ

ವಿಠ್ಠಲ ಭಂಡಾರಿ

ಆಗಸ್ಟ್ 21, ಅಂದು ದಾಂಡೇಲಿಯಲ್ಲಿ ಉದ್ಘಾಟನೆಗೊಂಡು 26 ರಂದು ಬಿಜಾಪುರದಲ್ಲಿ ಕೊನೆಗೊಂಡ ಜಾಥಾದಲ್ಲಿ 6 ದಿನಗಳ ಕಾಲ ಭಾಗವಹಿಸಲು ಸಾಧ್ಯವಾಗಲಿಲ್ಲ. ಆದರೆ ಭಾಗವಹಿಸಿ ಸಂಚರಿಸಿದ 4 ದಿನಗಳ ಕಾಲ ಉತ್ತರಕನ್ನಡ, ಹಾವೇರಿ, ಧಾರವಾಡ, ಗದಗ, ಬೆಳಗಾವಿ ಜಿಲ್ಲೆಗಳಲ್ಲಿನ ರೈತ ಸ್ಥಿತಿ ನೋಡಿ ಅಂದುಕೊಂಡೆ; ನಮ್ಮ ಪುರಾಣಗಳಲ್ಲಿ, ಮಹಾಕಾವ್ಯಗಳಲ್ಲಿ ಬರುವಂತೆ ಶಾಪಕೊಡುವ, ಶಾಪದಿಂದ ನರಳುವ ಸ್ಥಿತಿಯೇನಾದರೂ ಇದ್ದರೆ ಖಂಡಿತವಾಗಿ ಅಲ್ಲಿಯ ರೈತರ ಶಾಪಕ್ಕೆ ಸಿಕ್ಕಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಉರಿದು ಭಸ್ಮವಾಗಿಬಿಡುತ್ತಿದ್ದವೇನೋ?

ಅಂತಹ ದಯನೀಯ ಸ್ಥಿತಿ ಆ ಭಾಗದ ರೈತರದು. ನಾನು ಉತ್ತರಕನ್ನಡದಲ್ಲಿ ರೈತರ ಕೆಲವು ಪ್ರಶ್ನೆಗಳ ಬಗ್ಗೆ ಮಾತನಾಡಿದ್ದೆ; ಅಥವಾ ಕೇಂದ್ರ ಮತ್ತು ರಾಜ್ಯ ಸರ್ಕಾರದ ರೈತವಿರೋಧಿ ನೀತಿಯನ್ನು ಪ್ರತಿಭಟಿಸುವ ಸಂದರ್ಭದಲ್ಲಿ ರೈತರ ಕಷ್ಟಗಳ ಬಗ್ಗೆ ವಿವರಿಸಿದ್ದೆ. ಅಡಿಕೆ-ತೆಂಗು ಬೆಳೆಗಳಿಗೆ ಬೆಲೆ ಕುಸಿದಾಗ, ಗೇರು ಹುಳಿ ಇತ್ಯಾದಿಗಳಿಗೆ ಬೆಲೆ ಇಲ್ಲದಿದ್ದಾಗ ಹೀಗಾದರೆ ರೈತ ಬದುಕುವುದಾದರೂ ಹೇಗೆ ಎಂದು ಯೋಚಿಸಿದೆ. ಆದರೆ ಗದಗ ಬೆಳಗಾವಿ, ಧಾರವಾಡದ ರಸ್ತೆಯ ಇಕ್ಕೆಲಗಳಲ್ಲಿ, ಈ ಜಿಲ್ಲೆಗಳ ಹಳ್ಳಿಗಳಿಗೆ ಜಾಥಾ ಹೋದಾಗ ಒಂದೇ ಒಂದು ಹಸಿರಿಲ್ಲದ ಬಣಬಣಗುಡುವ ಕಣ್ಣಳತೆಯವರೆಗೆ ಕಾಣುವ ಹೊಲಗಳನ್ನು ಕಂಡಾಗ, ಬೆಳಿಗ್ಗೆಯಿಂದ ಸಂಜೆಯವರೆಗೆ ಹಳ್ಳಿಯ ಅರಳಿ ಕಟ್ಟೆಯ ಮೇಲೆ ಕುಳಿತು ಮಳೆಯ ಮೋಡಗಳ ಬರವನ್ನು ಕಾಯುತ್ತಾ ಕುಳಿತ ನೂರಾರು ಅನ್ನದಾತರ ಸೊರಗಿದ ಮೋರೆಯನ್ನು ನೋಡುವಾಗ ನಮ್ಮ ಜಿಲ್ಲೆಯ ರೈತ ಇರುವುದರಲ್ಲಿಯೇ ಸುಖಿ ಎನಿಸಿತು. ಜಾಥಾದಿಂದ ಬಂದ ತಕ್ಷಣ ಅನೇಕರಲ್ಲಿ ಹೇಳಿದ್ದು ಒಮ್ಮೆ ಬರಗಾಲದ ನಾಡಿನ ರೈತರ ಸ್ಥಿತಿ ನೋಡಿ ಬನ್ನಿ, ನನ್ನ ತಂದೆಯವರಲ್ಲಿ ನಿಮ್ಮಂಥ ಸಾಹಿತಿಗಳೆಲ್ಲ ಒಮ್ಮೆ ರೈತರ ಗೋಳನ್ನು, ಬಂಗಾರಬೆಳೆವ ಭೂಮಿಯಲ್ಲಿ ಬದುಕುವುದಕ್ಕಾಗಿ ಹೆಣಗಾಡುವ ಜನರ ಸ್ಥಿತಿಯನ್ನು ನೋಡಿಬನ್ನಿ. ಅವರ ಕಷ್ಟ ನಮ್ಮ ಜಿಲ್ಲೆಯ ರೈತನ, ಕೃಷಿಕೂಲಿಕಾರರ ಕಷ್ಟದ ನೂರು ಪಟ್ಟು ಹೆಚ್ಚು; ಅವರ ಸ್ಥಿತಿಯನ್ನು ನೋಡಿ ಹಿಂತಿರುಗುವಾಗ ಆಡಳಿತ ಪಕ್ಷದ ಯಾವುದೇ ಜನಪ್ರತಿನಿಧಿ ಸಿಕ್ಕರೂ ಕ್ಯಾಕರಿಸಿ ಅವನ ಮುಖಕ್ಕೆ ಉಗುಳದೇ ಬರಲಿಕ್ಕಿಲ್ಲ" ಎಂದೆ.

ಗೋಹತ್ಯೆ ನಿಷೇಧಿಸುವ ಕಾನೂನು ತರಲು ಹೊರಟ ಬಿಜೆಪಿ ಮತ್ತು ರಾಜ್ಯವನ್ನೇ ಸಾಫ್ಟ್‌ವೇರ್ ಕೇಂದ್ರವನ್ನಾಗಿಸ ಹೊರಟ ಕಾಂಗ್ರೆ ಸರಕಾರ ಗಳೆರಡೂ ಇಷ್ಟು ಕಾರ್ಯಪೂರ್ಣವಾಗುವ ಮೊದಲು ಈ ರೈತನ ಬದುಕು ಸುಧಾರಿಸಲು ಅವನ ಆತ್ಮಹತ್ಯೆ ತಡೆಯಲು ಯಾಕೆ ಪ್ರಯತ್ನಿಸುತ್ತಿಲ್ಲ ಎಂದು ಯೋಚಿಸಿದೆ. ಇಂದು ರೈತನ ಹೆಣದ ಮೇಲೆ ರಾಜಕೀಯ ನಡೆಸುವ ಇವರು ತಮ್ಮ ಎಂ.ಎಲ್.ಎ.ಗಳಿಗೆ, ಮಂತ್ರಿ ಗಳನ್ನು ವಿದೇಶಕ್ಕೆ ಕಳುಹಿಸುವ ಬದಲು ಇಂತಹ ಬರದ ನಾಡಿಗೆ ಕಡ್ಡಾಯವಾಗಿ ಕಳುಹಿಸುವುದೊಳಿತು. ಏನಿಲ್ಲದಿದ್ದರೂ ಕರ್ನಾಟಕ ಎಂದರೇನು ಎಂದಾದರೂ ಅರ್ಥವಾದೀತು. (ಅಲ್ಲಿಯ ಜನ ಇದನ್ನು ವಿರೋಧಿಸಬಹುದು ಇಲ್ಲಿಗೆ ಬಂದ ಇದ್ದಬಿದ್ದ ಒಣ ಮೇವನ್ನು ತಿಂದು ಮುಗಿಸಬಹುದೆಂಬ ಭಯ ಇವರದು).

ಮಳೆ ಇಲ್ಲದೆ ಮುಂಗಾರು ವಿಫಲವಾಗಿದೆ; ಹಿಂಗಾರಿಗಾಗಿ ಹೊಲವನ್ನು ಉತ್ತಿಟ್ಟಿದ್ದಾರೆ. ಮಳೆಯ ಲಕ್ಷಣವಿಲ್ಲ. ಕೃಷಿ ಕೂಲಿಕಾರರದಂತೂ ನರಕ ಸದೃಶ ಬದುಕು. ಅನೇಕ ಜನ ಗುಳೆ ಎದ್ದು ಹೋಗಿದ್ದಾರೆ. ಕಣಜ ಬೆಳೆದ ರೈತನಿಗೆ ಉಣಲಾಕ ಕೂಳಿಲ್ಲ ಎನ್ನುವ ಸ್ಥಿತಿ. ಅವರು "ರೈತರು ಆತ್ಮವಿಶ್ವಾಸದಿಂದ ಇರಬೇಕು. ಸಾವಿಗೆ ಶರಣಾಗ ಬಾರದು" ಎಂದು ವಿಧಾನಸೌಧದ ಹವಾನಿಯಂತ್ರಿತ ಕೋಣೆಯಲ್ಲಿ ಕುಳಿತು ಉಪದೇಶ ಮಾಡುವ ಎಸ್.ಎಂ.ಕೃಷ್ಣರವರ ಮಾತು ಅತ್ಯಂತ ಹಾಸ್ಯಾಸ್ಪದವಾಗಿ ಕಾಣುತ್ತಿದೆ. ರೈತನ ಜೀವಕ್ಕೆ 1 ಲಕ್ಷ ರೂ. ಬೆಲೆಕಟ್ಟಿ, ಸತ್ತ ದಿನವೇ 25 ಸಾವಿರ ಕೊಡುತ್ತೇವೆಂದು (ಜಾಹೀರಾತು ಗಳನ್ನು ಕೊಟ್ಟು ಆಹ್ವಾನ ಕೊಟ್ಟಂತೆ) ಘೋಷಿಸುವ ಮೂಲಕ ತಮ್ಮ ಜವಾಬ್ದಾರಿಯಿಂದ ಮುಕ್ತರಾದೆವೋ ಎನ್ನು ವಂತಿರುವ ರಾಜ್ಯ ಸರ್ಕಾರದ ನಿರ್ಲಿಪ್ತತೆ ಹೇಸಿಗೆ ಹುಟ್ಟಿಸುವಂತಿದೆ.

ಹಾವೇರಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ಕೇಂದ್ರ ಮತ್ತು ರಾಜ್ಯ ಸರ್ಕಾರದ ನೀತಿಯೇ ಹೇಗೆ ರೈತ್ತರ ಆತ್ಮಹತ್ಯೆಗೆ ಕಾರಣ ಆಗಿದೆ ಎಂದು ವಿವರಿಸುತ್ತಿದ್ದಂತೆ ಸುತ್ತು ಸೇರಿ ಚಪ್ಪಾಳೆ ತಟ್ಟಿ ಸ್ವಾಗತಿಸಿದರು. ಒಂದೇ ಸಭೆಯಲ್ಲಿ 130 ರಷ್ಟು ಜಾಥಾ ಪುಸ್ತಕ ಮಾರಾಟ ಆಯಿತು. ಮೊದಲು ಪುಸ್ತಕ ತೆಗೆದುಕೊಳ್ಳಲು ಒಲ್ಲದ ಜನರು ಭಾಷಣ ನಡೆಯುತ್ತಿದ್ದಂತೆ, ಒಬ್ಬೊಬ್ಬರಾಗಿ ಬಂದು ಪುಸ್ತಕ ಕೊಂಡುಕೊಂಡರು. ಜಾಥಾ ನಿಧಿಗಳಾಗಿ ತಮ್ಮಲ್ಲಿರುವ 2-3 ರೂ.ಗಳ ನಾಣ್ಯವನ್ನು ಕೊಟ್ಟರು, ಜಾಥಾದ ಯಶಸ್ಸಿಗೆ ಹಾರೈಸಿದರು. ತಹಶೀಲ ಕಛೇರಿಗೆ ಬಂದ ರೈತನೊಬ್ಬ 3-4 ಬಾರಿ ಬಂ ಪುಸ್ತಕ ನೋಡಿ ಹೋದ. ಕೊನೆಯಲ್ಲಿ ಯ ಹೀಗೆಂದು ವಿಚಾರಿಸಿದಾಗ ನನ್ನಲ್ಲಿ ಇರುವ ಎರಡೇ ರೂಪಾಯಿ. ನೀವಿಷ್ಟು ಹೇಳಿದ ಮೆ ಪುಸ್ತಕ ಓದೋಣ ಎಂದೆನಿಸುತ್ತದೆ. ಒ ರೂಪಾಯಿ ನನ್ನಲ್ಲಿ ಇಲ್ಲ ಎಂದು ಕಣ್ಣೀರು ತ ಹೇಳಿದಾಗ ಎಂಥವರ ಹೃದಯ ಕ ಕರಗಲೇಬೇಕು. ಆ ರೈತನಿಗೆ ಪುಸ್ತಕ ಹಣಬೇಡ ಎಂದಾಗ ನಮಗಾಗಿ ನೀವು ಮಾಡುತ್ತಿದ್ದಾಗ ನಾನ್ಯಾಕೆ ಸುಮ್ಮನಿರಬೇಕು. ತ 2 ರೂಪಾಯಿ ಎಂದು ಕೊಟ್ಟೇ ಹೋದ.

ಇನ್ನೊಂದು ಹಳ್ಳಿಗೆ ಹೋದಾಗ ಕೂಲಿಕಾರರು ಬಂದು ನಮಗೆ ದಿನಕ್ಕೆ ರೂ.ಸಂಬಳ ಕೊಟ್ಟು ಒಂದು ಊಟ ಹಾ ನಾವು ನಿಮ್ಮೂರಿಗೆ ಬರುತ್ತೇವೆ. ಒಂದು ವಾ ಮಾಡಿ ಕರೆದುಕೊಂಡು ಹೋಗಿ, ಈ ಊ ಮಳೆ ಆದಾಗ ನಮ್ಮನ್ನು ತಂದುಬಿಡಿ ನೂ ಜನ ದೈನ್ಯವಾಗಿ ಬೇಡಿಕೊಳ್ಳುತ್ತಿರುವಾಗ ದ ದೇಶ ಆಳುವ ಜನರಿಗೆ ಧರ್ಮದ ಹೆಸರು ಜಾತಿಯ ಹೆಸರಿನಲ್ಲಿ, ಪ್ರಾದೇಶಿಕತೆಯ ಹೆಸ ರಾಜಕೀಯ ಮಾಡುತ್ತಾ ಕುಳಿತಿರಲು ಹೇಗೆ ಬರುತ್ತದೋ?



ಸಭೆಯನ್ನುದ್ದೇಶಿಸಿ [illegible]ಸ್ವಾಮಿ

ರಾಮದುರ್ಗದಲ್ಲಿ ಒಬ್ಬ ರೈತನನ್ನು ಎಂ.ಎಲ್.ಎ.ಎಲ್ಲಿ' ಎಂದು ಕೇಳಿದಾಗ ' ಎಂದು ಅವರು ಬೆಂಗಳೂರಿನಲ್ಲಿಯೇ ಇರು ಮಳೆಬಿದ್ದು ತಂಪಾದಾಗ ಬರಬಹುದು'.

ಇವನ ಮನೆಯೊಳಗಿಲ್ಲ ಹಕ್ಕಿ
ಆದರೂ ಈತನಿಗೆ ಹೆಸರು ಹಾಲಕ್ಕಿ
ಹಾಲು ಅಕ್ಕಿಗಳೆರಡೂ ಹೆಸರೊಳಗೆ ಮಾತ್ರ
ಹಸಿವೆಯೆಂಬುದು ಇವನ ಹಣೆಯ ಕುಲಗೋತ್ರ
- ದಿನಕರ ದೇಸಾಯಿ
(ಉ.ಕ. ಜಿಲ್ಲೆಯ ಬಡ ಹಾಲಕ್ಕಿ ಜನಾಂಗದ ಹಸಿವೆಯ ಬಗ್ಗೆ ಬರೆದಿದ್ದು)

ಸಂಘರ್ಷ !

ುವಾದಿ ಶಕ್ತಿಗಳ ವಿರುದ್ಧ ಸಂಘರ್ಷ. ರಿವಾರವೆಂಬ ಹಲವು ತಲೆಯ ರ್ಪ ಹಲವುನಾಲಗೆಗಳು ಹುಟ್ಟಿಸುತ್ತಿರುವ ಗೊಂದಲದ ವಿರುದ್ಧ ಸಂಘರ್ಷ. ಈ ುವಾದಿ ವಿಷ ಸರ್ಪಗಳನ್ನು 'ಬೆಳಯ' ವ ರಾಜ್ಯ ಸರ್ಕಾರದ ಉದಾರ ವಿರುದ್ಧ ಸಂಘರ್ಷ. ಪ್ರತಿಕಾರದ ಲ್ಲಿ ಬಾಂಬೆಸೆದು ನಿರಪರಾಧಿಗಳನ್ನು ಕೊಲ್ಲುವ ಭಯೋತ್ಪಾದಕ ಸಂಸತಿಯ ವಿರುದ್ಧ ಸಂಘರ್ಷ. ಭಯೋತ್ಪಾದಕತೆಯ ವಿರುದ್ಧ ಸೆಣಸುತ್ತಿರುವ ಜಮ್ಮು ಕಾಶ್ಮೀರದ ಜನತೆಗೆ ಗರಿಷ್ಠ ಸ್ವಯತ್ತತೆ ನೀಡಲೆಂದು ಒತ್ತಾಯಿಸಿ **ಸಂಘರ್ಷ.**

ಈ ಸಂಘರ್ಷದ ರಣಕಹಳೆಯನ್ನು ಹೊತ್ತು ಸಿಪಿಐ(ಎಂ) ಪಕ್ಷದ 6 ಜಾಥಾಗಳು ರಾಜ್ಯದಾದ್ಯಂತ ಸಂಚರಿಸಿವೆ. ಜನರಲ್ಲಿ ಹತಾಶೆಯನ್ನು ಹೊಡೆದೋಡಿಸಲು ಸಂಘರ್ಷದ ಸ್ಥೈರ್ಯವನ್ನು ಬಿತ್ತಲು ಪ್ರಯತ್ನಿಸಿವೆ. ಸೆ. 9 ರ ರ‍್ಯಾಲಿ ಈ ಸಂಘರ್ಷದ ರಣಕಹಳೆಯನ್ನು ರಾಜ್ಯದ ಮೂಲೆ ಮೂಲೆಯಲ್ಲಿ ಮೊಳಗಿಸುವ ವೇದಿಕೆಯಾಗಲಿ.

"ಕಾಳ ಹರೆ ಕೊಂಬುಗಳ
ಮೊಳಗಿ ಏಳಿ ಏಳಿ"
ಸಂಘರ್ಷದ ರಣ ಕಹಳೆ ಕೇಳಿ"



ಸಂಖ್ಯಾತ ಮತ್ತು ಅಲ್ಪಸಂಖ್ಯಾತ ಮುವಾದಗಳೆರಡೂ ಪಿಡುಗುಗಳು

ತಂತ್ರ್ಯ ಹೋರಾಟ ಕಾಲದಿಂದ ಬೆಳೆದು ಕೋಮು ಸೌಹಾರ್ದತೆ ಮತ್ತು ಭ್ರಾತೃತ್ವ ನಾಶ ಮಾಡಲು ಹೊರಟಿರುವ ಬಹು ತ ಮತ್ತು ಅಲ್ಪಸಂಖ್ಯಾತ ಕೋಮು ಗಳೆರಡೂ ಒಂದನ್ನೊಂದು ಪೋಷಿಸಿ ುತ್ತಿರುವ ಪಿಡುಗುಗಳಾಗಿವೆ ಎಂದು (ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಬಿ.ಮಾಧವ ಅವರು ಹೇಳಿದ್ದಾರೆ. ತ್ರ್ಯ ಹೋರಾಟದಲ್ಲಿ ಹಿಂದೂ, ಮುಸ್ಲಿಂ, ಖ್ ಇತ್ಯಾದಿ ಎಲ್ಲಾ ಧರ್ಮಗಳ ಜನರು ಹಿಸಿ ತ್ಯಾಗ - ಬಲಿದಾನಗಳನ್ನು ದ್ದಾರೆ. ಆ ಧೀರ ಹೋರಾಟದಲ್ಲಿ ಬೆಳೆದ ರ್ದತೆಯನ್ನು ಇಂದು ಒಡೆಯುತ್ತಿರುವ ಯು ದೇಶದ ಐಕ್ಯತೆಗೇ ಅಪಾಯಕಾರಿ ದೆ ಎಂದು ಅವರು ಎಚ್ಚರಿಸಿದರು.

ಅಗೋಸ್ಟ್ 26 ರಂದು ಸಿಪಿಐ(ಎಂ) ದ ಕರಾವಳಿ ಜಾಥಾವನ್ನು ತೊಕ್ಕೋಟು ೋಸ್ಟ್ ಬಳಿ ಸ್ವಾಗತಿಸಲು ಸೇರಿದ್ದ ನ್ನುದ್ದೇಶಿಸಿ ಮಾತನಾಡುತ್ತಿದ್ದರು. ಕೇಂದ್ರ ರದ ಉದಾರೀಕರಣದ ನೀತಿಗಳಿಂದಾಗಿ ್ಯೋಗಿಗಳ ಸಂಖ್ಯೆ ವಿಪರೀತವಾಗಿ ನ್ನು, ಹತಾಶ ನಿರುದ್ಯೋಗಿ ಯುವಜನರ ವಿಭಾಗವನ್ನು ಕೋಮುವಾದಿಗಳು ಕಾರಿ ಚಟುವಟಿಕೆಗಳಿಗೆ ಬಳಸಿ ತ್ತಿದ್ದಾರೆ ಎಂದು ಅವರು ಹೇಳಿದರು. ಕರ ಐಕ್ಯತೆಯನ್ನು ಮುರಿಯಲು ಕೇಂದ್ರ ರವು ಕಾರ್ಮಿಕ ಕಾನೂನುಗಳಲ್ಲಿ ಕರ ಪರವಾದ ತಿದ್ದುಪಡಿಗಳನ್ನು ತ್ತಿರುವುದನ್ನು ಅವರು ಖಂಡಿಸಿದರು. ಥಾದ ನಾಯಕರಾದ ರಾಜ್ಯಸಮಿತಿ ಶಾಂತರಾಮ್ ನಾಯಕ್ ಅವರು ಾಡುತ್ತಾ, ಗೋಹತ್ಯೆಯನ್ನೇ ದೇಶದ ಸಮಸ್ಯೆ ಎಂಬಂತೆ ಬಿಂಬಿಸುತ್ತಿರುವ ರಿವಾರದವರು ಧರ್ಮದ ಹೆಸರಿನಲ್ಲಿ ುವ ಮಾನವ ಹತ್ಯೆಗಳ ಬಗ್ಗೆ ರಾಗಿಲ್ಲ ಎಂದು ಟೀಕಿಸಿದರು. ಯ ಸರಕಾರವು ಅಮೇರಿಕ ಕಿರಿಯ ಾರನಂತೆ ವರ್ತಿಸುತ್ತಿದ್ದು, ಈ ದೇಶದ ೀತಿಯನ್ನೂ, ಸಾರ್ವಭೌಮತೆ ಯನ್ನೂ ಾಡಲಾಗುತ್ತಿದೆ ಎಂದು ಅವರು ರು.

ಐ(ಎಂ) ಉಳ್ಳಾಲ ವಲಯ ು ಕಾರ್ಯದರ್ಶಿ ರಾಮಚಂದ್ರ ಮಾತನಾಡುತ್ತಾ, ರೈತರ ್ಯೆಗಳಿಗೆ ಕೇಂದ್ರ ಸರಕಾರದ ೀ ಮೂಲಕಾರಣ ಎಂದು ದರು. ರೈತರು ಹತಾಶರಾಗದೇ ತರಾಗಿ ಸರಕಾರದ ತಪ್ಪು ನೀತಿಗಳ ಹೋರಾಟ ನಡೆಸುವ ಮೂಲಕ ಗಳನ್ನು ಸೋಲಿಸಬೇಕು ಎಂದು ಕರೆ ನೀಡಿದರು.

ಜಪ್ಪು ಸ್ವಾಗತಿಸಿ, ರಾಮಚಂದ್ರ ಅವರು ವಂದಿಸಿದರು.


ನೊಂದ ಜನರಿಗೆ ಧ್ವನಿಯಾಗಿ ಆತ್ಮವಿಶ್ವಾಸ ತುಂಬಿದ ಜಾಥಾಗಳು

ಕಮಲಾಪುರ ಕ್ಷೇತ್ರ

ಈ ಮಹತ್ವದ ರಾಜಕೀಯ ಪ್ರಚಾರಾಂದೋಲನವನ್ನು ಜನತೆಯ ನಡುವೆ ಕೊಂಡೊಯ್ಯಲು ಸಿಪಿಐ(ಎಂ) ನ ಗುಲಬರ್ಗಾ ಜಿಲ್ಲಾ ಸಮಿತಿಯ ಇನ್ನೊಂದು ವಿಶಿಷ್ಟ ಪ್ರಯತ್ನವೇ ಕಮಲಾಪುರ ಕ್ಷೇತ್ರದಾದ್ಯಂತ ಹಮ್ಮಿಕೊಳ್ಳಲಾದ ಹಳ್ಳಿಗಳತ್ತ ವಿಶೇಷ ಜಾಥಾ. ಈ ಜಾಥಾ ಅಗಸ್ಟ್ 23 ರಂದು ಉದ್ಘಾಟನೆಗೊಂಡು ಸಮಾರೋಪ ಗೊಂಡದ್ದು ಸೆಪ್ಟೆಂಬರ್ 2 ರಂದು. ಮಳೆಯ ಕಾರಣದಿಂದ ಯೋಜಿತ ಪಾದಯಾತ್ರೆಯು ವಾಹನ ಜಾಥಾವಾಗಿ ಪರಿವರ್ತನೆಯಾಗಿ ಸಭೆಗಳು ನಡೆದ ಹಳ್ಳಿಗಳು ಸುಮಾರು 75 ಕ್ಕೂ ಅಧಿಕ. ನಾಯಕರ ಪ್ರತಿ ಮಾತುಗಳನ್ನು ತೆರೆದ ಮನಸ್ಸಿನಿಂದ ಕೇಳಿದ ಜನರ ಸ್ಪಂದನ ಅಪೂರ್ವ. ಮಾರುತಿ ಮಾನ್ಪಡೆ, ಜಿಲ್ಲಾ ಸಕ್ರೆಟಾರಿಯೇಟ್ ಸದಸ್ಯ ಮೇಘರಾಜ್ ಕಠಾರೆ, ಕಮಲಾಪುರ ಪ್ರದೇಶ ಸಮಿತಿಯ ಕಾರ್ಯದರ್ಶಿ ವಿರುಪಾಕ್ಷ ತಡಕಲ್, ಸುಧಾಮಧನ್ನಿ, ಮುಂತಾದವರು ಭಾಗಿಯಾಗಿದ್ದಾರೆ.

ಹೈದ್ರಾಬಾದ್ ಕರ್ನಾಟಕ ಜಾಥಾ: 16 ರಂದು ಗುಲ್ಬರ್ಗಾದಲ್ಲಿ ಉದ್ಘಾಟನೆಗೊಂಡ ಹೈದ್ರಾಬಾದ್ ಕರ್ನಾಟಕ ಜಾಥಾವು ಸಮಾರೋಪಗೊಂಡಿದ್ದು ಚಿನ್ನದ ಗಣಿ ಪ್ರದೇಶವಾದ ಲಿಂಗಸುಗೂರಿನ ಹಟ್ಟಿಯಲ್ಲಿ. ಆಗಸ್ಟ್ 25 ರಂದು ಬೃಹತ್ ಸಭೆಯ ಮೂಲಕ ಸಮಾರೋಪಗೊಂಡಿತು. ಲಾಭದಾಯಕವಾಗಿರುವ ಹಟ್ಟಿ ಚಿನ್ನದ ಗಣಿಯನ್ನು ಖಾಸಗೀಕರಿಸುವ ಹುನ್ನಾರವನ್ನು ಸರ್ಕಾರಗಳು ನಡೆಸಿರುವಾಗ ಆದಕ್ಕೆ ಪ್ರತಿಭಟನೆಯಾಗಿಯೂ ನಡೆದ ಈ ಪ್ರಚಾರಾಂದೋಲನದಲ್ಲಿ ಆ ಪ್ರದೇಶದ ನೂರಾರು ರೈತರು, ಕಾರ್ಮಿಕರು ಭಾಗವಹಿಸಿದ್ದು ವಿಶೇಷ.

ಹಟ್ಟಿಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದವರು ಅಖಿಲ ಭಾರತ ಕಲ್ಲುಗಣಿ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಆಂಧ್ರದ ನಾಯಕ ಪಿ. ಅಪ್ಪಾರಾವ್‌ರವರು. ಹಾಗೆಯೇ ಸಿಪಿಐ(ಎಂ) ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಪ್ರಸನ್ನಕುಮಾರ್ ಜಿಲ್ಲಾ ಕಾರ್ಯದರ್ಶಿ ಬಿ.ಲಿಂಗಪ್ಪ ಮುಖಂಡರಾದ ಎಂ.ಬಿ.ನಾಡಗೌಡ, ಮಲ್ಲಯ್ಯ ಜಾಲಹಳ್ಳಿ, ಕರಿಯಪ್ಪ ಅಚ್ಚೊಳ್ಳಿ, ಕಾರ್ಮಿಕ ನಾಯಕರಾದ ಅಮರಗುಂಡಪ್ಪ, ಶಿವಾನಂದ, ಮೌಲಾಖಾನ್ ಮುಂತಾದವರು ಮಾತನಾಡಿದರು. ಈ ಜಾಥಾದ ವಿಶೇಷ ಅನುಭವ ಹಂಚಿಕೊಂಡರು.



ಉಳ್ಳಾಲದಲ್ಲಿ ಸಮಾರೋಪ ಬಿ.ಮಾಧವರಿಂದ

ಬಳ್ಳಾರಿ ಪ್ರದೇಶದ ಜಾಥಾ : ಅಗಸ್ಟ್ 17 ರಂದು ಹೊಸ ಪೇಟೆಯಲ್ಲಿ ಉದ್ಘಾಟನೆಗೊಂಡ ಬಳ್ಳಾರಿ ದಾವಣ ಗೆರೆ-ಚಿತ್ರದುರ್ಗ ಜಿಲ್ಲೆಗಳ

ಇನ್ನೊಂದು ಪ್ರಾದೇಶಿಕ ಜಾಥಾ ಸಮಾರೋಪಗೊಂಡಿದ್ದು ಹಗರಿಬೊಮ್ಮನ ಹಳ್ಳಿಯಲ್ಲಿ. ಅಗಸ್ಟ್ 28 ರಂದು ಹೂವಿನ ಹಡಗಲಿಯಿಂದ ಬಂದ ಜಾಥಾ ಪಟ್ಟಣವನ್ನು ಪ್ರವೇಶಿಸುತ್ತಿದ್ದಂತೆ ಹೂ ಚೆಲ್ಲಿ, ಘೋಷಣೆ-



ಬಳ್ಳಾರಿ ಪ್ರದೇಶ ಜಾಥಾ

ನಿನಾದಗಳೊಂದಿಗೆ ಸ್ವಾಗತಿಸಲಾಯಿತು. ಉತ್ಸಾಹ ಉಕ್ಕಿ ಹರಿದ ಸ್ವಾಗತದಲ್ಲಿ ನೂರಾರು ಮಹಿಳೆಯರು, ಮಕ್ಕಳು ಇದ್ದದ್ದು ವಿಶೇಷವಾಗಿತ್ತು.

ನಂತರ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಾಗಿ ತಹಶೀಲ್ದಾರ್ ಕಛೇರಿ ಬಳಿ ಬೃಹತ್ ಬಹಿರಂಗ ಸಭೆ ಮೂಲಕ ಸಮಾರೋಪಗೊಂಡಿತು.

ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ನ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಎಸ್.ವೈ. ಗುರುಶಾಂತ್, ಜಾಥಾದ ನೇತೃತ್ವ ವಹಿಸಿದ್ದ ಯು.ಬಸವರಾಜ್ ಹಾಗೂ ಜಗನ್ನಾಥ್, ಗಣೇಶ್, ಆರ್.ಎಸ್.ಬಸವರಾಜ್ ಮಾತನಾಡಿದರು. ಜಾಥಾದುದ್ದಕ್ಕೂ ಕಂಡುಂಡ ಅನುಭವಗಳನ್ನು ಜನತೆಯ ಅಪೂರ್ವ ಸ್ಪಂದನವನ್ನು ವಿವರಿಸಲಾಯಿತು.

ಉತ್ತರಕನ್ನಡ-ಬಿಜಾಪುರ : ಉತ್ತರಕನ್ನಡ-ಹಾವೇರಿ ಧಾರವಾಡ ಜಿಲ್ಲೆ ಮುಂತಾದ ಜಿಲ್ಲೆಗಳ ಜಾಥಾವು ವಿಜಾಪುರದಲ್ಲಿ 26 ರಂದು ಸಮಾರೋಪಗೊಂಡಿದೆ. ಪಕ್ಷದ ಸೆಕ್ರೆಟಾರಿಯೇಟ್ ಸದಸ್ಯ ನಿತ್ಯಾನಂದ ಸ್ವಾಮಿ, ಭೀಮಸಿ ಕಲಾದಗಿ, ವಿ.ಪಿ.ಕುಲಕರ್ಣಿ ಮುಂತಾದವರು ಭಾಗವಹಿಸಿದ್ದರು.

ಚಿಕ್ಕಮಗಳೂರು-ಕೋಲಾರ : ಹಾಗೆಯೇ ಚಿಕ್ಕಮಗಳೂರು- ಕೋಲಾರ ಜಾಥಾವು 27 ರಂದು ಕೋಲಾರದಲ್ಲಿ ಸಮಾರೋಪಗೊಂಡಿದೆ. ನೂರಾರು ಜನರು ಭಾಗವಹಿಸಿದ್ದು ಸಭೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್. ನಾಗರಾಜ್ ಮತ್ತು ರಾಜ್ಯ ಸಮಿತಿಯ ಸದಸ್ಯ, ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿದ್ದಾರೆ.

ಬೆಂಗಳೂರು : ಮೈಸೂರು-ಮಂಡ್ಯ ಬೆಂಗಳೂರು ಜಿಲ್ಲೆಗಳ ಜಾಥಾವು 29 ರಂದು ಬೆಂಗಳೂರು ನಗರದ ಐಟಿಸಿ ಕಾಲೋನಿಯಲ್ಲಿ ಸಮಾರೋಪ ಗೊಂಡಿದೆ. ಪಕ್ಷದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಜಿ.ಸಿ.ಬಯ್ಯಾರೆಡ್ಡಿ, ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಮುಂತಾದವರು ಮಾತನಾಡಿದ್ದಾರೆ.

ಜನರ ನಡುವೆ ಬೀದಿನಾಟಕ : ಬೆಂಗಳೂರಿನ ಶ್ರೀರಾಂಪುರದ ಸಿಪಿಐ(ಎಂ) ಪ್ರದೇಶ ಸಮಿತಿಯು ಸೆಪ್ಟೆಂಬರ್ 9 ರ ರ‍್ಯಾಲಿಗೆ ಜನತೆಯನ್ನು ಅಣಿನೆರೆಸಲು, 'ಬೀದಿ ನಾಟಕ'ದ ಮೂಲಕ ವಿಶಿಷ್ಟ ಪ್ರಯತ್ನ ಆರಂಭಿಸಿದೆ. ಹಾಡುಗಳ ಹಾಗೂ ಅಭಿನಯದ ಮೂಲಕ ಕೇಂದ್ರ ರಾಜ್ಯ ಸರ್ಕಾರಗಳ ನೀತಿಗಳನ್ನು, ಜನತೆಯ ಸಂಕಷ್ಟ ಹಾಗೂ ಪರಿಹಾರದ ಮಾರ್ಗಗಳನ್ನು ಪರಿಣಾಮಕಾರಿಯಾಗಿ ತೋರಿಸುತ್ತಿದೆ. ಬಂಡಿರೆಡ್ಡಿ ಸರ್ಕಲ್‌ನಲ್ಲಿ ಸೆಪ್ಟೆಂಬರ್ 5 ರಂದು ಸಂಜೆ ಉದ್ಘಾಟನೆಗೊಂಡಿತು.

ಬೆಂಗಳೂರಿನಲ್ಲಿ ಜನರಗಮನ ಸೆಳೆದ ಬೀದಿ ನಾಟಕ 'ಇದು ನಮ್ಮ ದೇಶ'



ಸುಪ್ರಿಂಕೋರ್ಟ್‌ನ ತೀರ್ಪಿನಿಂದ ಆಘಾತಗೊಂಡಿದ್ದ ಗ್ರಾಮೀಣ ಕೃಪಾಂಕದ ನೌಕರರು ಆತ್ಮವಿಶ್ವಾಸದ ಹೋರಾಟ ಫಲವಾಗಿ ವಿಜಯಿಗಳಾದುದರ ವರದಿ



ಹೋರಾಟಕ್ಕೆ ಸೌಹಾರ್ದ
ಮಾನವ ಸರಪಳಿ

ವಿಜಯದ ಮೆಟ್ಟಿಲೇರಿದ ಕೃಪಾಂಕ ನೌಕರರ ಹೋರಾಟ

ಮೇ 6ರ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಿಂದಾಗಿ ಕೆಲಸ ಕಳೆದುಕೊಂಡು ಅತಂತ್ರ ಬದುಕು ಸಾಗಿಸುತ್ತಿದ್ದ ಸುಮಾರು 4800 ಕೃಪಾಂಕ ನೌಕರರು ಇದೀಗ ನಿರಂತರ ಹೋರಾಟದ ಹಾದಿಯಲ್ಲಿ ನಡೆದು ಕೊನೆಗೂ ವಿಜಯದ ಮೆಟ್ಟಿಲನ್ನು ಏರುವ ತವಕದಲ್ಲಿದ್ದಾರೆ. ಆಗಸ್ಟ್ 12 ರ ನಂತರ ಅಂತಿಮ ಅಧಿಸೂಚನೆ ಹೊರಡುತ್ತಿದ್ದಂತೆ ಬಹುತೇಕ ಕೃಪಾಂಕ ನೌಕರರು ಮರುನೇಮಕ'ದ ಕ್ಷಣಗಣನೆ ಆರಂಭಿಸಿದ್ದಾರೆ.

ಮೇ - 27ರಂದು ಕರ್ನಾಟಕದ ರಾಜಕೀಯ ಧುರೀಣರು, ಶಿಕ್ಷಣ ತಜ್ಞರು, ಕಾನೂನು ತಜ್ಞರನ್ನೊಳಗೊಂಡು ನೆಡೆದ "ದುಂಡುಮೇಜಿನ ಸಭೆ" ಜೂನ್ - 20 ರಂದು ಮತ್ತು ಜುಲೈ 24 ರಂದು ಬೆಂಗಳೂರಿನಲ್ಲಿ ನಡೆದ 'ಬೃಹತ್ ರ‍್ಯಾಲಿ' ಗಳು ಮತ್ತು ಆಗಸ್ಟ್ -20 ರಿಂದ 24 ರವರೆಗೆ ನಡೆದ ಅನಿರ್ದಿಷ್ಠ ಧರಣಿ' ಸತ್ಯಾಗ್ರಹದಂತಹ ಹೋರಾಟಗಳು ಕೊನೆಗೂ ಕೃಪಾಂಕ ನೌಕರರ ಬದುಕನ್ನು ಜಯದ ಹಾದಿಯನ್ನಾಗಿಸಿದವು.

ಇದರಲ್ಲಿ ಆಗಸ್ಟ್ 20 ರಿಂದ 24ರವರೆಗೆ ಬೆಂಗಳೂರಿನ ಬನ್ನಪ್ಪ ಪಾರ್ಕ್‌ನಲ್ಲಿ ಸಂಘಟಿಸಲಾಗಿದ್ದ ಬೃಹತ್ ಸಾಮೂಹಿಕ ಅನಿರ್ದಿಷ್ಟ ಧರಣಿ ಸತ್ಯಾಗ್ರಹ" ಅದೊಂದು ನಿರ್ಣಾಯಕ ಹೋರಾಟ ಮಾತ್ರವಲ್ಲ ಕೃಪಾಂಕ ನೌಕರರ ಅಳಿವು ಉಳಿವಿನ ಹೋರಾಟವಾಗಿತ್ತು. ನಿರಂತರವಾಗಿ ಸುರಿಯುತ್ತಿರುವ ಮಳೆ.... ಚಳಿಗಾಳಿಗಳಿಗೆ ಮೈವೊಡ್ಡಿ ಆತ್ಮ ವಿಶ್ವಾಸದ ಹೋರಾಟವನ್ನು ಮುನ್ನೆಡೆಸಿದ ಪರಿಣಾಮವಾಗಿ ಕೊನೆಗೂ ಆಗಸ್ಟ್ 23 ರಂದು ನೆಡೆದ 'ಸಚಿವ ಸಂಪುಟ' ಮರುನೇಮಕಕ್ಕೆ ಅಧಿಕೃತ ಮುದ್ರೆ ಒತ್ತಲೇಬೇಕಾಯಿತು. ಅದರ ಭಾಗವಾಗಿ, ಆಗಸ್ಟ್ 28 ರಂದೇ ಅಧಿಕೃತವಾಗಿ ವಿಶೇಷ ಅಧಿಸೂಚನೆ' ಹೊರಡಿಸಲಾಗಿದ್ದು, ಆಕ್ಷೇಪಣೆಗಳನ್ನು ಸ್ವೀಕರಿಸಿದ ನಂತರ ಅಂತಿಮ ಅಧಿಸೂಚನೆ ಹೊರಡಿಸಲಾಗುವುದು.

ಹೋರಾಟ ಕಲಿಸಿದ ಪಾಠ...

ಹೋರಾಟ-ಧರಣಿಯಿಂದ ಏನೂ ಸಾಧಿಸಲಾಗುವುದಿಲ್ಲ ಎನ್ನುವವರಿಗೆ ಕೃಪಾಂಕ ನೌಕರರ ಹೋರಾಟ ಪಾಠವನ್ನು ಕಲಿಸಿದೆ. ಈ ಹೋರಾಟದಲ್ಲಿ ಧುಮುಕಿದವರಾದರೂ ಯಾರು? ಹಾಗೆ ನೋಡಿದರೆ ಪ್ರತಿ ಹೋರಾಟದಲ್ಲಿಯೂ ಹೊಸ ಹೊಸ ಮುಖಗಳು ನಾಯಕತ್ವವಹಿಸಿಕೊಂಡು ಈ ಹೋರಾಟವನ್ನು ಮುನ್ನೆಡೆಸಿದ್ದು ವಿಶೇಷ. ಹೋರಾಟವನ್ನು ಆರಂಭಿಸಿದ್ದ ಮುಖಂಡತ್ವವೇ ಬೇರೆ ಅಂತಿಮ ಜಯವನ್ನು ಸಾಧಿಸಲು ಶ್ರಮಿಸಿದವರೇ ಬೇರೆ ಜನ. ಜೂನ್ 3 ರಂದು ಡಿ.ವೈ.ಎಫ್.ಐ - ಎಸ್.ಎಫ್.ಐ. ಕಛೇರಿಯಲ್ಲಿ ಸಭೆ ಸೇರಿ ಕೇಲವೇ ಜನರಿಂದ ಆರಂಭಗೊಂಡಿದ್ದ ಕೃಪಾಂಕ ನೌಕರರ ಕ್ರಿಯಾ ಸಮಿತಿ ಆಗಸ್ಟ್ 20 ರೊತ್ತಿಗೆ ವಿಶಾಲ ತಳಹದಿಯ, ಸಾವಿರಾರು ಕೃಪಾಂಕ ನೌಕರರು ಮತ್ತು ಅವಲಂಬಿತರಿಗೆ ಹೋರಾಟದ ನೇತೃತ್ವ ನೀಡುವ 'ಸಮಿತಿಯಾಗಿ' ರೂಪುಗೊಂಡಿತು. ಮೇ. 27 ರ ದುಂಡು ಮೇಜಿನ ಸಭೆಯಿಂದ' ಹಿಡಿದು ನಂತರ ನಡೆದ ಪ್ರತಿಯೊಂದು ಹೋರಾಟಗಳು ಮಧ್ಯಪ್ರವೇಶಗಳು, ಸಾವಿರಾರು ಕೃಪಾಂಕ ನೌಕರರಿಗೊಂದು ದಿಕ್ಸೂಚಿಯಾಗಿ ಕೆಲಸ ಮಾಡಿ ರಾಜ್ಯಾದ್ಯಂತ ಕೃಪಾಂಕ ನೌಕರರು, ಸಾರ್ವಜನಿಕರ ಗಮನ ಸೆಳೆಯುವಲ್ಲಿ ಯಶಸ್ವಿಯಾಯಿತು. ಪ್ರತಿ ಹಂತದಲ್ಲಿಯೂ ಕ್ರಿಯಾ ಸಮಿತಿ. ಹೆಸರಲ್ಲಿ ಡಿ.ವೈ.ಎಫ್.ಐ - ಎಸ್.ಎಫ್.ಐ.

ನೆಡೆದ 'ಕೃಪಾಂಕ ನೌಕರರ ಅನಿರ್ದಿಷ್ಠ ಧರಣಿ' ಒಂದು ರೀತಿಯಲ್ಲಿ ಬಳಲಿ ಬೆಂಡಾದವರ, ಶೋಷಣೆಗೊಳಗಾದವರ ಸಂಗಮವಾಗಿತ್ತು. ಪ್ರತಿ ತಿಂಗಳು ಸದಸ್ಯತ್ವ ಹಣ ನೀಡಿ ನೌಕರರ ಉದ್ಧಾರಕ್ಕಾಗಿಯೇ ಹುಟ್ಟಿಕೊಂಡ, ರಾಜ್ಯ ಸರ್ಕಾರಿ ನೌಕರರ ಸಂಘದವರು ಕಳೆದ 2 ತಿಂಗಳಿಂದ ಇವರ ಮೇಲೆ ನೆಡೆಸಿದ ಆರ್ಥಿಕ ಆಕ್ರಮಣದಿಂದಾಗಿ ಬಳಲಿ ಬೆಂಡಾಗಿದ್ದರು. ಸಾಲದೆಂಬಂತೆ ಆ ಊರು ಊರುಗಳಲ್ಲಿರುವ ಸಣ್ಣ ಪುಟ್ಟ ವಕೀಲರುಗಳಿಗೆ ಇದೇ ಸುಗ್ಗಿ ಎಂಬಂತೆ ಕೆ.ಎ.ಟಿ. ಯಿಂದ ತಡೆಯಾಜ್ಞೆ ಕೊಡುಸುವೆವೆಂಬ ಸುಲಿಗೆಗೂ ಅವರು ಒಳಗಾಗಿದ್ದರು. ಮತ್ತೊಂದೆಡೆ ಹಲವಾರು ಜಿಲ್ಲೆಗಳಲ್ಲಿ 100 ರಿಂದ ಹಿಡಿದ 500 ವರೆಗೂ ಹಣ ವಸೂಲಿ ಮಾಡಿ ತಮಗೆ ತಿಳಿದಂತೆ

ಸೆಪೆಂಬರ್ 14: ಕೃಪಾಂಕ ನೌಕರರ ರಾಜ್ಯ ಸಮಾವೇಶ

ಕೃಪಾಂಕ ನೌಕರರ ಕ್ರಿಯಾ ಸಮಿತಿಗೊಂದು ಸಂಘಟನಾ ರೂಪ ನೀಡಿ ರಾಜ್ಯ ಮಟ್ಟದ ನಾಯಕತ್ವವನ್ನು ಆಯ್ಕೆ ಮಾಡುವ ವೇಳೆಯಲ್ಲಿ ಮತ್ತು ಮರು ನೇಮಕ ಪ್ರಕ್ರಿಯೆಗಳನ್ನು, ತೀವ್ರಗೊಳಿಸಲು ಸರ್ಕಾರದ ಮೇಲೆ ಒತ್ತಡ ಹೇರುವ ಭಾಗವಾಗಿ ಸೆಪ್ಟೆಂಬರ್ 14ರ ಭಾನುವಾರದಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನಲ್ಲಿ ಕಾರ್ಪೊರೇಷನ್ ಹಿಂಭಾಗದಲ್ಲಿರುವ ದೇವಾಂಗ ಛತ್ರದಲ್ಲಿ ಕೃಪಾಂಕ ನೌಕರರ ರಾಜ್ಯ ಮಟ್ಟದ ಸಮಾವೇಶವನ್ನು ಸಂಘಟಿಸಲಾಗಿದೆ.

ಸಂಘಟನೆಗಳು ಮಧ್ಯೆ ಪ್ರವೇಶಿಸಿ ಪತ್ರಿಕೆ, ಟಿ.ವಿ.ಗಳ ಮೂಲಕ, ಜನಸಾಮಾನ್ಯರ, ಸರ್ಕಾರದ ಕಣ್ಣು ತೆರೆಸಿದವು. ಮಾತ್ರವಲ್ಲ. ಕೃಪಾಂಕ ನೌಕರರಿಂದ ಹಣ ಸುಲಿದು ಮೆರೆಯುತ್ತಿದ್ದವರನ್ನು ಮೂಲೆಗುಂಪು ಮಾಡಿದವು.

ಬಳಲಿ - ಬೆಂಡಾದವರೆಲ್ಲ ಒಂದಾಗಿದ್ದರು

ಆಗಸ್ಟ್ 20-24 ರವರೆಗೆ ಬೆಂಗಳೂರಿನಲ್ಲಿ

ಬೆಂಗಳೂರಿನಲ್ಲಿ ನಿರಂತರ ಧರಣಿ ಸತ್ಯಾಗ್ರಹ - ಕುಗ್ಗದ ಹೋರಾಟದ ಹುಮ್ಮಸ್ಸು



ಸ್ವತಂತ್ರವಾಗಿ ಏನೇನೋ ಮಾಡುತ್ತ ಅವರಿವರ ಮನೆ ಬಾಗಿಲು ತಟ್ಟುತ್ತಾ ಅನವಶ್ಯಕವಾಗಿ ಹಣ ಖರ್ಚು ಮಾಡುವುದು ನಡೆದೇ ಇತ್ತು. ಹೀಗೆ ನಿರಂತರವಾಗಿ ಸುಲಿಗೆಕೋರರ ಧಾಳಿಯಿಂದ ಸುಸ್ತಾಗಿದ್ದ 'ಕೃಪಾಂಕ ನೌಕರರು' ನಮ್ಮ ಹೋರಾಟದ ಸಾಗರಕ್ಕೆ ಧುಮುಕುವಷ್ಟೊತ್ತಿಗೆ ಬೆಂದ ಮನೆಯಂತಾಗಿ ಹೋಗಿದ್ದರು. ಹೆಂಡತಿಯ ತಾಳಿಯನ್ನು, ಬಳೆಗಳನ್ನು. ಇದ್ದಬದ್ದ ಒಡವೆಗಳನ್ನು ಅಡವಿಟ್ಟು ಕೈ ಸುಟ್ಟು ಕೊಂಡವರು, ಕೊನೆಗಳಿದಿದ್ದ 'ಆತ್ಮಸ್ಥೈರ್ಯ'ವನ್ನು ಮಾತ್ರ ನಂಬಿ ಹೋರಾಟಕ್ಕೆ ಬಂದಿದ್ದರು.

ಇಂತಹ ಎಲ್ಲಾ ನೊಂದವರ ಪಾಲಿಗೆ ಸಮರ್ಥ ದಿಕ್ಕನ್ನು-ಸ್ಪಷ್ಟತೆಯನ್ನು ಮೂಡಿಸಿದ್ದು ಹೋರಾಟ ಮಾತ್ರ. ಐದು ದಿನಗಳ ಈ ಹೋರಾಟ, ಬದುಕಬೇಕೆನ್ನುವ ಆತ್ಮ ವಿಶ್ವಾಸವನ್ನು, ಜಗತ್ತನ್ನು, ಸಮಾಜವನ್ನು, ಅದರ ಆಳ - ಅಗಲಗಳನ್ನು ವಿಚಾರ ತೀಕ್ಷ್ಣತೆಯನ್ನು ಕಲಿಸಿಕೊಟ್ಟಿತು. ಅದೆಲ್ಲಕ್ಕಿಂತ ಮುಖ್ಯವಾಗಿ ಹೋರಾಟದ ಮೂಲಕವಾಗಿ ಗೆಲುವನ್ನು ತಂದು ಕೊಟ್ಟಿತು.

ಈಗಾಗಲೇ ಹೇಳಿದಂತೆ ಇದು ಕೃಪಾಂಕ ನೌಕರರ ಅಳಿವು - ಉಳಿವಿನ ಹೋರಾಟವಾಗಿತ್ತು. ಆ ಕಾರಣದಿಂದಾಗಿಯೇ ಆತ್ಮ ವಿಶ್ವಾಸದಿಂದಲೇ ಎಡ-ಬಿಡದ ಮಳೆಯಲ್ಲಿಯೂ ಅಲುಗಾಡದೇ ನೂರಾರು ಮಹಿಳೆಯರ ಸಹಿತ ಸಾವಿರಾರು ನೌಕರರು 'ಗೆಲವು ಸಾಧಿಸಿಯೇ ಊರಿಗೆ ಹಿಂತಿರುಗ ಬೇಕೆಂಬ-ಛಲದಿಂದ ಕೂಡಿದ್ದರು. ಕೊನೆಗೂ ಜಯವನ್ನು ಹೊತ್ತೆ ಊರಿಗೆ ನಡೆದರು.

ಕೃಪಾಂಕ ನೌಕರರ ಈ ಅನಿರ್ದಿಷ್ಟ ಹೋರಾಟಕ್ಕೆ ಬೆಂಬಲಿಸಿ ನಿಂತವರು ಹಲ[...] ಅವರ ಭಾಗವಹಿಸುವಿಕೆ, ಅವರ ಮಾತುಗ[...] ಕೃಪಾಂಕ ನೌಕರರಲ್ಲಿದ್ದ ವಿಶ್ವಾಸವನ್ನು ಇಮ್ಮಡಿಗೊಳಿಸಿದವು. ಆರಂಭದ ದಿನ ಧರ[...] ಸತ್ಯಾಗ್ರಹವನ್ನು ನಿಡುಮಾಮಿಡಿ ಮಠದ ಶ್ರೀ[...] ವೀರಭದ್ರಚೆನ್ನಮಲ್ಲ ಸ್ವಾಮಿ ಉದ್ಘಾಟಿಸಿ ನೌಕರರ ಮರು ನೇಮಕಕ್ಕೆ ಸರ್ಕಾರವನ್ನು ಒತ್ತಾಯಿಸಿದರು. 'ಐಕ್ಯರಂಗ' ಸಂಪಾದಕರ[...] ಗರುಶಾಂತ, ಕರ್ನಾಟಕ ಪ್ರಾಂತ ರೈತ ಸಂ[...] ರಾಜ್ಯ ಪ್ರಧಾನಕಾರ್ಯದರ್ಶಿ ಜಿ.ಸಿ. ಬಯ್ಯಾರೆಡ್ಡಿ, ಕೃಷಿ ಕೂಲಿಕಾರರ ಸಂಘದ [...] ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೆರಾ, ವಿಮಾ[...] ನೌಕರರ ಸಂಘದ ಸುರೇಂದ್ರರಾವ್, ಅಂಗನವಾಡಿ ನೌಕರರ ಸಂಘದ ಎಸ್. ವರಲಕ್ಷ್ಮಿ, ಸಿ.ಐ.ಟಿ.ಯು.ನ ಮೀನಾಕ್ಷಿ ಸುಂದರಂ, ಸರ್ಕಾರಿ ನೌಕರರ ಸಂಘದ ಮುಖಂಡರಾಗಿದ್ದ ನಟೇಶ್, ರಾಮಯ್ಯ ಹೆಗಡೆ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ[...] ಜಿ.ಎನ್. ನಾಗರಾಜ್, ಜಿಲ್ಲಾ ಕಾರ್ಯದ[...] ಕೆ. ಪ್ರಕಾಶ್, ಸಿ.ಐ.ಟಿ.ಯು ಮುಖಂಡರ[...] ಆರ್. ಶ್ರೀನಿವಾಸ್, ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್. ವಿಮಲ, ಹಾಗೂ[...] ಖ್ಯಾತ ವಿಚಾರವಾದಿ ಹಾಗೂ ಚಲನಚಿತ್ರ ನಟರಾದ ಪ್ರೊ. ಜಿ.ಕೆ. ಗೋವಿಂದರಾವ್ ಸೇರಿದಂತೆ ಹಲವು ಗಣ್ಯರು ಸತ್ಯಾಗ್ರಹ ಶಿ[...] ಬಂದು ಹೋರಾಟಕ್ಕೆ ಸ್ಪೂರ್ತಿ ತುಂಬಿದರು.

ಕಳೆದ ಮೂರು ತಿಂಗಳಿಂದ ನಡೆದ ಈ ನಿರಂತರ ಹೋರಾಟ ಕೃಪಾಂಕ ನೌಕರರಿಗೆ ಗೆಲುವನ್ನು ಮಾತ್ರ ತಂದುಕೊಡಲಿಲ್ಲ. ಅದರೊಂದಿಗೆ ವಿಶಾಲ ದೃಷ್ಟಿಕೋನವನ್ನು ಹೋರಾಟದ ಛಲವನ್ನು ಹಾಗೂ ಆತ್ಮವಿ[...] ಹಾಗೂ ಸ್ಪೂರ್ತಿಯನ್ನು ನೀಡಿದೆ ಎನ್ನುವ[...] ಸಾವಿರಾರು ನೌಕರರ ಒಕ್ಕೊರಲಿನ ಉದ್[...]

ಹರೇಕೃಷ್ಣ

ಏನೆಂದು ಹೇಳಲೋ ಹೇ ಹರೇ ಕೃಷ್ಣ
ಎಷ್ಟೊಂದು ರೈತಜನ ಸೇರಿದರೋ ಮ[...]
ಆದರೂ ನಿನಗಿಲ್ಲ ಒಂದಿನಿತು ಕರುಣ[...]
ನಿನ್ನ ಖಾತೆಗೆ ಇವರು ಆದರೋ ಭರಣ[...]

ವಿಡಂಬಾರಿ

ಧ್ವಂಸಗೊಳಿಸಲಾದ ಮಸೀದಿ ಕೆಳಗೆ ಉತ್ಖನನ ನಡೆಸಿದ ಎ.ಎಸ್.ಐ. ಆಗಾಗ ನೀಡುತ್ತಾ ಬಂದ ವರದಿಗೂ - ಅಂತಿಮ ವರದಿಗೂ ವ್ಯತ್ಯಾಸವಿದೆ. ಈ ಅಪಾಯಕಾರಿ ಆಟ ಹೇಗೆ ನಡೆಯಿತು? ಒಂದು ಪ್ರಾಥಮಿಕ ವಿಶ್ಲೇಷಣೆ ಇಲ್ಲಿದೆ.

ಅಯೋಧ್ಯಾ ವಿವಾದ

ಅಗೆದು ತೆಗೆದದ್ದು ಸತ್ಯವನ್ನೋ ಮೋಸವನ್ನೋ?

ಭಾರತ ಪ್ರಾಚ್ಯ ಶೋಧ ಸರ್ವೆ(ಎ.ಎಸ್.ಐ) ಬಾಬ್ರಿ ಮಸೀದಿಯ ಸ್ಥಳದಲ್ಲಿ ಅಗೆತ ನಡೆಸಬೇಕೆಂದು ಕೇಳುವುದು ತಪ್ಪು, ಅಷ್ಟೇ ಅಲ್ಲ ಅದು ಹಲವು ಅಪಾಯಗಳಿಂದ ಕೂಡಿದೆ ಎಂದು ಆರಂಭದಲ್ಲೇ ನೀಡಿದ ಎಚ್ಚರಿಕೆ ಈಗ ನಿಜವಾಗಿದೆ. ಬಿಜೆಪಿಯ ಬಿಗಿ ಹತೋಟಿಯಲ್ಲಿರುವ ಭಾರತ ಸರ್ಕಾರದ ಸಂಸ್ಕೃತಿ ಇಲಾಖೆಯ ಅಡಿ ಎಎಸ್‌ಐ ತಂಡ ಕೆಲಸ ಮಾಡಬೇಕಾದ್ದರಿಂದ ಈ ಕೆಲಸ ಅನುಮಾನಾಸ್ಪದ ಎಂಬ ಭಯ ಈಗ ಎಎಸ್‌ಐನ ವರದಿಯನ್ನು ನೋಡಿದ ಮೇಲೆ ನಿಜವಾಗಿದೆ. ಎಎಸ್‌ಐ ವರದಿಯನ್ನು ಆಗಸ್ಟ್ 25 ರಂದು ಅಲಹಾಬಾದ್ ಹೈಕೋರ್ಟಿನ ಲಕ್ನೋ ಪೀಠಕ್ಕೆ ಸಲ್ಲಿಸಲಾಗಿದೆ. ಸಂಘ ಪರಿವಾರಕ್ಕೆ ಈ ವರದಿಯಿಂದ ಸಂತೋಷವಾಗಿದೆ. ಆದರೆ ಎಎಸ್‌ಐ ವರದಿ ಮತ್ತು ಅದರ ತೀರ್ಮಾನಕ್ಕೆ ಸವಾಲು ಹಾಕಲು ನ್ಯಾಯಾಲಯ ಆರು ವಾರಗಳ ಸಮಯ ನೀಡಿದೆ.

ಅವೈಜ್ಞಾನಿಕ ಆಧಾರಗಳು

ಸವಾಲು ಹಾಕಲು ಬಹಳಷ್ಟು ಕಾರಣಗಳಿವೆ ಎಂದು ಪರಿಣತರು ಹೇಳಿದ್ದಾರೆ. ಏಕೆಂದರೆ ಎಎಸ್‌ಐನ ಮಧ್ಯಂತರ ವರದಿಗಳು ಮತ್ತು ಈ ಅಂತಿಮ ತೀರ್ಮಾನದ ನಡುವೆ ಹಲವು ವೈರುಧ್ಯಗಳು ಕಂಡು ಬಂದಿವೆ. ಅವರ ಪ್ರಕಾರ ಮೇಲ್ನೋಟಕ್ಕೆ ಈ ಅಂತಿಮ ವರದಿಯಲ್ಲಿ ಹಲವು ತಪ್ಪುಗಳು ಎದ್ದು ಕಾಣುತ್ತಿವೆ.

- ಸುಣ್ಣ-ಗಾರೆಯ ಬಳಕೆ ಇಸ್ಲಾಂ-ಪೂರ್ವ ವಾಸ್ತುಶೈಲಿಯ ಒಂದು ಸಂಕೇತ ಎಂದು ವರದಿ ಹೇಳುತ್ತದೆ. ಹಾಗಿದ್ದರೆ ವಾಸ್ತುಶೈಲಿಗಳ ಇಡೀ ಇತಿಹಾಸವನ್ನೇ ಹೊಸದಾಗಿ ಬರೆಯಬೇಕಾಗುತ್ತದೆ.
- ಎಎಸ್‌ಐನ ತೀರ್ಮಾನಕ್ಕೆ ಮುಖ್ಯ ಆಧಾರವಾದ 55 ಸ್ತಂಭಪೀಠಗಳೆಲ್ಲವೂ ಒಂದೇ ತರದವಲ್ಲ. ಅಂದರೆ ಅವೆಲ್ಲಾ ಬೇರೆ ಬೇರೆ ಕಟ್ಟಡಗಳಲ್ಲಿ ಬಳಸಿದವುಗಳು. ಮತ್ತು ಅವಕ್ಕೆ ಒಂದು ಬೃಹತ್ ಕಟ್ಟಡದ ಭಾರವನ್ನು ಹೊರುವ ಸಾಮರ್ಥ್ಯವೂ ಇಲ್ಲ. ಇದಕ್ಕೆ ಸಂಬಂಧಪಟ್ಟಂತೆ ಎಎಸ್‌ಐ ತಂಡ ಅನುಸರಿಸಿದ ಅಗೆತದ ವಿಧಾನದ ಬಗ್ಗೆ ಈ ಮೊದಲೇ ಆಕ್ಷೇಪಣೆ ಎತ್ತಲಾಗಿತ್ತು ಎಂಬುದನ್ನು ಗಮನಿಸಬೇಕು.
- ಎಎಸ್‌ಐ ತೀರ್ಮಾನದಲ್ಲಿ ನೀಡಿರುವ ಸಂಕೇತವೆಂದರೆ 10ನೇ ಶತಮಾನದ ನಂತರ ಅದೊಂದು ಪವಿತ್ರಸ್ಥಳವಾಗಿರಬಹುದು, ಆಮೇಲೆ ವಿವಿಧ ಘಟ್ಟಗಳಲ್ಲಿ ಕಟ್ಟಿದ ದೇವಸ್ಥಾನವಿರಬಹುದು ಎಂಬುದು. ಆದರೆ ಅದೇ ವರದಿಯಲ್ಲಿ "ವಿಭಿನ್ನ ಅವಧಿಗಳ ವಿವಿಧ ಸ್ತರಗಳಲ್ಲಿ ಪ್ರಾಣಿಗಳ ಎಲುಬುಗಳು ದೊರೆತಿವೆ" ಎಂದೂ ಹೇಳಲಾಗಿದೆ. ಇದೊಂದು ಪವಿತ್ರ ಸ್ಥಳವಾಗಿದ್ದರೆ, ದೇವಸ್ಥಾನವಿದ್ದಿದ್ದರೆ ಇದು ಹೇಗೆ ಸಾಧ್ಯ?
- ಎಎಸ್‌ಐ ತನ್ನ ತೀರ್ಮಾನವನ್ನು ಕೆತ್ತನೆಯ ಕೆಲಸಗಳ ಆಧಾರದಲ್ಲಿ ಮಾಡಿದೆ. ಆದರೆ ಈ ವಾಸ್ತುಶಿಲ್ಪಗಳು ವಿವಿಧ ಸ್ತರಗಳಿಂದ ಸಿಕ್ಕಿದ್ದಲ್ಲ, ಭಗ್ನಾವಶೇಷಗಳ ರಾಶಿಗಳ ನಡುವೆ ಸಿಕ್ಕಿದ್ದು.
- 'ವಿವಾದಿತ ಕಟ್ಟಡ'ದ ಅಡಿಯಿದ 'ಒಂದು ಬೃಹತ್ ಕಟ್ಟಡ'ಕ್ಕೆ ಸೇರಿದ್ದು ಎನ್ನಲಾದ 50 ಮೀಟರ್ ಗೋಡೆ ಮಸೀದಿಯ ಪ್ರಮುಖ ಪಶ್ಚಿಮ ಗೋಡೆಯ ಅಡಿಪಾಯವಲ್ಲದೆ ಮತ್ತೇನೂ ಅಲ್ಲ. ದೇವಸ್ಥಾನದ ಪಶ್ಚಿಮದ ಗೋಡೆಯಷ್ಟೇ ಏಕೆ ಸಿಕ್ಕಿದೆ, ಉಳಿದವು ಏಕೆ ಸಿಕ್ಕಿಲ್ಲ?
- ಬಾಬ್ರಿ ಮಸೀದಿಯ ಹಿಂದಿನ ಕಟ್ಟಡದ ಸುಟ್ಟ ಇಟ್ಟಿಗೆಯ ಗೋಡೆಯ ಅಡಿಪಾಯದಲ್ಲಿ ಕೆತ್ತನೆಯಿರುವ ಶಿಲ್ಪವಿದೆ. ಇದನ್ನು ಗಮನಕ್ಕೆ ತಗೊಳ್ಳಲಾಗಿಲ್ಲ. ಇದನ್ನು ಗಮನಕ್ಕೆ ತಗೊಂಡಿದ್ದರೆ ಈ ರೀತಿಯ ತೀರ್ಮಾನಕ್ಕೆ ಬರಲು ಸಾಧ್ಯವಿರಲಿಲ್ಲ. ಏಕೆಂದರೆ ಹಿಂದೂಗಳು ಎಂದೂ ಅಡಿಪಾಯ ಹಾಕುವಾಗ ಕೆತ್ತಿದ ಶಿಲ್ಪಗಳನ್ನು ಬಳಸುತ್ತಿರಲಿಲ್ಲ.

ಅಲ್ಲದೆ ತಾತ್ಕಾಲಿಕ ಕಟ್ಟಡದ ಉತ್ತರದಲ್ಲಿರುವ ಕಂಬ ಪೀಠಗಳು ಅವುಗಳ ಸ್ವರೂಪದಲ್ಲೇ ತಮ್ಮ ನೆಲಭಾಗಗಳೊಂದಿಗೇ ಉಳಿದಿವೆ ಎನ್ನಲಾಗಿದೆ. ಅಂದರೆ ಇವು ಮೂಲ 'ಬೃಹತ್ ಕಟ್ಟಡ'ದ ಕಂಬಪೀಠಗಳೇ, ಅವುಗಳ ಮೇಲೆ ಬಾಬ್ರಿ ಮಸೀದಿಯಲ್ಲಿ ಕಂಡುಬಂದ ಕಪ್ಪು ಪದರುಕಲ್ಲಿನ ಕಂಬವನ್ನು ಕೂರಿಸಲಾಯಿತು ಎಂಬ ಸಂಕೇತ ನೀಡಲಾಗಿದೆ. ಆದರೆ ಉತ್ತರದಲ್ಲಿರುವ ಈ ಪೀಠಗಳ ಅಳತೆ ವಿಭಿನ್ನವಾಗಿದೆ - 48.5x43 ಸೆ.ಮಿ., 50x50 ಸೆ.ಮಿ., 47x40 ಸೆಂ.ಮಿ., 48x46 ಸೆಂ.ಮಿ. ಇತ್ಯಾದಿ. ಆದರೆ ಇವು ಕಪ್ಪು ಪದರುಗಲ್ಲಿನ ಕಂಬಗಳೊಂದಿಗೆ ಹೊಂದಿಕೊಳ್ಳುವುದಿಲ್ಲ. ಇವುಗಳ ಅಳತೆ 21x21 ಸೆಂ.ಮಿ. ನಿಂದ 24x24 ಸೆಂ.ಮಿ.

ಇವು ಎಎಸ್‌ಐ ತೀರ್ಮಾನದ ಅವೈಜ್ಞಾನಿಕ ಮತ್ತು ಪಕ್ಷಪಾತೀ ಸ್ವರೂಪವನ್ನು ತೋರಿಸುವ ಕೆಲವು ಅಂಶಗಳು.

'ಮುಳುಗುತ್ತಿರುವವನಿಗೆ ಹುಲ್ಲುಕಡ್ಡಿ'



ಎಎಸ್‌ಐ ವರದಿಯನ್ನು ಬಿಡುಗಡೆ ಮಾಡುವ ಒಂದು ವಾರದ ಮೊದಲು ಸಂಘ ಪರಿವಾರದ 'ಪ್ರಾಚ್ಯಶೋಧ' ಎಸ್.ಪಿ.ಗುಪ್ತಾರವರು ವಿಹೆಚ್‌ಪಿಯ ಅಶೋಕ್ ಸಿಂಘಾಲ್‌ರೊಡನೆ ಒಂದು ಪತ್ರಿಕಾ ಸಮ್ಮೇಳನ ನಡೆಸಿದ್ದರು. ಎಎಸ್‌ಐ ಮೇಲೆ ಒತ್ತಡ ತರಲು ಇದನ್ನೂ ಏರ್ಪಡಿಸಲಾಗಿತ್ತು ಎನ್ನಲಾಗಿದೆ. ಎಎಸ್‌ಐನ ಶೋಧನೆಗಳಿಗೆ ಅನುಗುಣವಾಗಿರದ ಅದರ ವರದಿಯನ್ನು ಎಸ್.ಪಿ.ಗುಪ್ತಾರವರೇ ಬರೆದಂತೆ ಕಾಣುತ್ತದೆ. ಗುಪ್ತಾರವರ ಪತ್ರಿಕಾ ಹೇಳಿಕೆ ಹಾಗೂ ಎಎಸ್‌ಐ ವರದಿಯ ಸಾರಾಂಶದ ಕೊನೆಯ ಪರಿಚ್ಛೇದ ಹೋಲಿಸಿ ನೋಡಿ ಎನ್ನುತ್ತಾರೆ ಪರಿಣತರು.

ಈ ವರದಿಯ ತೀರ್ಮಾನವೇ ಅಂತಿಮ ಸತ್ಯ ಎಂದು ತೋರಿಸಲು ಬಿಜೆಪಿ ಮತ್ತು ಆರ್‌ಎಸ್‌ಎಸ್ ಹೆಣಗುತ್ತಿರುವ ರೀತಿ ಅವರಿಗೆ ಇದು 'ಮುಳುಗುತ್ತಿರುವವನಿಗೆ ಹುಲ್ಲು ಕಡ್ಡಿ' ಯಂತಾಗಿದೆ ಎಂಬುದು ಸ್ಪಷ್ಟ. ಉತ್ತರ ಪ್ರದೇಶದಲ್ಲಿ ಅದರ ಮೈತ್ರಿಯ ಹಾಸ್ಯಾಸ್ಪದ ಅಂತ್ಯದ ಹಿನ್ನೆಲೆಯಲ್ಲಿ ರಾಮದೇವಸ್ಥಾನದ ಹೆಸರಿನಲ್ಲಿ ಮತ್ತೆ ಧಾರ್ಮಿಕ ಭಾವೋನ್ಮಾದ ಬಡಿದೆಬ್ಬಿಸಲು ಇದನ್ನು ಬಳಸಲು ಸಂಘ ಪರಿವಾರ ಪ್ರಯತ್ನಿಸುತ್ತದೆ.

ಆದರೆ ಬಾಬ್ರಿ ಮಸೀದಿ ಕೆಳಗೆ ಉತ್ತರ ಭಾರತ ಶೈಲಿಯ ಪುರಾತನ ಹಿಂದೂ ದೇವಾಲಯದ ಪುರಾವೆಗಳು ಪತ್ತೆಯಾಗಿವೆ ಎಂಬ ಎಎಸ್‌ಐ ವರದಿಯ ತೀರ್ಮಾನ ಮೋಸದಿಂದ ಕೂಡಿದೆ. ಎಎಸ್‌ಐನ ಮಧ್ಯಂತರ ವರದಿಗಳನ್ನು ನೋಡಿದರೇ ಇದು ತಿಳಿಯುತ್ತದೆ ಎಂಬ ಹಲವು ಪ್ರಾಚ್ಯ ವಸ್ತು ತಜ್ಞರು ಹೇಳಿದರೆ ಎಎಸ್‌ಐ ಈ ತೀರ್ಮಾನ ನ್ಯಾಯಾಲಯದಲ್ಲಿರುವ ಬಾಬ್ರಿ ಮಸೀದಿ ಇದ್ದ ಸ್ಥಳದ ಒಡೆತನದ ಕುರಿತ ಮೊಕದ್ದಮೆಯ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ ಎಂದು ಕಾನೂನು ಪರಿಣತರು ಈ ಹಿಂದೆಯೇ ಹೇಳಿದ್ದರು ಎಂಬುದನ್ನು ಗಮನಿಸಬೇಕು. ○

ಚುಟುಕು

ಒಂದು ಪ್ರಶ್ನೆ

ತರುಣನು ಕೆರಳಿಸುತ ತ್ರಿಶೂಲವನು ಹಂಚಿದರೆ
ಬಡವರಿಗೆ ದೊರಕೀತೆ ಹೊನ್ನು? ಆ ಹೊನ್ನು
ಸುಡಲಯ್ಯ ತಿಳಿನೀರು ಕೂಳೂಟ ದೊರಕೀತೆ?

ಈ ಮೇಲು ಕೀಳು

ಹುಟ್ಟಿನಿಂದಳೆಯದಿರಿ ಈ ಮೇಲು ಕೀಳು.
ನಡೆನುಡಿಯು ಮಾತ್ರವೇ ಇದಕಳತೆ ಗೋಲು
ಯಾವುದೇ ಕುಲವಿರಲಿ ಕೋಮಿರಲಿ ಕೇಳು?
ಮನುಷ್ಯತ್ವ ಉಳ್ಳವರು ಎಲ್ಲರೂ ಮೇಲು.

ದಿಲ್ಲಿಯ ಕರೆ

ಭ್ರಷ್ಟದುರ್ಜನರನ್ನು ಶಿಕ್ಷಿಸುವೆ ಬಂದು
ಅಂದವನು ನಾಪತ್ತೆ ಎಲ್ಲಿಹನು ಇಂದು?
ತುರ್ತಾಗಿ ಚಕ್ರವನು ತಿರುವುತ ಇಲ್ಲಿ ಬಾರೆಂದು
ಕಂಗೆಟ್ಟು ಕರೆಯುತಿದೆ ದಿಲ್ಲಿ.

- ವಿಡಂಬಾರಿ

ಆರೋಗ್ಯಪಾಲನೆಯಲ್ಲಿ ಮಾನವಹಕ್ಕು ಉಂಟೇ?



ಆಧುನಿಕ ವೈದ್ಯ ವಿಜ್ಞಾನ ರೋಗ ನಿಧಾನಶಾಸ್ತ್ರ, ಶಸ್ತ್ರ ಚಿಕಿತ್ಸೆ ಮುಂತಾದ ವಿಷಯಗಳಲ್ಲಿ ಹೊಸಹೊಸ ವಿಧಾನಗಳನ್ನು ಕಂಡುಹಿಡಿದು ಆರೋಗ್ಯ ಸುಧಾರಣೆಯಲ್ಲಿ ಮಹತ್ತರ ಸಾಧನೆ ಸಾಧಿಸಿದೆ. ಅದರೊಂದಿಗೆ ಕೆಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ - ಈ ಪ್ರಶ್ನೆಗಳು ನೈತಿಕತೆ ಬಗ್ಗೆ ಚರ್ಚಿಸುತ್ತ 'ಮಾನವ ಹಕ್ಕು' ವಿಷಯಗಳು ಆರೋಗ್ಯ ಪಾಲನೆಯಲ್ಲಿ ಪ್ರಸ್ತುತ ಎಂದು ತೋರಿಸಿಕೊಟ್ಟಿವೆ. ಮಾನವ ಹಕ್ಕು ವಿಷಯ ಬಂದಾಗ ಆರೋಗ್ಯ ವಿಷಯಗಳಾದರೂ, ಜನಸಾಮಾನ್ಯರು ಆ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯ ಟಿಪ್ಪಣಿ ಮಾಡಲು ಮುಂದೆ ಬರಬೇಕಾಗುತ್ತದೆ. ಇಂದು ಆರೋಗ್ಯ ಪಾಲಕರ ಮಧ್ಯಸ್ಥಿಕೆಯಿಂದಾಗಿ ಮಾನವ ಹಕ್ಕುಗಳ ಉಲ್ಲಂಘನೆಯಾಗುವುದು ಬೆಳಕಿಗೆ ಬಂದಿದೆ.

ಮಾನವ ಹಕ್ಕು ಪ್ರಸ್ತುತವಾಗುವ ಆರೋಗ್ಯ ವಿಷಯಗಳು ಉಸಿರಾಟದ ಯಂತ್ರ, ಪೇಸ್ ಮೇಕರ್, ರಕ್ತನಾಳದ ಮೂಲಕ ಆಹಾರ ಒದಗಿಸುವುದು, ಅಂಗಾಂಗ ಕಸಿ, ರೀನಲ್ ಡಯಾಲಿಸಿಸ್ ಇತ್ಯಾದಿಗಳು ದೇಹದ ಕಾರ್ಯ ಮುಂದುವರೆಯುವಂತೆ ಮಾಡಲು ಸಾಧ್ಯ. ಆದರೆ ಈ ವಿಧಾನಗಳ ಬಳಕೆಯಿಂದ ಅನೇಕ ನ್ಯಾಯಕ್ಕೆ ಸಂಬಂಧಿಸಿದ ವಿಷಯಗಳಾದ ನರಹತ್ಯೆ, ವೈದ್ಯಕೀಯ ಅಲಕ್ಷ, ವಿಮೆ ಮುಂತಾದವುಗಳನ್ನು ಆಕರ್ಷಿಸಿ, ಗೊಂದಲಮಯ ಸನ್ನಿವೇಶ ಉಂಟು ಮಾಡಿದಂತಾಗುತ್ತದೆ. ಕೃತಕ ವೀರ್ಯಧಾರಣೆ, ಬದಲೀ ತಂದೆತಾಯಿಗಳು, ಬಲಾತ್ಕಾರ, ವ್ಯಭಿಚಾರ, ಮಕ್ಕಳ ನ್ಯಾಯಸಮ್ಮತಿ, ಗರ್ಭದಲ್ಲಿಯೇ ಮಗುವಿನ ಲಿಂಗ ಕಂಡು ಹಿಡಿಯುವ ಒಂದು ವಿಧಾನ, ಮಾನಸಿಕ ರೋಗ ಚಿಕಿತ್ಸೆ, ಸಾವಿಗೆ ಸಮೀಪವಾದ ರೋಗಿಯನ್ನು ಜೀವಂತ ಇರಿಸಿ, ದುಬಾರಿ ಚಿಕಿತ್ಸೆ ಕೊಟ್ಟು ಆಸ್ಪತ್ರೆಯಲ್ಲಿ ಇರಿಸಬೇಕೆ? ಅಂಗ ವಿಕಲ ಭ್ರೂಣ ಜನ್ಮತಾಳಬಹುದೇ, ಹಿಪ್ಪೊಕ್ರೆಟಿಕ್‌ನ ಶಪಥ ಮಾಡಿದ ವೈದ್ಯರಿಂದ ಏನನ್ನು ಅಪೇಕ್ಷಿಸಬಹುದಾಗಿದೆ? ಮುಂತಾದ ವಿಷಯಗಳ ಬಗ್ಗೆ ಚರ್ಚೆ ಅಗತ್ಯ. ಇಲ್ಲಿಯವರೆಗೆ ಈ ವಿಷಯದ ಬಗ್ಗೆ ಚರ್ಚೆಯಾಗಿಲ್ಲ. ವೈದ್ಯರು ಈ ವಿಷಯಗಳಲ್ಲಿ ಚರ್ಚೆಗೆ ಚಾಲನೆ ಕೊಡಬಹುದಾಗಿದೆ. ಆದರೆ ತೀರ್ಮಾನ ಮಾಡಲು ಸಾಧ್ಯವಿಲ್ಲ. ವಿಜ್ಞಾನ ಪ್ರಗತಿಯಾದಂತೆಲ್ಲ ಹೆಚ್ಚು ಹೆಚ್ಚು ಮಾನವ ಹಕ್ಕು ಹಾಗೂ ನೈತಿಕ ಗೊಂದಲಗಳು ಉಂಟಾಗುವ ಸಾಧ್ಯತೆ ಇದೆ. ಇಂದು ಖಾಸಗೀಕರಣ ನೀತಿ ಜಾರಿಯಾಗಿದೆ, ಈ ಸಂದರ್ಭದ 'ಮಾನವ ಹಕ್ಕು' ವಿಷಯಗಳು ಅಗತ್ಯವಾಗಿ ಚರ್ಚೆಗೆ ಬರಬೇಕು.

ಇಂದು ಹೊಸ ನೀತಿಯಿಂದಾಗಿ ನಿಯಂತ್ರಣ ಕಡಿಮೆಯಾಗಿ ಗೊಂದಲ ಹೆಚ್ಚುತ್ತಿದೆ. 'ಮಾನವ ಹಕ್ಕು' ವಿಷಯಗಳನ್ನು ಚರ್ಚಿಸಲು ವೈದ್ಯರಿಗೆ ಚಾಲನೆಕೊಡಲು ಜನಸಾಮಾನ್ಯರೇ ಮುಂದಾಗಬೇಕಿದೆ.

ನಿಯಂತ್ರಣ ಹೇಗೆ ಸಾಧ್ಯ? ಮುಂದಿನ ಸಂಚಿಕೆ ನೋಡಿ...

ಸೆಪ್ಟೆಂಬರ್ 10 ರಿಂದ ಮೆಕ್ಸಿಕೊದ ಕ್ಯಾನ್‌ಕುನ್‌ನಲ್ಲಿ ವಿಶ್ವ ವ್ಯಾಪಾರ ಸಂಘಟನೆಯ ಮಹತ್ವದ ಮಾತುಕತೆ ಆರಂಭಗೊಳ್ಳಲಿದೆ. ಅಭಿವೃದ್ಧಿಶೀಲ ಮೂರನೇ ಜಗತ್ತಿನ ರಾಷ್ಟ್ರಗಳನ್ನು ಸುಲಿಗೆಯ ಕಬಂಧ ಬಾಹುಗಳಿಗೆ ಸಿಲುಕಿಸಿ ಹೀರುವ ಹುನ್ನಾರಗಳು ನಡೆಯಲಿವೆ. ಏನವು? ಭಾರತ ಹೇಗೆ ಮಹತ್ವದ ಪಾತ್ರ ವಹಿಸಬೇಕು ?

ಕ್ಯಾನ್‌ಕುನ್‌ನಲ್ಲಿ WTO ಸಭೆ

ಬಡ ರಾಷ್ಟ್ರಗಳನ್ನು ಅಡಿಯಾಳಾಗಿಸುವ ಹುನ್ನಾರ

ಜಿ.ಎಸ್.ಮಣಿ

ವಿಶ್ವ ವ್ಯಾಪಾರ ಸಂಘಟನೆ (ಇನ್ನು ಮುಂದೆ ವಿವ್ಯಾಸಂ)ಯ ಅತ್ಯಂತ ಮಹತ್ವದ ಮಾತುಕತೆ ಮೆಕ್ಸಿಕೊ ದೇಶದ ಕ್ಯಾನ್‌ಕನ್ ನಗರದಲ್ಲಿ ನಡೆಯಲಿದೆ. ಇದಕ್ಕಾಗಿ ತಯಾರಿಗಳು, ಚರ್ಚೆಗಳು ಭರದಿಂದ ನಡೆಯುತ್ತಿವೆ. ಈ ಸಭೆಯಲ್ಲಿ ಏನಾಗುತ್ತದೆ ಎಂಬುದನ್ನು ಜಗತ್ತಿನಾದ್ಯಂತ ಪ್ರಜ್ಞಾವಂತ ಜನರು ಕುತೂಹಲಿಗಳಾಗಿ ಕಾಯುತ್ತಿದ್ದಾರೆ. ಯಾಕೆಂದರೆ ಜಗತ್ತಿನ ಎಲ್ಲ ಜನರನ್ನು ತಟ್ಟುವಂತಹ ಪರಿಣಾಮ ಇದರಿಂದ ಉಂಟಾಗುತ್ತದೆ.

ಸೆಪ್ಟೆಂಬರ್ 10 ರಿಂದ 14 ರವರೆಗೆ ಈ ಸಮಾವೇಶ ನಡೆಯಲಿದ್ದು 146 ಸದಸ್ಯ ರಾಷ್ಟ್ರಗಳು ಅದರಲ್ಲಿ ಭಾಗವಹಿಸಲಿವೆ. ವಿವ್ಯಾಸಂನ ಸಚಿವ ಮಟ್ಟದ ಸಭೆಗಳು ಪ್ರತಿ ಎರಡು ವರ್ಷಕ್ಕೊಮ್ಮೆ ನಡೆಯುತ್ತದೆ. 1999 ರಲ್ಲಿ ಸಿಯಾಟಲ್, 2001 ರಲ್ಲಿ ದೋಹಾದಲ್ಲಿ ನಡೆದಿದ್ದವು. ಈ ವರ್ಷ ಇದು ಮೆಕ್ಸಿಕೊದ ರಾಜದಾನಿ ಕ್ಯಾನ್‌ಕುನ್‌ನಲ್ಲಿ ನಡೆಯುತ್ತದೆ.

ಹಿಂದಿನ ಸಭೆಗಳಲ್ಲಿ ತೆಗೆದುಕೊಂಡ ನಿರ್ಧಾರಗಳ ಮೇಲಿನ ಕಾರ್ಯಕ್ರಮಗಳ ಜಾರಿ, ಮುಂಬರುವ ದಿನಗಳಿಗಾಗಿ ಹೊಸ ಸುತ್ತಿನ ವ್ಯಾಪಾರ ಮಾತುಕತೆಗಳು ಈ ಸಭೆಯ ಭಾಗವಾಗಿರುತ್ತವೆ.

ಜನವರಿ 2005, ರ ವೇಳೆಗೆ ದೋಹಾ ಸುತ್ತಿನ ವ್ಯಾಪಾರ ಸಂಧಾನ ಮಾತು ಕತೆಗಳು ಪೂರ್ಣ ಗೊಳ್ಳಬೇಕಿವೆ. ಇದಕ್ಕಾಗಿಯೇ ಹಲವು ಗಡುವುಗಳನ್ನು ಮೈಲಿಗಲ್ಲುಗಳೆಂದು ರೂಪಿಸಲಾಗಿತ್ತು. ಆದರೆ ಈವರೆಗೆ ಯಾವುದೇ ಒಂದು ಗಡುವಿನ ಒಳಗೂ ಯಾವುದೇ ಕ್ಷೇತ್ರಗಳಲ್ಲೂ ಪ್ರಗತಿಯಾಗಿಲ್ಲ. ಮುಂದುವರಿದ ದೇಶಗಳು ಅಭಿವೃದ್ಧಿಶೀಲ ಮತ್ತು ಬಡರಾಷ್ಟ್ರಗಳ ಮೇಲೆ ಅವಾಸ್ತವವಾದ ಷರತ್ತುಗಳನ್ನು ಹೇರುತ್ತಿರುವುದು ಇದಕ್ಕೆ ಮುಖ್ಯ ಕಾರಣ.

ಭಾರತದ ಸ್ಥಿತಿ: ಕೇಂದ್ರದ ಮಂತ್ರಿ ಅರುಣ ಜೆಟ್ಲಿಯವರು ಭಾರತದ ನಿಯೋಗದ ನೇತೃತ್ವವನ್ನು ವಹಿಸಲಿದ್ದಾರೆ. ಮಾತುಕತೆಗಳಿಗೆ ಪೂರ್ವಭಾವಿ ತಯಾರಿಗಳು ನಡೆಯುತ್ತಿವೆ ಎಂದು ವರದಿಗಳು ಬರುತ್ತಿವೆಯಾದರೂ ಭಾರತದ ತಯಾರಿ ಏನೇನೂ ಸಾಲದು ಎಂದು ಹಿಂದೆ ಹ್ಯಾಟ್‌ನಲ್ಲಿ ಭಾರತದ ರಾಯಭಾರಿಯಾಗಿದ್ದ ಶ್ರೀ ಎಸ್.ಪಿ.ಶುಕ್ಲಾ ಅವರು ಹೇಳಿದ್ದಾರೆ. ಜುಲೈನ ಮಧ್ಯಭಾಗದಿಂದಲೂ ಸಚಿವ ಮಟ್ಟದ ಹೇಳಿಕೆಯೊಂದು ಸಿದ್ಧವಾಗುತ್ತಿದ್ದು ಅದರಲ್ಲಿ ಹಲವು ಖಾಲಿ ಬಾಕ್ಸ್‌ಗಳಿವೆಯಂತೆ. ಈ ಬಾಕ್ಸ್‌ಗಳೆಂದರೆ ಸಂದೇಶವಿರುವ ವಿಷಯಗಳು, ಭಿನ್ನಾಭಿಪ್ರಾಯ ಇರುವ ವಿಷಯಗಳು ಇತ್ಯಾದಿ.

ಅಭಿವೃದ್ಧಿಶೀಲ ದೇಶಗಳಿಗೆ ಮುಖ್ಯವಾದ ಹಲವಾರು ವಿಷಯಗಳನ್ನು ಅಭಿವೃದ್ಧಿ ಹೊಂದಿರುವ ದೇಶಗಳು ಮರೆಮಾಚುತ್ತಿವೆ ಅಥವಾ ಅವುಗಳನ್ನು ಕಾಟಾಚಾರಕ್ಕಾಗಿಯೇ ಎಂಬಂತೆ ವಿಷಯ ಪಟ್ಟಿಯಲ್ಲಿ ಸೇರಿಸಿಕೊಂಡಿವೆ ಎನ್ನಲಾಗುತ್ತಿದೆ.

ವಿವ್ಯಾಸಂ ನ ಒಟ್ಟಾರೆ ಮಾತುಕತೆಗಳ ಬಗೆಗೆ ಓದಿದರೆ ಒಂದು ಮಾತಂತೂ ಬಹಳ ಸ್ಪಷ್ಟವಾಗಿ ಗೋಚರವಾಗುತ್ತದೆ. ಅದೆಂದರೆ ಅಭಿವೃದ್ಧಿಶೀಲ ದೇಶಗಳಿಗೆ ಬಹಳ ಕಡಿಮೆ ಉಪಾಯಗಳಿವೆ. ಬಹಳ ರಕ್ಷಣಾತ್ಮಕವಾಗಿರುವ ಅನಿವಾರ್ಯತೆ ಅವರಿಗಿದೆ. ಅಮೇರಿಕ, ಯುರೋಪಿನ ಸಮುದಾಯ, ಜಪಾನ್. ಮತ್ತು ಕೆನಡಾಗಳ ಅಧಿಕಾರ ಹಿತಾಸಕ್ತಿಗಳನ್ನು ಕಾಯುವುದಕ್ಕಾಗಿಯೇ ರೂಪಿತಗೊಂಡಿರುವ ಈ ಮಾತುಕತೆಗಳ ಟಿಪ್ಪಣಿ ಅಭಿವೃದ್ಧಿಶೀಲ ದೇಶಗಳಿಗೆ ಅತ್ಯಂತ ಕಡಿಮೆ ಅವಕಾಶಗಳನ್ನು ಮಾಡಿಕೊಡುತ್ತದೆ.

ದೋಹಾ ಸಭೆಯಲ್ಲಿ ಅಭಿವೃದ್ಧಿಶೀಲ ದೇಶಗಳಿಗೆ ರಿಯಾಯತಿ ತೋರಿಸುವ ಮಾತು ಒಪ್ಪಿತವಾಗಿತ್ತು. ಆದ್ದರಿಂದಲೇ ಇದನ್ನು "ವ್ಯಾಪಾರ ಮಾತುಕತೆಯ ಸುತ್ತು" ಎಂದು ಕರೆಯುವ ಬದಲು "ದೋಹಾ ಅಭಿವೃದ್ಧಿ ಕಾರ್ಯಕ್ರಮ ಪಟ್ಟಿ" ಎಂದು ಕರೆಯಲಾಗಿತ್ತು. ಆದರೆ ಈ ದಿಸೆಯಲ್ಲಿ ಯಾವುದೇ ಕೆಲಸವೂ ಆಗಿಲ್ಲ ಮತ್ತು ಯಾವುದೇ ಗಡವುಗಳನ್ನು ಮುಟ್ಟಲಾಗಿಲ್ಲ. ಮುಖ್ಯವಾಗಿ ಕೃಷಿ, ಪೇಟೆಂಟ್‌ಗಳು ಮತ್ತು ಸಾರ್ವಜನಿಕ ಆರೋಗ್ಯ, ಅಭಿವೃದ್ಧಿಶೀಲ ದೇಶಗಳಿಗೆ ವಿಶೇಷ ಪರಿಗಣನೆ - ಈ ಕ್ಷೇತ್ರಗಳಲ್ಲಿ

ಸೆಪ್ಟೆಂಬರ್ 10 ರಂದು ಬೆಂಗಳೂರಿನಲ್ಲಿಯೂ ಪ್ರತಿಭಟನೆ

ಯಾವುದೇ ಪ್ರಗತಿ ಕಂಡುಬಂದಿಲ್ಲ.

ಅಭಿವೃದ್ಧಿಶೀಲ ದೇಶಗಳಿಗೆ ವಿಶೇಷ ಸ್ಥಾನಧಾನ ನೀಡುವುದು ವಿವ್ಯಾಸಂ ನ ಒಪ್ಪಂದಗಳ ಮುಖ್ಯ ಭಾಗ ಎಂದು ದೋಹಾದಲ್ಲಿ ಒಪ್ಪಿಕೊಳ್ಳಲಾಗಿತ್ತು. ಇಂತಹ ಸ್ಥಾನಮಾನಗಳ ರೂಪುರೇಷೆ ಏನು ಎಂಬುದನ್ನು ಜುಲೈ 31, 2002 ರ ಒಳಗೆ ಜನರಲ್ ಕೌನ್ಸಿಲ್‌ಗೆ ವರದಿಯನ್ನು ಸಲ್ಲಿಸಬೇಕಾಗಿತ್ತು. ಇದರ ಜೊತೆಗೆ ಸ್ಪಷ್ಟವಾದ ಶಿಫಾರಸ್ಸುಗಳೂ ಇರಬೇಕಾಗಿತ್ತು. ಈ ಗಡುವನ್ನು ಡಿಸೆಂಬರ್ 2002 ಗೆ ವಿಸ್ತರಿಸಲಾಯಿತು. ನಂತರ ಅದನ್ನು ಪುನಃ ಫೆಬ್ರುವರಿ 10, 2003 ಕ್ಕೆ ವಿಸ್ತರಿಸಲಾಯಿತು. ಇಂದಿಗೂ ಇದು ಆಗಿಲ್ಲ. ಔದ್ಯಮೀಕೃತ ದೇಶಗಳು ಅಭಿವೃದ್ಧಿಶೀಲ ದೇಶಗಳಿಗೆಲ್ಲಾ ಲಾಭವಾಗುವಂತಹ ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳಲು ಬಿಡವು. ಇಂತಹ ಪ್ರಸ್ತಾಪಗಳು ಬಂದಾಗಲೆಲ್ಲ ಅವು 'ಎರಡು ತರಹದ ಹಕ್ಕುಗಳನ್ನು ವಿವ್ಯಾಸಂನೊಳಗೆ ತರುವುದು ಸರಿಯಲ್ಲ ಎಂದು ಬೊಬ್ಬೆ ಹೊಡೆಯುತ್ತವೆ.

ಮೊಟ್ಟಾ ಕರಡು

ಮೆಕ್ಸಿಕೊ ರಾಯಭಾರಿ ಎಡ್ವರ್ಡೊ ಫೆರೆರ್ಝ್ ಮೊಟ್ಟಾ ಮಾಂಟ್ರಿಯಲ್ ಸಭೆಯ ನಂತರ ಮುಖ್ಯ ಒಪ್ಪಂದವಾಗುವ ಸ್ಥಿತಿ ಇದೆ ಎಂದು ಹೇಳಿದ. ಇದು ವ್ಯಾಪರಿ ಸಂಬಂಧಿತ ಬೌದ್ಧಿಕ ಆಸ್ತಿಗಳು ಮತ್ತು ಸಾರ್ವಜನಿಕ ಆರೋಗ್ಯದ ವಿಷಯದಲ್ಲಿ ಈ ಕರಡು ಹೆಚ್‌ಐವಿ/ ಏಡ್ಸ್, ಮಲೇರಿಯಾ ಮತ್ತು ಕ್ಷಯ ರೋಗಗಳ ಔಷದಿಗಳನ್ನು ಸಾರ್ವಜನಿಕ ಆರೋಗ್ಯವನ್ನು ರಕ್ಷಿಸುವ ದೃಷ್ಟಿಯಿಂದ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಸಾಗಿಸುವುದನ್ನು ಅನುಮತಿಸುವ ಮಾತನಾಡುತ್ತದೆ.

ಈ ಕರಡು ಅಮೇರಿಕಕ್ಕೆ ಅನುಕೂಲವಾಗುವಂತೆ ರಚಿತವಾಗಿದೆ. ಯಾಕೆಂದರೆ ಒಂದೊಂದು ಔಷದಿಯನ್ನು ರಫ್ತು ಮಾಡುವಾಗಲೂ, ಹಾಗೆ ರಫ್ತು

ಪಟ್ಟಿಯನ್ನು ಒಪ್ಪಿಕೊಳ್ಳಲು ತಯಾರಾಗಿರಲಿಲ್ಲ. ಈ ವಿಷಯದಲ್ಲಿ ಅಮೇರಿಕಾ ಯುರೋಪಿನ ಸಮುದಾಯದ ಜೊತೆಗೆ ಸೇರಿಕೊಳ್ಳುವ ತಯಾರಿಯಲ್ಲಿದೆ. ಅಷ್ಟೇ ಅಲ್ಲ ಯುರೋಪಿನ ಮೇಲೆ ಕೃಷಿ ಸಬ್ಸಿಡಿ ಕಡಿತ ಮಾಡುವಂತೆ ಒತ್ತಡವನ್ನೂ ಹೇರಲಿದೆ. ಆದರೆ ಅಭಿವೃದ್ಧಿ ದೇಶಗಳಿಗೆ ವಿಶೇಷ ಸ್ಥಾನಮಾನ, ಇತ್ಯಾದಿ ವಿಷಯಗಳ ಮೇಲೆ ಯಾವುದೇ ಪ್ರಗತಿ ಆಗುವಂತೆ ಕಾಣುವುದಿಲ್ಲ.


ಕೃಷಿ ಸಂಬಂಧಿ ಮಾತುಕತೆ

ಕೃಷಿ ಕುರಿತ ವಿವ್ಯಾಸಂ ಮಾತುಕತೆಗಳಲ್ಲಿ ಮೂರು ವಿಸ್ತೃತ ವಿಷಯಗಳಿವೆ. ಅವುಗಳೆಂದರೆ

1. ಮಾರುಕಟ್ಟೆ ಸಂಪರ್ಕ ಅಥವಾ ಕೃಷಿ ವಸ್ತುಗಳ ಮೇಲೆ ಕಸ್ಟಮ್ಸ್ ಶುಲ್ಕ ಕಡಿತ
2. ಸ್ವದೇಶಿ ಬೆಂಬಲ ಅಥವಾ ವಿಶ್ವ ವ್ಯಾಪಾರದ ದಿಕ್ಕನ್ನು ತಿರುಚುತ್ತಿರುವ ಸಬ್ಸಿಡಿಗಳ ಕಡಿತ.

ಕೃಷಿ ಉತ್ಪನ್ನಗಳಿಗೆ ರಫ್ತು ಸಬ್ಸಿಡಿಗಳು

ಉರುಗ್ವೆ ಸುತ್ತಿನ ಮಾತುಕತೆಗಳಲ್ಲಿ ಕೃಷಿ ಸಂಬಂಧಿತ ವ್ಯಾಪಾರದ ಬಗೆಗಿನ ಮಾತುಕತೆಗಳು ನಡೆದರೂ ಅದು ಹಲವು ರೀತಿಯಲ್ಲಿ ವಿಫಲವಾಗಿಯೇ ಇದೆ. ಆಹಾರ ಸುರಕ್ಷತೆ ಮತ್ತು ಅಭಿವೃದ್ಧಿಶೀಲ ದೇಶಗಳ ಕಾಳಜಿಗಳ ಬಗ್ಗೆ ಈ ಒಪ್ಪಂದ ಕಾಳಜಿ ತೋರುವುದಿಲ್ಲ. ಕೃಷಿ ಸಂಬಂಧಿ ಸಬ್ಸಿಡಿಗಳು ಕೃಷಿ ವ್ಯಾಪಾರವನ್ನೇ



ವಿರೂಪಗೊಳಿಸುತ್ತಿವೆ ಎಂಬುದು ಔದ್ಯಮೀಕೃತ ದೇಶಗಳ ಹೇಳಿಕೆ.

ಕೆನಡಾ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ಇತ್ಯಾದಿ 18 ದೇಶಗಳನ್ನೊಳಗೊಂಡ ಕೈರ್ನ್ಸ್ ತಂಡ ತನ್ನ ಕೃಷಿ ಉತ್ಪನ್ನಗಳನ್ನು ಬೃಹತ್ ಮಾರುಕಟ್ಟೆ

ಮಾಡುವ ಅವಶ್ಯಕತೆಯನ್ನು ಬೇರೆ ಬೇರೆಯಾಗಿ ಪರೀಕ್ಷಿಸಿ ಪರವಾನಗಿ ನೀಡಲಾಗುತ್ತದೆ. ಇದರರ್ಥ ಇಂತಹ ರಫ್ತುಗಳು ಸಾಧ್ಯವೇ ಆಗುವುದಿಲ್ಲ ಎಂದು ಅಥವಾ ಅದು ಅಮೇರಿಕಾದಂತಹ ರಾಷ್ಟ್ರಕ್ಕೆ ಲಾಭದಾಯಕವಾಗಿದ್ದರೆ ಮಾತ್ರ ಸಾಧ್ಯ ಎಂದು.

ಇಂತಹ ಹುನ್ನಾರಗಳನ್ನು ಕಂಡೇ ಅಭಿವೃದ್ಧಿಶೀಲ ದೇಶಗಳು ಯಾವುದೇ ರೋಗ ನಿರ್ಧಿಷ್ಟವಾದ

ಗಳಾದ ಚೀನಾ ಮತ್ತು ಭಾರತಗಳಲ್ಲಿ ಮಾರ ಬಯಸುತ್ತದೆ. ಆದರೆ ಭಾರತದಂತಹ ದೇಶಕ್ಕೆ ತನ್ನ ರೈತ ಸಮುದಾಯವನ್ನು ಅಂದರೆ ರೈತರ ಜೀವನೋಪಾಯವನ್ನು ರಕ್ಷಿಸುವ ಜವಾಬ್ದಾರಿಯಿದೆ. ಆದ್ದರಿಂದಲೇ ಭಾರತ ಕೃ ಉತ್ಪನ್ನಗಳ ಆಮದು ಸುಂಕದಲ್ಲಿ ಕಡಿತ ಮಾಡಲು ತಯಾರಾಗಬಾರದು.

ಹೀಗೆ ಕೃಷಿ ವ್ಯಾಪಾರಿ ಸಂಬಂಧಿತ ಹತ್ತು ಹಲವು ವಿಷಯಗಳಲ್ಲಿ ಭಾರತ ಸೇರಿದಂತೆ ಅಭಿವೃದ್ಧಿಶೀಲ ದೇಶಗಳ ಮೇಲೆ ಅಗಾಧ ಒತ್ತಡವನ್ನು ಹೇರಲಾಗುತ್ತಿದೆ.

ಇಂತಹ ಸಂದರ್ಭದಲ್ಲಿ ಭಾರತ ಅಭಿವೃದ್ಧಿಶೀಲ ದೇಶಗಳನ್ನು ಸಂಘಟಿಸಿ ಅವುಗಳ ನೇತೃತ್ವ ವಹಿಸಿ ಈ ದೇಶಗಳಿಗೆ ಅನ್ಯಾಯವಾಗುವುದನ್ನು ತಡೆಯುವ ಗಂಭೀರ ಪ್ರಯತ್ನಗಳನ್ನು ಮಾಡಬೇಕಾಗಿತ್ತು. ಆದರೆ ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರಕ್ಕೆ ಇಂತಹ ವಿಶಾಲ ದೃಷ್ಟಿಕೋನವಾಗಲಿ, ಹೋರಾಡುವ ಛಲದ ಮನೋಭಾವವಾಗಲಿ ಇಲ್ಲ.

ಅಮೇರಿಕ, ಯುರೋಪಿನ ಸಮುದಾಯದ ಸಖ್ಯ

ಕ್ಯಾನ್‌ಕುನ್ ಸಭೆಯ ಹಿನ್ನೆಲೆಯಲ್ಲಿ ಅಮೇರಿ ಮತ್ತು ಯುರೋಪಿನ ಸಮುದಾಯ ಒಂದಾಗುತ್ತಿವೆ. ಅಭಿವೃದ್ಧಿ ಹೊಂದಿದ ಈ ದೇಶಗಳು ಒಂದಾದಾಗಲೆಲ್ಲ ಅಭಿವೃದ್ಧಿಶೀಲ ದೇಶಗಳ ಹಕ್ಕುಗಳನ್ನು ಮೊಟಕುಗೊಳಿಸುವ ಕೆಲಸವನ್ನು ಮಾಡಿವೆ. ಇಂತಹ ಹಿನ್ನೆಲೆಯಲ್ಲಿ ಅಭಿವೃದ್ಧಿಶೀಲ ದೇಶಗಳು ಒಗ್ಗಟ್ಟಾಗಿ ಮಾತುಕತೆಗೆ ನಿಲ್ಲುವ ಅವಶ್ಯಕತೆ ಇತ್ತು. ಆದರೆ ಅಂತಹ ಒಗ್ಗಟ್ಟು ಮೂಡಿಸುವ ಜವಾಬ್ದಾರಿಯನ್ನು ಭಾರತದಂತ ದೇಶ ಹೊರಲಿಲ್ಲ.

ಔಷಧಿ ಒಪ್ಪಂದ

ಈ ನಡುವೆ ಔಷಧಿಗಳ ವಿಷಯದ ಮಾತುಕತೆ ಮುಗಿದು ಒಪ್ಪಂದವಾಗಿದೆ ಎಂದು ವಿವ್ಯಾಸಂ ದೊಡ್ಡದಾಗಿ ಸುದ್ದಿ ಮಾಡಿದೆ. ಒಪ್ಪಂದದಿಂದಾಗಿ ಆಫ್ರಿಕಾ ದೇಶದಲ್ಲಿರುವ ಮೂ ಕೋಟಿ ಏಡ್ಸ್ ರೋಗಿಗಳಿಗೆ ಅನುಕೂಲವಾಗ ಎಂದು ಹೇಳಲಾಗುತ್ತಿದೆ.

ಮುಖ್ಯವಾಗಿ ಈ ಒಪ್ಪಂದದಿಂದ ಅಮೇರಿ ಔಷಧಿ ಉತ್ಪಾದಕರು ಖುಷಿಯಾಗಿರುವ ಕಂಡುಬರುತ್ತದೆ. ಎಲ್ಲ ದೇಶಗಳಿಗೂ ಇದರ ಲಾಭವಾಗುತ್ತದೆ ಎಂದು ಅವರು ಹೇಳುತ್ತಿದ್ದಾ

ನೊಬೆಲ್ ಪ್ರಶಸ್ತಿ ವಿಜೇತ ಡಾ.ಎಮ್ ಎ ಟಿಹೋನ್ ಪ್ರಕಾರ ಈ ಒಪ್ಪಂದ ರೋಗಿಗ ಏನೇನೂ ಕೊಡುವುದಿಲ್ಲ. ಯಾಕೆಂದರೆ ಜಾ ಪೇಟೆಂಟ್ ನಿಯಮಗಳು ಈ ಔಷಧ ಬೆಲೆಗಳನ್ನು ಏರಿಸುತ್ತಲೇ ಇರುತ್ತವೆ.

ತಜ್ಞರ ಪ್ರಕಾರ ಅಭಿವೃದ್ಧಿಶೀಲ ದೇ ಈ ಒಪ್ಪಂದದಿಂದ ಏನೇನೂ ಲಾಭ ಹೆಚ್ಚಿನ ಬೆಲೆ ಮತ್ತು ಔಷಧಿ ಕಂಪನಿಗಳ ಸ್ವಾಮ್ಯತ್ವ ಎರಡೂ ಮುಂದುವರಿಯು ದ್ದರಿಂದ ಬಡ ದೇಶಗಳ ಜನರಿಗೆ ಯಾ ತರಹದ ಅನುಕೂಲ ಈ ಒಪ್ಪಂದ ಆಗುವುದಿಲ್ಲ.

ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಆರೋಗ್ಯದ ಸಂಘಟನೆಯ ಪ್ರಕಾರ ಜ ಮೂರನೇ ಒಂದು ಭಾಗ ಜನತೆ ಔಷ ಬೆಲೆಯನ್ನು ತೆರಲಾರರು. ಅಭಿವೃದ್ಧಿ ದೇಶಗಳಲ್ಲಿ ಬೆಲೆಗಳನ್ನು ತೆರಿಗೆ, ಸುಂಕ ಇತರ ಕಾರಣಗಳಿಂದಾಗಿ ಏರಿಸಲಾಗುವುದ ಈ ದೇಶಗಳಲ್ಲಿ ಬೆಲೆಗಳು ಅಭಿವೃದ್ಧಿ ಹೊ ದೇಶಗಳಿಗಿಂತ ಹೆಚ್ಚಾದರೂ ಆಶ್ಚರ್ಯವಿಲ್ಲ.

ಇಂತಹ ಸಂದರ್ಭದಲ್ಲಿ ಮಾತು ತೆರಳುವ ಭಾರತ ಅಭಿವೃದ್ಧಿಶೀಲ ದೇ ಒಗ್ಗಟ್ಟನ್ನು ಸಾಧಿಸದೆ ಏನನ್ನು ಪಡೆಯಲು ಸ ಇದು ಬಿಜೆಪಿ ನೇತೃತ್ವದ ಎನ್.ಡಿ.ಎ ಸ ಉತ್ತರಿಸಬೇಕಾದ ಪ್ರಶ್ನೆ ಅಲ್ಲವೆ?

ಉಳಗಾದಿಂದ ಉಳ್ಳಾಲದತ್ತ ಕರಾವಳಿ ಜಾಥಾ : ಸರ್ಕಾರಗಳ ಲೂಟಿಕೋರ ನೀತಿಗಳು ಬಯಲು

ಭೂ ಹೋರಾಟದಲ್ಲಿ 6 ಜನ ರೈತರು ಹುತಾತ್ಮರಾದ ನಾಡಾದ ಕಾರವಾರದ ಉಳಗಾದಿಂದ ಇನ್ನೊಂದು ಪ್ರಜಾಸತ್ತಾತ್ಮಕ ಹೋರಾಟದ ನಾಡಾದ ಉಳ್ಳಾಲಕ್ಕೆ ಸಿಪಿಐ(ಎಂ) ಸಂಘಟಿಸಿದ ಕರಾವಳಿ ಜಾಥಾ ಜನಮನ ಗೆಲ್ಲುವಲ್ಲಿ ಯಶಸ್ವಿಯಾಗಿದೆ. ರಾಜ್ಯದ ಒಂದು ಗಡಿಯಿಂದ ಇನ್ನೊಂದು ಗಡಿಯವರೆಗಿನ ಹಲವು ಪ್ರದೇಶಗಳಲ್ಲಿ ಸಂಘಟಿತ ಇಲ್ಲವೇ ಅಸಂಘಟಿತ ಪ್ರಚಾರಾಂದೋಲನ ಜಾಥಾ ಸಭೆಗಳನ್ನು ನಡೆಸಿ, ಸಾವಿರಾರು ಕರಪತ್ರಗಳನ್ನು ವಿತರಿಸಿ, ಪುಸ್ತಕ ಮಾರಿ ದೇಶದ ಜನತೆಯನ್ನು ಲೂಟಿ ಮಾಡುತ್ತಿರುವ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರದ ನೀತಿಗಳನ್ನು ಬಯಲುಗೊಳಿಸಲಾಯಿತು. ಬಹುತೇಕ ಸಭೆಗಳಲ್ಲಿ ನೂರಾರು ಜನ ಸಾರ್ವಜನಿಕರು ನೆರೆದು ಸಿಪಿಐ(ಎಂ) ಎತ್ತಿರುವ ಪ್ರಶ್ನೆಗಳನ್ನು ತದೇಕಚಿತ್ತದಿಂದ ಆಲಿಸಿದರು. ಕೆಲವು ಸಂದರ್ಭದಲ್ಲಿ ಪಟಾಕಿ ಸಿಡಿಸಿ, ಜಾಥಾ ತಂಡದ ಮೇಲೆ ಹೂಗಳನ್ನು ಚೆಲ್ಲಿ, ಕೈಯಲ್ಲಿ ಕೆಂಗುಲಾಬಿಯನ್ನು ಕೊಟ್ಟು ಸ್ವಾಗತಿಸಿದರು. ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಿದರು. ಸರಿಯಾದ ಸಮಯಕ್ಕೆ ಸರಿಯಾದ ಕಾರ್ಯಕ್ರಮ ಎನ್ನುವ ಅಂಶ ಜಾಥಾ ಕಾರ್ಯಕರ್ತರಲ್ಲಿ ಮೂಡಿತು. ವಾಜಪೇಯಿ ನೇತೃತ್ವದ ಸರಕಾರ ರಕ್ಷಣಾ ಇಲಾಖೆಯಲ್ಲಿಯೇ ಹಣ ತಿಂದಿದೆ ಎಂದು ಹೇಳಿದಾಗ ಜನ ದಂಗಾಗಿ ಕೇಳುತ್ತಿದ್ದರು. ಮುಂದಿನ ಚುನಾವಣೆಯಲ್ಲಿ ತಮ್ಮ ಅಸ್ತ್ರ ಪ್ರಯೋಗಿಸಲು ಸಿದ್ಧರಾದಂತೆ ತೋರುತ್ತಿತ್ತು. ದಾರಿಯುದ್ದಕ್ಕೂ ಸುರಿಯುತ್ತಿರುವ ಮಳೆಯ ನಡುವೆಯೇ ಚತ್ರಿಯಡಿಯಲ್ಲಿ ಜನರು, ಕಾರ್ಯಕರ್ತರು ಜಾಥಾ ತಂಡದ ನಾಯಕರ ಮಾತುಗಳನ್ನು ಕೇಳಿದರು. ಮನುಷ್ಯರ ಹತ್ಯೆ



ಸಭೆಯಲ್ಲಿ ಜಿ.ಎನ್.ನಾಗರಾಜ್

ತಡೆಯಲು ವಿಫಲವಾದ ಸರ್ಕಾರ ಗೋ ಹತ್ಯೆ ಬಗ್ಗೆ ಮಾತನಾಡುತ್ತಿರುವ ಗೋಸುಂಬೆತನವನ್ನು ಸಾರ್ವಜನಿಕರೆದುರು ಬಟ್ಟಬಯಲು ಗೊಳಿಸಲಾಯಿತು.

ಜಾಥಾ ಉದ್ಘಾಟನೆಗೊಂಡ ದಿನ ಬೆಳಿಗ್ಗೆ ಪತ್ರಿಕೆಯಲ್ಲಿ ರೈತರ ಆತ್ಮಹತ್ಯೆಗಳ ಸಂಖ್ಯೆ ಕ್ರಿಕೆಟ್‌ನ ಸ್ಕೋರ್‌ಬೋರ್ಡ್‌ನಲ್ಲಿ ಏರಿದಂತೆ ಸಾವಿನ ಸಂಖ್ಯೆ ಏರುತ್ತಿತ್ತು. ಈ ಅಂಶಗಳನ್ನು ವಿವರಿಸುತ್ತಾ ರೈತರ ಸಾಲ ಬಾಕಿ ವಸೂಲಿಗೆ ತಡೆ ಒಡ್ಡಿ, ಹೊಸ ಸಾಲಗಳನ್ನು ನೀಡಬೇಕು ಎನ್ನುವಾಗ ಕರಾವಳಿ ರೈತರು ಸ್ಪಂದಿಸುತ್ತಿದ್ದ ರೀತಿ ಅವಿಸ್ಮರಣೀಯ. ತೆಂಗಿನ ನುಸಿ ರೋಗ, ಅಡಿಕೆಗೆ ಬೆಲೆ ಇಲ್ಲ, ಭತ್ತ ಬೆಳೆಗಾರ ಇನ್ನಷ್ಟು ಕಂಗಾಲು, ಹೀಗಿರುವ ಪರಿಸ್ಥಿತಿಯಲ್ಲಿ ಗ್ರಾಮೀಣ ಜನತೆಗೆ ಏನಾದರೂ ಪರಿಹಾರ ಸರಕಾರದಿಂದ ಸಿಗಬೇಕು ಎನ್ನುವ ಆಸೆ ಎದ್ದು ಕಾಣುತ್ತಿತ್ತು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿನಾಶಕಾರಿ ಕೈಗಾರಿಕಾ ನೀತಿಯಿಂದ ಸಣ್ಣ ಕೈಗಾರಿಕೆಗಳು, ಹಂಚು ಕಾರ್ಖಾನೆಗಳು ಮುಚ್ಚಿ ಸಾವಿರಾರು ಕಾರ್ಮಿಕರು ನಿರುದ್ಯೋಗಿಗಳಾದ ಪರಿಸ್ಥಿತಿ, ಬಹುರಾಷ್ಟ್ರೀಯ ಕಂಪನಿಗಳಿಗೆ ಮಣೆ ಹಾಕುತ್ತಿರುವ ಸರ್ಕಾರಗಳು, ಈ ಬಗ್ಗೆ ತಲೆಕೆಡಿಸಿಕೊಳ್ಳದ ಆಳುವ ಜನ, ಮುಂತಾದ ಪ್ರಚಾರಾಂದೋಲನದ ವಿಷಯಗಳು ಸಾಮಾನ್ಯ ಜನರ ತಟ್ಟುವಲ್ಲಿ ಯಶಸ್ವಿಯಾದವು. ಜಾಥಾ ಹಾದು ಹೋದ ಅಂಕೋಲ, ಹೊನ್ನಾವರ, ಕಾಸರಗೋಡು, ಕುಂದಾಪುರ, ಉಡುಪಿ, ಉಳ್ಳಾಲಗಳಲ್ಲಿ ಹಂಚಿನ ಉದ್ಯಮ ಈಗಾಗಲೇ ಸ್ಥಗಿತತೆಯ ಸ್ಥಿತಿ ತಲುಪಿದ್ದು ಪುನಶ್ಚೇತನಕ್ಕಾಗಿ ಯಾವುದೇ ಯೋಜನೆ ಇಲ್ಲ. ಕರಾವಳಿಯ ತುಂಬಾ ಹಂಚಿರುವ ತೆಂಗಿನ ಮರದ ನುಸಿ ರೋಗ ತಡೆಗೆ ಯಾವುದೇ ಕ್ರಮ, ಹಾನಿಗೆ ಯಾವುದೇ ಪರಿಹಾರ ಇಲ್ಲ. ಅತಿಕ್ರಮಣ ಭೂಮಿ ಸಕ್ರಮಗೊಂಡಿಲ್ಲ. ಒಕ್ಕಲೆಬ್ಬಿಸಲು ಮುಂದಾಗುತ್ತಿದೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಪರಿಣಾಮಕಾರಿ ಕ್ರಮ ತೆಗೆದುಕೊಳ್ಳುತ್ತಿಲ್ಲ. ಈ ಮೊದಲಾದ ಪ್ರಶ್ನೆಗಳನ್ನು ಜನರ ಮುಂದಿಡಲಾಯಿತು.

ಉದ್ಘಾಟನೆ : ಕರಾವಳಿ ವಾಹನ ಜಾಥಾ ಆಗಸ್ಟ್ 24 ರಂದು ಕಾರವಾರ ತಾಲೂಕಿನ ಉಳಗಾದಲ್ಲಿ ನೂರಾರು ರೈತರ ಸಮ್ಮುಖದಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಬಿ.ಮಾಧವರವರಿಂದ ಉದ್ಘಾಟನೆಗೊಂಡು ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಮೂರು ದಿನ ಸಂಚರಿಸಿತು. ಉದ್ಘಾಟನಾ ಸಮಾರಂಭದಲ್ಲಿ ಕರ್ನಾಟಕ ಪ್ರಾಂತರೈತ ಸಂಘದ ಕಾರವಾರ ತಾಲೂಕು ಸಮಿತಿ ಅಧ್ಯಕ್ಷರಾದ ವಿಷ್ಣು ಶಂಕರ ನಾಯ್ಕ, ಸ್ಥಳೀಯ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಚಂದು ವಿ.ನಾಯ್ಕ, ಡಿವೈಎಫ್‌ಐ ತಾಲ್ಲೂಕು ಸಂಚಾಲಕ ಜೋಸ್ ಕೆ.ಥಾಮಸ್, ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಯಮುನಾ ಗಾಂವ್ಕರ, ಹಿರಿಯ ರೈತ ಮುಖಂಡ ಜೀವಾಜೀ ನಾಯ್ಕ ಮುಂತಾದವರು ಪಾಲ್ಗೊಂಡಿದ್ದರು. ಉ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಶಾಂತರಾಮ ನಾಯಕ ಸ್ವಾಗತ ಕೋರಿ ಕಾರ್ಯಕ್ರಮ ನಿರ್ವಹಿಸಿದರು. ಜಾಥಾದುದ್ದಕ್ಕೂ ಸರಕಾರದ ನೀತಿ ಖಂಡಿಸುವ ಮತ್ತು ಜನರ ನೋವುಗಳನ್ನು ಹೇಳುವ ಹಾಡುಗಳನ್ನು ಕೇಶವ ಮಡಿವಾಳ ಹೃದಯಸ್ಪರ್ಶಿಯಾಗಿ ಹಾಡಿ ಜನರ ಗಮನ ಸೆಳೆದರು.

ಶಾಂತರಾಮ ನಾಯಕ

ಮಂಗಳೂರಿನ ಉಳ್ಳಾಲದಲ್ಲಿ ಜಾಥಾ ಸಮಾರೋಪ ಸಮಾರಂಭ ಆ. 26 ರಂದು ಸಾಯಂಕಾಲ ನಡೆಯಿತು. ಈ ಸಂದರ್ಭದಲ್ಲಿ ಪಕ್ಷದ ಮುಖಂಡರಾದ ಕಾಂ. ಬಿ.ಮಾಧವ ಮತ್ತು ಶಾಂತರಾಮ ನಾಯಕ ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಶ್ರೀಯಾನ್ ಭಾಗವಹಿಸಿದ್ದರು. ಜನಮನವನ್ನು ಸೆಳೆಯುವಲ್ಲಿ ಯಶಸ್ವಿಯಾದ ಕರಾವಳಿ ವಾಹನ ಜಾಥಾ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ನೀತಿಯನ್ನು ಬದಲಾಯಿಸಿಕೊಳ್ಳದಿದ್ದರೆ ಜನರೆ ಅವರನ್ನು ಬದಲಾಯಿಸುತ್ತಾರೆ ಎಂದರು. ಆ ನಿಟ್ಟಿನಲ್ಲಿ ಪಕ್ಷ ಪ್ರಚಾರ ಪ್ರಕ್ಷೋಭೆ ಮುಂದುವರೆಸುವುದಾಗಿ ಘೋಷಿಸಿದರು. ರಾಜ್ಯ ಸಮಿತಿ ಸದಸ್ಯರಾದ ಕಾಂ.ರಾಮಚಂದ್ರ ಉಚ್ಚಿಲ್, ಬಾಲಕೃಷ್ಣ ಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು.

ಜಾಥಾ ತಂಡದ ನಾಯಕತ್ವವನ್ನು ಉ.ಕನ್ನಡ ಜಿಲ್ಲಾ ಸಮಿತಿ ಕಾರ್ಯದರ್ಶಿ ಹಾಗೂ ರಾಜ್ಯ ಸಮಿತಿ ಸದಸ್ಯರಾದ ಶಾಂತರಾಮ ನಾಯಕ ವಹಿಸಿದ್ದರು. ಜಾಥಾದಲ್ಲಿ ಭಾಗವಹಿಸಿದ ಇನ್ನಿತರ ಪಕ್ಷದ ಪ್ರಮುಖರೆಂದರೆ ಯಮುನಾ ಗಾಂವ್ಕರ, ಸುಭಾಷ್ ಕೊಪ್ಪಿಕರ, ತಿಲಕಗೌಡ, ಕೆ.ಶಂಕರ, ವಿಶ್ವನಾಥ ರೈ, ದೇವಿಡ್ ಕರ್ಕಡ, ಬಾಲಕೃಷ್ಣ ಶೆಟ್ಟಿ, ಯುವಜನ ಮುಖಂಡರಾದ ಕೇಶವ ಮಡಿವಾಳ(ಉ.ಕ) ಮತ್ತು ಸುನಿಲ್ ಕುಮಾರ್ ಬಜಾಲ್(ದ.ಕ) ಮುಂತಾದವರು.



ಅಪೂರ್ವ ಜನಸ್ಪಂದನ



ಸುರಿವ ಮಳೆ ಲೆಕ್ಕಿಸದೇ ಭಾಗಿಯಾದ ಜನತೆ


ಅರಿವನ್ನು ವಿಸ್ತರಿಸಿದ ಜಾಥಾ.....

ಪುಟ 7 ರಿಂದ

...ಲ್ಲೆಲ್ಲ ಜನಪ್ರತಿನಿಧಿಗಳು ಯಾರಿಗಾಗಿ ...ದುಕುತ್ತಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ. ...ಸರ್ಕಾರದ ರೈತವಿರೋಧಿ ನೀತಿಯ ವಿರುದ್ಧ ...ನಿ ಎತ್ತಿ ರಾಜ್ಯದ ಆಡಳಿತ ಸರ್ಕಾರವನ್ನೇ ...ದಲಿಸುವಲ್ಲಿ ಸಫಲ ಆಗಿರುವ ನರಗುಂದ ...ಂಡಾಯದಲ್ಲಿ ಹುತಾತ್ಮರಾದ ರೈತರ ನೆನಪಿನಲ್ಲಿ ...ಟ್ಟಿ ಸ್ಮರಣೆ ಫಲಕವನ್ನು ನೋಡಿ, ಅದಕ್ಕೊಂದು ...ಪು ವಂದನೆ ಹೇಳಿ ಹೊರಟಾಗ ಹಿಂದೊಮ್ಮೆ ನರಗುಂದದಲ್ಲಿ ನಡೆದ ಬಂಡಾಯ ಇಂದು ಇಡೀ ರಾಜ್ಯದಲ್ಲಿ ವಿಸ್ತರಿಸಬೇಕಾದ ಅಗತ್ಯತೆಯನ್ನು ಮನದಟ್ಟು ಮಾಡಿಕೊಟ್ಟಿತು. ಅಲ್ಲೇ ಭೇಟಿ ಆಗಿ ಊಟ ಹಾಕಿದ ನರಗುಂದ ಬಂಡಾಯದ ಮುಖ್ಯ ವ್ಯಕ್ತಿ ಸೊಪ್ಪಿನ್ ಮಾಸ್ತರರು, ನಮ್ಮ ಜಾಥಾದಲ್ಲಿಯೇ ಪ್ರಾರಂಭದಿಂದ ಇದ್ದಂತ ನರಗುಂದ ಬಂಡಾಯದಲ್ಲಿ ಪಾಲ್ಗೊಂಡಿದ್ದ ನಿತ್ಯಾನಂದ ಸ್ವಾಮಿಯವರು ಬಂಡಾಯದ ಸ್ವರೂಪವನ್ನು ಅದು ವಿಸ್ತರಿಸಿದ ಸ್ವರೂಪವನ್ನು ವಿವರಿಸಿದರು.

ನಾಲ್ಕು ದಿನಗಳ ಕಾಲ ಜಾಥಾದಲ್ಲಿ ಹೊಕ್ಕು ಹೆರಟಿದ ಸ್ಥಳಗಳು ರೈತರ, ಕೃಷಿ ಕೂಲಿಕಾರರ ಬವಣೆಯ ಪ್ರತ್ಯಕ್ಷದರ್ಶನ, ಹೊಸ ಹೊಸ ಬೇಡಿಕೆ ಸೇರಿಸಿಕೊಳ್ಳಲು ಸ್ಥಳೀಯ ಜನರ ಒತ್ತಾಯ, ಜಾಥಾ ಹೋಗುವ ಪ್ರತಿ ಪ್ರದೇಶ, ತಾಲೂಕುಗಳ ಬಗ್ಗೆ ಅಲ್ಲಿಯ ಪ್ರಧಾನ ಸಮಸ್ಯೆ, ಬೇಡಿಕೆಗಳ ಬಗ್ಗೆ, ಅಲ್ಲಿ ಈವರೆಗೆ ನಡೆದ ಹೋರಾಟ, ನಮ್ಮ ಸಂಘಟನೆಯ ಶಕ್ತಿಯ ಬಗ್ಗೆ .ನಿತ್ಯಾನಂದ ಸ್ವಾಮಿಯವರು ವಿವರವಾಗಿ ಕೊಟ್ಟ ಮಾಹಿತಿಗಳಿಂದ ನನ್ನ ಅರಿವಿನ ವಿಸ್ತಾರವಾಗಿದ್ದು ಒಂದು ಕಡೆಯಾದರೆ, ನಮ್ಮ ಪುಸ್ತಕ, ಕರಪತ್ರ, ಭಾಷಣ, ಸಂವಾದಗಳ ಮೂಲಕ ಅಲ್ಲಿಯ ಜನರ ಅರಿವು ವಿಸ್ತರಣೆ ಆಗಿದ್ದು ಇನ್ನೊಂದು ಕಡೆ.

ನಮ್ಮ ಜಾಥಾದ ವಾಹನದ ಮೂಲಕ ಅಬ್ದುಲ್ ಮತ್ತು ಚಾಲಕ ಹನುಮಂತ ಇವರು ಒಂದೆರಡು ದಿನಕಳೆದಂತೆ ಅಲ್ಲಿಯ ಜೀವಂತ ಸ್ಥಿತಿ ನೋಡಿ ಕೇವಲ ಮಾಲಿಕ-ಚಾಲಕರಾಗಿರದೆ ನಮ್ಮ ಕಾರ್ಯಕರ್ತರೇ ಆಗಿ, ಕರಪತ್ರವನ್ನು ಮನೆಮನೆಗೆ ಹೋಗಿ ಹಂಚಿ, ನಾವು ಸ್ವಲ್ಪ ಆಲಸಿಗಳಾದರೆ ನಮ್ಮನ್ನೇ ಎಚ್ಚರಿಸುವ ಮಟ್ಟಿಗೆ ಕ್ರಿಯಾಶೀಲವಾಗಿದ್ದು, ನಮ್ಮೂರಿನಲ್ಲಿಯೂ ನಾವು ಸಂಘಟನೆ ಮಾಡುವುದಾಗಿ ಹೇಳಿದ್ದು ಇಡೀ ಜಾಥಾದ ವಿಶೇಷತೆಗಳಲ್ಲೊಂದು. ○



ಸೆಪ್ಟೆಂಬರ್ 9 ರ ರ‍್ಯಾಲಿಗೆ ಪ್ರಕಾಶ್ ಕಾರಟ್

ಕೇಂದ್ರ-ರಾಜ್ಯ ಸರ್ಕಾರಗಳ ಜನದ್ರೋಹಿ ನೀತಿಗಳ ವಿರುದ್ಧ ಸಿಪಿಐ(ಎಂ) ಕರೆ ನೀಡಿರುವ ರಾಷ್ಟ್ರವ್ಯಾಪಿ ರಾಜಕೀಯ ಪ್ರಚಾರಾಂದೋಲನದ ಕರೆಯಂತೆ ಸೆಪ್ಟೆಂಬರ್ 9 ರಂದು ಬೆಂಗಳೂರಿನ ನಡೆಯಲಿರುವ ರಾಜ್ಯ ಮಟ್ಟದ ಬೃಹತ್ ರ‍್ಯಾಲಿಯಲ್ಲಿ ಪೊಲಿಟ್ ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್ ಭಾಗವಹಿಸಿ ಜನತೆಯನ್ನುದ್ದೇಶಿಸಿ ಮಾತನಾಡುವರು. ಅಲ್ಲದೇ ರಾಜ್ಯ ನಾಯಕರು ಮಾತನಾಡಲಿದ್ದಾರೆ. ಈ ರ‍್ಯಾಲಿಯು ಬೆಳಿಗ್ಗೆ 11.30 ಕ್ಕೆ ಸರಿಯಾಗಿ ಮೆಜೆಸ್ಟಿಕ್ ಬಳಿಯ ಚಿಕ್ಕಲಾಲ್‌ಬಾಗ್ ನಿಂದ ಹೊರಟು ಮಲ್ಲೇಶ್ವರಂ ಮೈದಾನ ತಲುಪುವುದು. ಅಲ್ಲಿ ಬೃಹತ್ ಬಹಿರಂಗ ಸಭೆ ನಡೆಯಲಿದೆ.



ಪ್ರತಿಷ್ಠೆ ತಂದ ಅಂಜು ಬಾಬ್ಬಿ ಜಾರ್ಜ್

ಫ್ರಾನ್ಸ್‌ನ ರಾಜಧಾನಿ ಪ್ಯಾರಿಸ್‌ನಲ್ಲಿ ಇತ್ತೀಚೆಗೆ ಮುಕ್ತಾಯಗೊಂಡ ವಿಶ್ವ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಭಾರತದ ಅಂಜು ಬಾಬ್ಬಿ ಜಾರ್ಜ್ ಉದ್ದ ಜಿಗಿತ (ಲಾಂಗ್ ಜಂಪ್) ಸ್ಪರ್ಧೆಯಲ್ಲಿ ಮೂರನೇ ಸ್ಥಾನ ಪಡೆದು ಕಂಚಿನ ಪದಕ ಗಳಿಸಿ ದೇಶಕ್ಕೆ ಕೀರ್ತಿ ತಂದಿದ್ದಾರೆ. ವಿಶ್ವಮಟ್ಟದ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಭಾರತಕ್ಕೆ ಬಂದ ಪ್ರಪ್ರಥಮ ಪದಕ ಇದಾಗಿದೆ.

ಕೇರಳದ ಕೊಟ್ಟಾಯಂ ಜಿಲ್ಲೆಯ ಚಂಗನಶೇರಿಯ ಪುಟ್ಟ ಗ್ರಾಮದಲ್ಲಿ ಜನಿಸಿದ ಅಂಜು ಕಠಿಣ ಪರಿಶ್ರಮದಿಂದ ಹಂತಹಂತವಾಗಿ ಮೇಲೇರಿ ಇಂದು ಜಾಗತಿಕ ಮಟ್ಟದ ಕ್ರೀಡೆಯಲ್ಲಿ ದೇಶಕ್ಕೆ ಹೆಸರು ಗಳಿಸಿಕೊಟ್ಟಿರುತ್ತಾರೆ. ಇಂದು ವಿಶ್ವಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ತೀವ್ರ ಪೈಪೋಟಿ ಇದೆ. ಅಮೆರಿಕಾ, ಯುರೋಪ್, ಸಮಾಜವಾದಿ ಬಣಗಳ ರಾಷ್ಟ್ರಗಳ ಸ್ಪರ್ಧಿಗಳ ನಡುವೆ ಅಂಜು ಬಾಬ್ಬಿ ಜಾರ್ಜ್ ವಿಶ್ವ ಅಥ್ಲೆಟಿಕ್ಸ್ ಕ್ರೀಡಾ ಕೂಟದಲ್ಲಿ ಕಂಚಿನ ಪದಕ ಗಳಿಸಿದ್ದು ವಿಶೇಷ ಸಾಧನೆ. ಕೇರಳದ ಕ್ರೀಡಾ ಪರಿಸರದಲ್ಲಿ ಅರಳಿದ ಈ ಪ್ರತಿಭೆ ಚೆನ್ನೈನಲ್ಲಿ ಕೇಂದ್ರ ಅಬಕಾರಿ ಇಲಾಖೆ ಉದ್ಯೋಗಿ. ಪತಿ ಬಾಬ್ಬಿ ಜಾರ್ಜ್‌ರದು ಕೂಡಾ ಕ್ರೀಡಾ ಕುಟುಂಬ. ಹಿಂದೆ ಕ್ರೀಡಾಪಟುವಾಗಿದ್ದ ಪತಿ ಬಾಬ್ಬಿ ಜಾರ್ಜ್ ಇಂದು ಪತ್ನಿಯ ತರಬೇತುದಾರ ಕೂಡಾ.



ಕಳೆದ ಕಾಮನ್‌ವೆಲ್ತ್ ಕ್ರೀಡಾ ಕೂಟ ಹಾಗೂ ಏಷ್ಯನ್ ಕ್ರೀಡಾಕೂಟದಲ್ಲಿ ಉದ್ದ ಜಿಗಿತದ... ಚಿನ್ನದ ಪದಕ ಗಳಿಸಿದ್ದ ಅಂಜು ಬಾಬ್ಬಿ ಜಾ... ಕಳೆದ ಒಂದು ವರ್ಷದಿಂದ ಅಮೇರಿಕಾದಲ್ಲಿ ... ಜಿಗಿತದಲ್ಲಿ ಜಾಗತಿಕ ದಾಖಲೆಗಾರ ಮೈ... ಪಾವೆಲ್ ಬಳಿಯಲ್ಲಿ ತರಬೇತಿ ಪಡೆಯುತ್ತಿದ್ದಾ... (ವಾರ್ಷಿಕ ವೆಚ್ಚ ಸುಮಾರು 9 ಲಕ್ಷ ರೂಪಾ...) ಕಳೆದ ಹಲವಾರು ತಿಂಗಳುಗಳಿಂದ ಯುರೋ... ಖಂಡದ ವೃತ್ತಿಪರ ಕ್ರೀಡಾಕೂಟಗಳಲ್ಲಿ ಅ... ಕಷ್ಟಗಳ ನಡುವೆ ಭಾಗವಹಿಸಿ ವಿಶ್ವ ಮಟ್ಟ... ಸ್ಪರ್ಧಾ ಅನುಭವ ಗಳಿಸಿದ್ದ ಬಾಬ್ಬಿ ಜಾ... ಪ್ಯಾರಿಸ್‌ನಲ್ಲಿ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೆ ಹೆ... ತಂದದ್ದು ಅಪ್ರತಿಮ ಸಾಧನೆ. ಈ ಹಿ... ಪಿ.ಟಿ.ಉಷಾ 1984 ರಲ್ಲಿ ಲಾಸ್‌ಎಂಜಲೀಸ್... ಒಲಂಪಿಕ್ಸ್‌ನ 400 ಮೀಟರ್ ಹರ್ಡಲ್ಸ್ ಓಟ... ಹಾಗೂ 1960 ರ ರೋಂ ಒಲಂಪಿಕ್ಸ್... ಹಾರುವ ಸಿಖ್ ಎಂದು ಹೆಸರು ಗಳಿಸಿದ್ದ ಮಿ... ಸಿಂಗ್ 400 ಮಿ. ಓಟದಲ್ಲಿ ಹಾಗೂ 196... ಟೋಕಿಯೋ ಒಲಂಪಿಕ್ಸ್‌ನಲ್ಲಿ ಗ... ಬಚನ್‌ಸಿಂಗ್ ರಾಂದವಾ ಗಳಿಸಿದ್ದ 4ನೇ ಸ್ಥಾನ... ಇತ್ತೀಚಿನವರೆಗೆ ವಿಶ್ವಮಟ್ಟದ ಕ್ರೀಡಾ ಸ್ಪರ್ಧೆ... ಭಾರತದ ಅತ್ಯುತ್ತಮ ಸಾಧನೆಯಾಗಿತ್ತು... ಎಲ್ಲರನ್ನೂ ಮೀರಿ ನಿಂತಿದೆ ಅಂಜು ಬಾ... ಜಾರ್ಜ್‌ಳ ಸಾಧನೆ. ಮುಂಬರುವ ಅಥ... ಒಲಂಪಿಕ್ಸ್‌ನಲ್ಲಿ ಪ್ರಥಮ ಒಲಂಪಿಕ್ಸ್ ಅಥ್ಲೆ... ಪದಕಗಳಿಸುವ ಭಾರತೀಯಳಾಗುವ ದಿಶೆ... ಅಂಜು ಬಾಬ್ಬಿ ಜಾರ್ಜ್‌ಗೆ ಈ ಕಂಚಿನ ... ಸ್ಫೂರ್ತಿಯಾಗಿದೆ.

■ ಮಲ್ಕಿಯೋರ್.ಆರ...

ಅಂತರ್ರಾಷ್ಟ್ರೀಯ ಮಟ್ಟದ ಕ್ರೀಡೆಯಲ್ಲಿ ಕೇರಳದ ಮಹಿಳೆಯರ ಅಪ್ರತಿಮ ಸಾಧನೆ

ಕ್ರೀಡೆಯಲ್ಲಿ ದೇಶಕ್ಕೆ ಕೀರ್ತಿ ತಂದವರಲ್ಲಿ ಕೇರಳದ ಮಹಿಳೆಯರ ಸಾಧನೆ ಅಪ್ರತಿಮ ಹಾಗೂ ಸಂಖ್ಯೆ ಕೂಡಾ ಅತಿ ಹೆಚ್ಚು. ವಿಶ್ವಮಟ್ಟದ ಕ್ರೀಡೆಯಲ್ಲಿ ಸಮಾಜವಾದಿ ರಾಷ್ಟ್ರಗಳ ಸಾಧನೆ ವಿಶೇಷ. ಇದೇ ರೀತಿಯಲ್ಲಿ ಭಾರತದಲ್ಲಿ ಸಮಾಜವಾದಿ ಚಳುವಳಿ ಬಲಿಷ್ಠವಾಗಿರುವ ಕೇರಳ ರಾಜ್ಯದ ಮಹಿಳಾ ಕ್ರೀಡಾಪಟುಗಳು ಅಂತರ್ರಾಷ್ಟ್ರೀಯ ಮಟ್ಟದಲ್ಲಿ ದೇಶಕ್ಕೆ ಕೀರ್ತಿ ತಂದವರಲ್ಲಿ ಹೆಸರುವಾಸಿ ಯಾಗಿದ್ದಾರೆ ಮಾತ್ರವಲ್ಲ ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಚಿನ್ನದ ಬಾಲೆ ಎಂಬ ಖ್ಯಾತಿವೆತ್ತ ಪಿ.ಟಿ.ಉಷಾ, ಶೈನಿ ಅಬ್ರಹಂ, ಎಂ.ಜಿ. ವಲ್ಸಮ್ಮ, ಕೆ.ಎಂ. ಬೀನಾಮೋಲ್, ಬಾಬ್ಬಿ ಅಲಾಷಿಯಸ್ ಇದೀಗ ಅಂಜು ಬಾಬ್ಬಿ ಜಾರ್ಜ್ ಎಲ್ಲರೂ ಕೇರಳದವರು. ಸಮಾಜವಾದಿ ಚಳುವಳಿ ಬೆಳೆದುಬಂದ ಕೇರಳದಲ್ಲಿ ಎಲ್ಲರಿಗೂ ಸಮಾನ ವಿದ್ಯಾಭ್ಯಾಸದ ಅವಕಾಶದ ಜೊತೆ ಕ್ರೀಡೆಯಲ್ಲಿ ಭಾಗವಹಿಸುವ ಅವಕಾಶ ಕೂಡ ಹೇರಳ. ಸೌಲಭ್ಯಗಳೂ ಅಧಿಕ. ಇಂದು ಭಾರತೀಯ ಕ್ರೀಡಾ ಪ್ರಾಧಿಕಾರ ಪ್ರಾರಂಭಿಸಿರುವ ಕ್ರೀಡಾ ಹಾಸ್ಟೆಲ್‌ಗಳು, ಕ್ರೀಡಾ ಕಾಲೇಜುಗಳು ಆರಂಭವಾಗುವ ಮೊದಲೇ ಕೇರಳದಲ್ಲಿ ಕ್ರೀಡಾ ಕಾಲೇಜುಗಳು ಹಾಗೂ ಕ್ರೀಡಾ ಹಾಸ್ಟೆಲ್‌ಗಳು ಅಸ್ತಿತ್ವಕ್ಕೆ ಬಂದು ಜನ ಸಾಮಾನ್ಯರಿಗೆಲ್ಲಾ ಕ್ರೀಡೆಯಲ್ಲಿ ಭಾಗವಹಿಸುವ ಅವಕಾಶ ಹಾಗೂ ಸೌಲಭ್ಯ ಹೇರಳವಾಗಿತ್ತು. ಕೇರಳದ ಜಿ.ವಿ.ರಾಜಾ ಸ್ಪೋರ್ಟ್ಸ್ ಕಾಲೇಜು ಪ್ರಸಿದ್ಧ ಹೆಸರು. ಈ ಸಮಾನ ಅವಕಾಶ ಹಾಗೂ ಸೌಲಭ್ಯಗಳ ಕ್ರೀಡಾ ಪರಿಸರದಲ್ಲಿ ಅನೇಕ ಅಂತರ್ರಾಷ್ಟ್ರೀಯ ಕ್ರೀಡಾ ಪ್ರತಿಭೆಗಳು ಅರಳಿ ಬಂದಿವೆ. ವ್ಯವಸ್ಥೆಯ ಬದಲಾವಣೆಯೊಂದಿಗೆ ಭಾರತ ಕ್ರೀಡೆಯ ಯಶಸ್ಸಿನಲ್ಲಿ ಕೂಡಾ ಬದಲಾವಣೆ ಕಾಣಬಹುದಾಗಿದೆ.

ಸ್ವಂತಿಕೆ, ನೈಜತೆಯಿಲ್ಲದ 'ನಂಜುಂಡಿ'

ಸಿನಿಮಾ

ಇತರ ಸಿನಿಮಾಗಳನ್ನು ನೋಡಿ ಅವುಗಳಲ್ಲಿನ ಕೆಲವು ತುಣುಕುಗಳನ್ನು ಸೇರಿಸಿ ಇನ್ನೊಂದು ಚಿತ್ರ ತಯಾರಿಸುವುದರಲ್ಲಿ ನಮ್ಮವರು ನಿಸ್ಸೀಮರು. ತಮಿಳು ಚಿತ್ರಗಳ ಕೆಲವು ಅಂಶಗಳು, ಹಿಂದಿಯ 'ಲಗಾನ್' ಚಿತ್ರದ ಮುಕ್ಕಾಲಂಶ ಮತ್ತು ಇದ್ದಾವುದು ಸಾಲದೆಂಬಂತೆ ಕನ್ನಡದ ಹಳೆಯ ಚಿತ್ರಗಳು ಅದರಲ್ಲೂ ಬಂಗಾರದ ಮನುಷ್ಯ, ಕಾಮನಬಿಲ್ಲು ಚಿತ್ರಗಳ ಸಾರಾಂಶವನ್ನು ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ 'ರಿಮಿಕ್ಸ್' ಮಾಡಿದ ಚಿತ್ರವೇ 'ನಂಜುಂಡಿ'. ಈ ಚಿತ್ರವನ್ನು ನೋಡುವಾಗ ಇನ್ನೂ ಇತರ ಅನೇಕ ಚಿತ್ರಗಳ ದೃಶ್ಯಗಳು ಕಣ್ಮುಂದೆ ಸುಳಿಯುತ್ತವೆ.

ಚಿತ್ರದಲ್ಲಿ ಕಥೆಯೆಂಬುದೇ ಇಲ್ಲ. ತಮಗೆ ಮೆಚ್ಚಿಗೆಯಾದ ಒಂದೊಂದೇ ದೃಶ್ಯಗಳನ್ನು ಜೋಡಿಸುತ್ತಾ ಹೋಗಿದ್ದಾರೆ ನಿರ್ದೇಶಕರು. ಇದರಲ್ಲಿ ಎಂದಿನಂತೆ 'ಪುಟ್ನಂಜ'ದಲ್ಲಿನ ಪುಟ್ಮಲ್ಲಿ ಪಾತ್ರದ ಗೆಟಪ್‌ನಲ್ಲಿಯೇ ಉಮಾಶ್ರೀ ಅಭಿನಯವಿದೆ. ಈಗಾಗಲೇ ಹಲವಾರು ಚಿತ್ರಗಳಲ್ಲಿ ಇದೇ ಗೆಟಪ್‌ನಿಂದ ಕಾಣಿಸಿ ಕೊಂಡಿರುವುದರಿಂದ ಇದರಲ್ಲೇನು ಹೊಸತನವಿಲ್ಲ. 'ರಾಮಚಾರಿ'ಯಂತೆ ಶುಭ ಸಮಾರಂಭಗಳಲ್ಲಿ ಹಾಡುವುದೇ ನಾಯಕನ ಕಾಯಕ, ಸಾಲದೆಂದು 'ಕಾಮನಬಿಲ್ಲು'ವಿನಂತೆ ನಾಟಿ ವೈದ್ಯ, ಊರಿನ ಉದ್ದಾರಕ್ಕೆ ಟೊಂಕಕಟ್ಟಿ ನಿಂತ 'ಬಂಗಾರದ ಮನುಷ್ಯ'. ಸಿರಿವಂತಿಕೆಯ ದುರಹಂಕಾರಿ ನಾಯಕಿಯ ಜೊತೆ ಮಾತು ಬಾರದ ಮೂಕ ನಾಯಕಿಯೂ ಇದ್ದಾಳೆ. ಚಿತ್ರದಲ್ಲಿ ಬರದ ಕಥೆಯೂ ಇದೆ, ರೈತರ ಆತ್ಮಹತ್ಯೆ ಕಥೆಯೂ ಇದೆ. ನೀರಾವರಿ ಯೋಜನೆಗಾಗಿ ಪರವೂರಿನೊಂದಿಗೆ ಸ್ಪರ್ಧೆಗೂ ಇಳಿಯುತ್ತಾರೆ. ಅಲ್ಪ ಬದಲಾವಣೆಯೊಂದಿಗೆ 'ಲಗಾನ್' ಚಿತ್ರವನ್ನು ಮಕ್ಕಿಕಾಮಕ್ಕಿ ಭಟ್ಟಿ ಇಳಿಸಲಾಗಿದೆ! ಇವೆಲ್ಲದರ ರೂವಾರಿಯಾದ ನಾಯಕನ ಸುಳ್ಳಿನ ಆಪಾದನೆ, ಊರಿನಿಂದ ಗಡಿಪಾರು! ನೊಂದು-ಬೆಂದು ಊರು ಬಿಡುತ್ತಾನೆ. ಬಿಡುವಾಗಲೂ ಜಾತಿ-ಧರ್ಮವನ್ನು ಮೆಟ್ಟಿ ನಿಲ್ಲುತ್ತಾನೆ, ಪರಜಾತಿಯವಳಾದ ಮೂಕಿಯನ್ನೂ ತನ್ನೊಂದಿಗೆ ಕರೆದೊಯ್ಯುತ್ತಾನೆ. ಇದು



ನಂಜುಂಡಿ ಚಿತ್ರದಲ್ಲಿ ಬರುವ ದೃಶ್ಯಗಳು. ಒಟ್ಟು ಕಥೆಯೇನೆಂಬುದನ್ನು ನೀವೇ ಅರ್ಥ ಮಾಡಿಕೊಳ್ಳಬೇಕು! ಇಲ್ಲಿ ಯಾರೂ ಅನಿವಾರ್ಯವಲ್ಲ, ಹಾಗಾಗಿ ಯಾವ ಪಾತ್ರವಿಲ್ಲದಿದ್ದರೂ ಚಿತ್ರಕ್ಕೆ ತೊಡಕಾಗುವುದಿಲ್ಲ!


ಗ್ರಾಮೀಣ ಹಿನ್ನೆಲೆಯ ಅನುಭವವಿಲ್ಲದೆ, ನೈಜತೆಗೆ ಸ್ವಲ್ಪವೂ ಗಮನ ಕೊಡದ, ಸ್ವಂತಿಕೆಯಿಲ್ಲದ ಕೆಟ್ಟ ಚಿತ್ರ ನಂಜುಂಡಿ. ಉಮಾಶ್ರೀ ಮತ್ತು ಇನ್ನೊಂದಿಬ್ಬರನ್ನು ಹೊರತುಪಡಿಸಿ ಉಳಿದ ಯಾರ ಬಾಯಲ್ಲೂ ಗ್ರಾಮ್ಯ ಭಾಷೆಯ ಸೊಗಡಿಲ್ಲ, ನಾಯಕನೂ ಸೇರಿ. ನಿರ್ದೇಶಕ ಮಹಾಶಯರು ಈ ಚಿತ್ರಕ್ಕೆ ಯಾವ ಯಾವ ಚಿತ್ರಗಳನ್ನು 'ರೆಫರ್' ಮಾಡಿದ್ದಾರೆಂದು ತಿಳಿಸಿದ್ದಿದ್ದರೆ, ಆ ಚಿತ್ರಗಳನ್ನು ನೋಡಿದವರು ಈ ಚಿತ್ರವನ್ನ ನೋಡುವ ಅಗತ್ಯವೇ ಬೀಳುತ್ತಿರಲಿಲ್ಲ! ಅವರ 'ಬಯಲುಸೀಮೆಯ ಕಂಬಳ'ದ ಕಲ್ಪನೆಯಂತೂ ಅದ್ಭುತ! ಬರಗಾಲದಿಂದ ತತ್ತರಿಸಿ, ನೀರಿಗಾಗಿ ಪರದಾಡುತ್ತಿರುವಾಗ 'ಕಂಬಳ'ದ ಆಟವಂತೆ! ನಿರ್ದೇಶಕ ಜೋಡಿ ಆರ್.ಎಸ್. ಬ್ರದರ್ಸ್‌ಗೆ ಭಲೇ ಎನ್ನಲೇಬೇಕು.

ಇನ್ನು ಕನ್ನಡ ಚಿತ್ರರಂಗದ, ಸಂಗೀತಲೋಕದ 'ಅಕ್ಷಯ ಪಾತ್ರೆ' ಹಂಸಲೇಖರು ವೃಷ್ಟಾನ್ನದ ಕಲ್ಪನೆಯಿಂದ ಈ ಚಿತ್ರ ನೋಡಿದವರಿಗೆ ಹಳಸಲು ಅನ್ನವನ್ನು ಬಾಯಿಗೆ ಗಿಡವಿದ್ದಾರೆ. ಅಕ್ಷಯ ಪಾತ್ರೆ 'ತಂಗಳ ಮಡಕೆ'ಯಾಗಿದೆ!

ಸೋತು ಸುಣ್ಣವಾಗಿರುವ ನಿರ್ಮಾಪಕ ರಾಮುಗೆ ಇನ್ನು ಈ ಚಿತ್ರದಿಂದ ಯಾವ ಗತಿ ಕಾದಿದೆಯೋ?

ಎಂ.ರಾಮು

ಹಣತೆಗಳು....



ಒಂದಲ್ಲ - ಎರಡಲ್ಲ ಇಪ್ಪತ್ತಾರು ದೀಪಗಳ
ಒಂದೊಂದಾಗಿ ಹಚ್ಚಿಟ್ಟೆ ನಾನಿಂದು
ಒಂದು ಹಣತೆ, ಸ್ವಾತಂತ್ರ್ಯದ ಹೆಸರಿಗೆ
ಅದು ಉರಿಯುವ ತುಟಿಗಳಿಂದುಸುರಿತು
ಯಾವ ದೇಶದಿಂದಲಾದರೂ ಗೋಧಿಯ ಬೇಡಿಕೊ...
ಭಿಕ್ಷೆ ಬೇಡುವ ಸರ್ವ ಸ್ವಾತಂತ್ರ್ಯವಿದೆ ನಿಮಗೆ
ಒಂದು ಹಣತೆ, ಸಮೃದ್ಧಿಯ ಹೆಸರಿಗೆ,
ಅದು ಹೊತ್ತಿಕೊಳ್ಳುತ್ತಲೇ ತಿಳಿಯಿತು
ಇಲ್ಲಿಯ ದುರಂತ ವಾಸ್ತವ
ನನ್ನ ಹೊಟ್ಟೆ ಖಾಲಿ ಇದೆ, ಜೊತೆಗೆ ಜೇಬೂ ಖಾ...
ಇನ್ನೊಂದು ದೀಪ, ಭಾವೈಕ್ಯದ ಹೆಸರಿಗೆ
ಅದರ ಬೆಳಕು ಎಲ್ಲಿಯವರೆಗೆ ಹರಡಿತೋ
ಅಲ್ಲೆಲ್ಲ ಪ್ರತಿ-ಕೋಮಿನವರ ವಿರಸವೇ ತುಂಬಿತ್ತು
ತಾಯ ಸೆರಗಲ್ಲಿ ಎಷ್ಟೊಂದು ಬಿರುಕು
ಎಲ್ಲರ ಬದುಕುಗಳು ಒಟ್ಟಿಗೇ ಭಾಗವಾಗುವುದ ಕಂ...
ದೂರದಿಂದಲೇ ಹೆಂಡತಿ, ಚೀರಿ ಹೇಳಿದಳು
ಎಣ್ಣೆ ದುಬಾರಿಯಿದೆ, ಸಿಕ್ಕುವುದೂ ಇಲ್ಲ
ಇಷ್ಟೊಂದು ದೀಪಗಳ ಯಾಕೆ ಉರಿಸುತ್ತೀರಿ?
ನಮ್ಮ ಮನೆಯೊಳಗೆ ಕೈಸಾಲೆ-ವರಂಡಗಳಿಲ್ಲ
ವ್ಯರ್ಥ ಕನಸಿನ ದೀಪ ಹಚ್ಚಿ ಕೂತಿದ್ದೀರಿ!
ಹೀಗೊಂದು ಕೋಪದ ಗಾಳಿ-ಅಲೆ ಬೀಸಿ
ಒಂದೊಂದು ದೀಪಗಳು ಆರುತ್ತ ನಡೆದವು
ಆದರೊಂದು ಹಣತೆ, ಇನ್ನೂ ಬೆಳಗುತ್ತಲೆ ಇದೆ
ಅದರ ಹೆಸರು ಭರವಸೆ

- ಮೂಲ: ಕೈಫಿ ಆ...
ಕನ್ನಡಕ್ಕೆ : ವಿ...

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕರಾಜ್ಯಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH